ಶಿಕ್ಷಣದಿಂದ ಶ್ರೇಷ್ಠತೆ

**ಎಸ್‌ಬಿಆರ್‌ಆರ್ ಮಹಾಜನ ಪ್ರಥಮದರ್ಜೆ ಕಾಲೇಜು (ಸ್ವಾಯತ್ತ)**

ಜಯಲಕ್ಷ್ಮೀಪುರಂ, ಮೈಸೂರು-12

ಶ್ರೇಷ್ಠತೆಯ ಸಾಮರ್ಥ್ಯವುಳ್ಳ ಕಾಲೇಜು

**ಇತಿಹಾಸ ವಿಭಾಗ**

**Dept. of History**

**ಮೈಸೂರು ವಿಶ್ವವಿದ್ಯಾನಿಲಯದಿಂದ ಸಂಯೋಜನೆಗೊಂಡು, ನ್ಯಾಕ್‌ನಿಂದ 'ಎ' ಮಾನ್ಯತೆ ಪಡೆದಿದೆ.**




**ಸಂಚಿಕೆ: 46 ಜನವರಿ 2025** | **ಪ್ರಧಾನ ಸಂಪಾದಕರು: ಡಾ. ಬಿ.ಆರ್. ಜಯಕುಮಾರಿ, ಪ್ರಾಂಶುಪಾಲರು** | **www.mahajana.edu.in** | **ಸಂಪಾದಕರು: ಡಾ. ಶ್ರೀಧರ ಹೆಚ್, ಇತಿಹಾಸ ವಿಭಾಗ** | **ಪುಟಗಳು: 8**



## ಸಂಪಾದಕೀಯ

# ರಾಷ್ಟ್ರೀಯ ಏಕತಾ ಸಂಸ್ಮರಣೆಯಲ್ಲಿ ಉಕ್ಕಿನ ಮನುಷ್ಯ ಸರ್ದಾರ್ ವಲ್ಲಭಭಾಯ್ ಪಟೇಲರು



ಸ್ವಾತಂತ್ರ್ಯ ಪೂರ್ವದಲ್ಲಿ ಹರಿದು ಹಂಚಿಹೋಗಿದ್ದ ಪ್ರಾಂತ್ಯಗಳನ್ನು ಒಗ್ಗೂಡಿಸಿ, ಏಕೀಕರಣ ಪರಿಕಲ್ಪನೆಗೆ ನಾಂದಿ ಹಾಡಿದವರು ಪಟೇಲ್. ಭಾರತದ ಸ್ವಾತಂತ್ರ್ಯ ಚಳುವಳಿಯಲ್ಲಿ ಪ್ರಮುಖ ನಾಯಕರಾಗಿದ್ದ ವಲ್ಲಭಭಾಯಿ ಪಟೇಲ್‌ರವರು ಭಾರತದ ಮೊದಲ ಉಪಮುಖ್ಯಮಂತ್ರಿಯಾಗಿದ್ದರು.

ಇಂದು (ಅ.31) ಅವರ 146ನೇ ಜನ್ಮದಿನ. ಆಧುನಿಕ ಭಾರತಕ್ಕೆ ಅವರು ನೀಡಿದ ಕೊಡುಗೆಯನ್ನು ಸ್ಮರಿಸುವುದಕ್ಕಾಗಿ ಅವರ ಅವರ ಜನ್ಮದಿನವನ್ನು 'ರಾಷ್ಟ್ರೀಯ ಏಕತಾ ದಿನ'ವನ್ನಾಗಿ ಆಚರಿಸಲಾಗುತ್ತಿದೆ.

ಅಕ್ಟೋಬರ್ 11, 1875 ರಂದು ಗುಜರಾತಿನ ನಡಿಯಾದ್‌ನಲ್ಲಿ ಜನಿಸಿದ ಪಟೇಲರ ತಂದೆ ಝುವೇರಭಾಯ್ ಪಟೇಲ್ ಮತ್ತು ಲಾಡ್‌ಬಾ. ಖೇಡ ಜಿಲ್ಲೆಯ ಕರಮಸಾಡ್ ಎಂಬ ಹಳ್ಳಿಯ ನಿವಾಸಿಗಳಾದ ಝುವೇರಭಾಯ್ ಮತ್ತು ಲಾಡಬ ಇವರ ನಾಲ್ಕನೆಯ ಮಗನಾಗಿ ಜನಿಸಿದ ವಲ್ಲಭಭಾಯಿಯ ಹುಟ್ಟಿದ ದಿನ ಮುಂದೆ ಅವರು ಮ್ಯಾಟ್ರಿಕ್ ಪರೀಕ್ಷೆಯಲ್ಲಿ ಅಕ್ಟೋಬರ್ 11 ಎಂದು ನಮೂದಿಸಿದರೂ ನಿಖರವಾಗಿ ದಾಖಲಾಗಿಲ್ಲ. ಪಟೇಲರಿಗೆ ಜವೇರ್‌ಬೆನ್ ನೊಂದಿಗೆ ಚಿಕ್ಕವಯಸ್ಸಿನಲ್ಲಿಯೇ ಮದುವೆಯಾಗಿತ್ತು. ಅವರಿಗೆ ಇಬ್ಬರು ಮಕ್ಕಳಾದರು. 1904ರಲ್ಲಿ ಮಣಿ ಎಂಬ ಮಗಳು ಮತ್ತು 1806 ರಲ್ಲಿ ದಹ್ಯಾ ಎಂಬ ಮಗ, ತಮ್ಮ 36ನೆಯ ವಯಸ್ಸಿನಲ್ಲಿ ಇಂಗ್ಲೆಂಡ್ ಪ್ರಯಾಣ ಬೆಳೆಸಿದ ವಲ್ಲಭಬಾಯ್ ಲಂಡನ್ನಿನ ಮಿಡ್ಲ್ ಟೆಂಪಲ್ ಇನ್‌ನಲ್ಲಿ ಪ್ರವೇಶ ಪಡೆದುಕೊಂಡರು. ಮೂವತ್ತಾರು ತಿಂಗಳುಗಳ ಕೋರ್ಸನ್ನು ಮೂವತ್ತೇ ತಿಂಗಳಲ್ಲಿ ಮುಗಿಸಿ, ಕಾಲೇಜು ವಿದ್ಯಾಭ್ಯಾಸದ ಯಾವುದೇ ಹಿನ್ನೆಲೆ ಇಲ್ಲದಿದ್ದರೂ, ತರಗತಿಗೆ ಪ್ರಥಮರಾಗಿ ಉತ್ತೀರ್ಣರಾದರು. ಅಲ್ಲಿಂದ ಹಿಂತಿರುಗಿ ಅಹಮದಾಬಾದಿನಲ್ಲಿ ನೆಲೆನಿಂತು ಅಲ್ಲಿ ಅಗ್ರಮಾನ್ಯ ಬ್ಯಾರಿಸ್ಟರುಗಳಲ್ಲಿ ಒಬ್ಬರೆಂದು ಹೆಸರಾದರು.

### ಸ್ವಾತಂತ್ರ್ಯ ಹೋರಾಟದಲ್ಲಿ ಭಾಗಿ

ವಕೀಲ ವೃತ್ತಿಯಲ್ಲಿ ಸಾಕಷ್ಟು ಹೆಸರು ಗಳಿಸಿದ್ದರೂ ಪಟೇಲರನ್ನು ಸೆಳೆದಿದ್ದು ಸ್ವಾತಂತ್ರ್ಯ ಹೋರಾಟ. 1918 ರಲ್ಲಿ ತಮ್ಮ ಚೆನ್ನಾಗಿ ನಡೆಯುತ್ತಿದ್ದ ತಮ್ಮ ವಕೀಲಿ ವೃತ್ತಿ, ಅದರ ಘನತೆ, ಗೌರವ, ದೊಡ್ಡ ಮನೆ, ಸಂಪತ್ತು ಎಲ್ಲವನ್ನು ತ್ಯಜಿಸಿ ಸ್ವಾತಂತ್ರ್ಯ ಹೋರಾಟದ ಸರಳ ಜೀವನ, ಕಷ್ಟಕಾರ್ಪಣ್ಯಗಳಿಗೆ ತಮ್ಮನ್ನು ಅರ್ಪಿಸಿಕೊಂಡರು. ಗಾಂಧೀಜಿಯವರ ಚಂಪಾರಣ್ಯದ ಸತ್ಯಾಗ್ರಹದ ನಂತರ ಗಾಂಧಿಯವರು ಭಾರತೀಯ ಮೌಲ್ಯಗಳಲ್ಲಿಟ್ಟಿದ್ದ ಶ್ರದ್ಧೆ, ಅತಿ ಸರಳ ಜೀವನ ಇವುಗಳಿಂದ ಆಕರ್ಷಿತರಾದ ಪಟೇಲರು ಗಾಂಧಿಯವರ ಆಪ್ತರಾದರು.

### ಸಾಮಾಜಿಕ ಹೋರಾಟಗಳು

1919 ರಿಂದ 1928ರವರೆಗೆ ಪಟೇಲರು ಅಸ್ಪೃಶ್ಯತೆ, ಮದ್ಯಪಾನ, ಬಡತನ ಹಾಗೂ ಅಜ್ಞಾನದ ವಿರುದ್ಧ ವ್ಯಾಪಕ ಚಳುವಳಿ ನಡೆಸಿದರು. 1922 ರಲ್ಲಿ ಅಹಮದಾಬಾದಿನ ಮುನಿಸಿಪಾಲಿಟಿ ಅಧ್ಯಕ್ಷರಾಗಿ ಚುನಾಯಿತರಾದರು.

1928ರಲ್ಲಿ ಬಾರ್ಡೋಲಿಯು ದುರವಸ್ಥೆಗೀಡಾಯಿತು. ಗುಜರಾತಿನ ಬಹುತೇಕ ಭಾಗಗಳು ಕ್ಷಾಮದಿಂದ ತತ್ತರಿಸುವುದರೊಂದಿಗೆ, ಸರಕಾರ ಕಂದಾಯವನ್ನು ಹೆಚ್ಚು ಮಾಡಿತು. ಇದರ ವಿರುದ್ಧವಾಗಿ ಪಟೇಲರು ಜನಸಮೂಹವನ್ನು ಒಟ್ಟುಗೂಡಿಸಿ

**ಪು.ತಿ.ನೋ.**

ನಡೆಸಿದ ಪ್ರತಿಭಟನೆ ದೇಶದಲೆಲ್ಲ ಹೆಸರು ಮಾಡಿತು. ಬಾರ್ಡೋಲಿಯ ಸತ್ಯಾಗ್ರಹದಿಂದ ಪಟೇಲರಿಗೆ ಸರದಾರ್ ಎಂಬ ಬಿರುದು ಪ್ರಾಪ್ತವಾಯಿತು. ಗುಜರಾತಿನ ಲಕ್ಷಾಂತರ ಜನರಿಗೆ ಪಟೇಲರು ಆರಾಧ್ಯ ದೈವವಾದರು.

**ಭಾರತದ ರಾಜಕೀಯ ಏಕೀಕರಣ**

565 ಅರೆ–ಸ್ವತಂತ್ರ ಸಂಸ್ಥಾನಗಳಲ್ಲಿ ಹಂಚಿಹೋಗಿದ್ದ ಭಾರತವನ್ನು ಒಗ್ಗೂಡಿಸುವ ಮಹತ್ಕಾರ್ಯಕ್ಕೆ ಪಟೇಲರೆ ಸೂಕ್ತ ವ್ಯಕ್ತಿ ಎಂದು ಹಿರಿಯ ಬ್ರಿಟಿಷ್ ಅಧಿಕಾರಿಗಳ ಒಮ್ಮತದ ಅಭಿಪ್ರಾಯವಾಗಿತ್ತು. "ರಾಜ್ಯಗಳ ಈ ಸಮಸ್ಯೆ ಎಷ್ಟು ಸಂಕೀರ್ಣವಾಗಿದೆಯೆಂದರೆ ನೀವೊಬ್ಬರೇ ಅದನ್ನು ಬಗೆಹರಿಸಲು ಸಮರ್ಥರು" ಎಂದು ಗಾಂಧೀಜಿ ಕೂಡ ಪಟೇಲರಿಗೆ ಹೇಳಿದ್ದರು. ಈ ಗುರುತರ ಕಾರ್ಯವನ್ನು ಯಶಸ್ವಿಯಾಗಿ ಕೈಗೂಡಿಸುವ ಮನಃಸ್ಥೈರ್ಯ, ಚಾಣಾಕ್ಷತನ ಹಾಗೂ ಅಚಲತೆ ಇದ್ದವರಾದ ಪಟೇಲರು, ಹಿತಕ್ಕಾಗಿ, ಸಂಸ್ಥಾನಿಕರೊಂದಿಗೆ ಸಂಧಾನ ನಡೆಸಲು ಬೇಕಾದ ಅನುಭವವನ್ನೂ, ಮುತ್ಸದ್ಧಿತನವನ್ನೂ ಪಡೆದುಕೊಂಡಿದ್ದರು. 1947ರ ಮೇ 4 ರಂದು ಪಟೇಲರು ರಾಜರುಗಳ ಜೊತೆ ವಿಲೀನದ ಮಾತುಕತೆ ಪ್ರಾರಂಭಿಸಿದರು. ಈ ಮಾತುಕತೆಯ ಉದ್ದೇಶ ಈ ರಾಜನು ಭವಿಷ್ಯದ ಭಾರತ ಸರ್ಕಾರದೊಂದಿಗೆ ಸಹಕಾರ ಕೊಡುವುದಕ್ಕೂ ಹಾಗೂ ಮುಂದೆ ಉಂಟಾಗಬಹುದಾದ ಘರ್ಷಣೆಗಳನ್ನು ಮೊಳಕೆಯಲ್ಲಿ ಚಿವುಟಿಹಾಕುವುದಾಗಿತ್ತು. ಸಂಸ್ಥಾನಿಕ ರಾಜರುಗಳನ್ನು ತಮ್ಮ ಮನೆಗೆ ಆಹ್ವಾನಿಸಿ ಭೋಜನ ಸತ್ಕಾರ ಏರ್ಪಡಿಸಿದ ಪಟೇಲರು, 1947 ಆಗಸ್ಟ್ 15ರ ಒಳಗೆ ಭಾರತದಲ್ಲಿ ವಿಲೀನವಾಗದಂತೆ ಅವರನ್ನು ಆಗ್ರಹಿಸಿದರು.

ತಮ್ಮ ಪ್ರಜೆಗಳ ಭವಿಷ್ಯದ ಹಿತಕ್ಕಾಗಿ ರಾಜ್ಯವನ್ನು ಭಾರತಕ್ಕೆ ಬಿಟ್ಟುಕೊಡುವಂತೆಯೂ, ಭಾರತದಿಂದ ಸ್ವತಂತ್ರವಾಗಿ ರಾಜ್ಯಭಾರ ಮಾಡುವುದರ, ಅದರಲ್ಲೂ ಮುಖ್ಯವಾಗಿ ಹೆಚ್ಚುತ್ತಿದ್ದ ಪ್ರತಿಭಟನೆಯ ವಿರುದ್ಧ ನಿರರ್ಥಕತೆಯನ್ನು ಈ 565 ರಾಜರುಗಳಿಗೆ ಮನದಟ್ಟು ಮಾಡಿಕೊಟ್ಟರು. ವಿಲೀನವಾದವರ ಪೀಳಿಗೆಯವರಿಗೆ ರಾಜಧನದ ಆಶ್ವಾಸನೆಯನ್ನೂ ಅವರು ನೀಡಿದರು. ಬರಿಯ ಕೇವಲ ಮೂರು ಕಾಶ್ಮೀರ, ಹೈದರಾಬಾದ್ ಹಾಗೂ ಜುನಾಪುರ ರಾಜ್ಯಗಳನ್ನು ಹೊರತುಪಡಿಸಿ ಬಾಕಿ ಎಲ್ಲಾ ಸಂಸ್ಥಾನಗಳು ವಿಲೀನಕ್ಕೆ ಒಪ್ಪಿದವು.

**ಜುನಾಘಡ ವಿಲೀನ**

ತಮ್ಮ ಸ್ವಂತ ರಾಜ್ಯ ಗುಜರಾತಿನಲ್ಲಿದ್ದ ಜುನಾಘಡ ಸಂಸ್ಥಾನ ಪಟೇಲರಿಗೆ ಸಹಜವಾಗಿಯೇ ಮಹತ್ವವಾಗಿತ್ತು. ಜುನಾಘಡ ಪಾಕಿಸ್ತಾನದಿಂದ ಸಾಕಷ್ಟು ದೂರವಿದ್ದದಷ್ಟೇ ಅಲ್ಲ, ಅಲ್ಲಿಯ ಜನಸಂಖ್ಯೆಯ ಶೇಕಡಾ 10 ಹಿಂದೂಗಳಾಗಿದ್ದರು. ಪಟೇಲರು ಮುತ್ಸದ್ಧಿತನದೊಡನೆ, ಬಲಪ್ರದರ್ಶನವನ್ನು ಮಾಡಿ ಪಾಕಿಸ್ತಾನ ಜುನಾಘಡದಿಂದ ದೂರವಿರುವಂತೆಯೂ ಹಾಗೂ ಜುನಾಘಡವು ಭಾರತದೊಂದಿಗೆ ವಿಲೀನವಾಗಬೇಕೆಂದೂ ಒತ್ತಡ ಹಾಕಿದರು. ಇದರೊಂದಿಗೆ ಸೇನೆಯ ತುಕಡಿಗಳು ಜುನಾಘಡದ ಮೂರು ಪ್ರದೇಶಗಳಿಗೆ ಕಳುಹಿಸಿ ತಮ್ಮ ದೃಢನಿರ್ಧಾರವನ್ನು ವ್ಯಕ್ತಪಡಿಸಿದ್ದರು. ವ್ಯಾಪಕ ಪ್ರತಿಭಟನೆಯ ನಂತರ ಜನಪರ ಸರ್ಕಾರ (ಆರ್ಜೀ ಹುಕುಮತ್) ರಚನೆಯಾದ ಮೇಲೆ ಭುಟ್ಟೋ ಮತ್ತು ನವಾಬ ಇಬ್ಬರೂ ಪಾಕಿಸ್ತಾನಕ್ಕೆ ಪಲಾಯನ ಮಾಡಿದರು. ಪಟೇಲರ ಆದೇಶದ ಮೇರೆ ಭಾರತೀಯ ಸೇನೆ ಹಾಗೂ ಪೊಲೀಸ್ ಪಡೆಗಳು ಜುನಾಘಡವನ್ನು ಪ್ರವೇಶಿಸಿದವು. ಮುಂದೆ ನಡೆದ ಜನಮತಗಣನೆಯಲ್ಲಿ ಶೇಕಡಾ 99.5 ಮಂದಿ ಭಾರತದೊಂದಿಗೆ ವಿಲೀನದ ಪರವಾಗಿ ಮತವಿತ್ತರು.

**ಹೈದರಾಬಾದ್ ವಿಲೀನ**

ಇಂದಿನ ಕರ್ನಾಟಕ, ಮಹರಾಷ್ಟ್ರ ಮತ್ತು ಆಂಧ್ರದ ಭಾಗಗಳನ್ನೊಳಗೊಂಡ ಹೈದರಾಬಾದ್ ಭಾರತದ ಸಂಸ್ಥಾನಗಳಲ್ಲಿಯೇ ಅತಿ ದೊಡ್ಡದಾಗಿತ್ತು. ಅಲ್ಲಿನ ನಿಜಾಮ ಮುಸ್ಲಿಮರಾಗಿದ್ದರೂ ಜನಸಂಖ್ಯೆಯ ಶೇಕಡಾ 80 ಹಿಂದೂಗಳಾಗಿದ್ದರು. ಜಿನ್ನಾ ಮೊದಲಾದ ಪಾಕಿಸ್ತಾನ ನಾಯಕರು ಹಾಗೂ ಬ್ರಿಟಿಷರ ಬೆಂಬಲದಿಂದ ಹೈದರಾಬಾದ್ ಸಂಸ್ಥಾನವನ್ನು ಸ್ವತಂತ್ರ ರಾಷ್ಟ್ರವೆಂದು ನಿಜಾಮ ಘೋಷಿಸಿದ. ಆತನ ಸೇವೆಗೆ ಅತ್ಯಾಧುನಿಕ ಸಿಡ್ನಿ ಕಾಟನ್ ಬಂದೂಕುಗಳು, ಮದ್ದುಗುಂಡುಗಳನ್ನು ಮತ್ತು ತರಬೇತಿಯನ್ನು ಬ್ರಿಟಿಷರು ನೀಡಿದರು. ಕಾಸೀಂರಜ್ವಯೆಂಬ ಮತಾಂಧ ಮತ್ತು ಉಗ್ರವಾದಿಯ ಮುಂದಾಳತ್ವದಲ್ಲಿ ಸಾವಿರಾರು ಜನ ರಜಾಕಾರರು, ಹೈದರಾಬಾದ್ ಸಂಸ್ಥಾನದಲ್ಲಿ ಜನಸಾಮಾನ್ಯರ ಮೇಲೆ ಆಕ್ರಮಣ ನಡೆಸಿದರು. ಮಹಿಳೆಯರ ಮಾನಭಂಗ, ಮಕ್ಕಳ ಹತ್ಯೆ, ಜನರ ಹತ್ಯೆ ಇವು ಸಾವಿರಾರು ಕಡೆ ನಡೆದವು. ಸ್ವಾಮಿ ರಮಾನಂದ ತೀರ್ಥರ ನೇತೃತ್ವದಲ್ಲಿ ಹೈದರಾಬಾದ್ ಪ್ರಾಂತ್ಯ ವಿಮೋಚನಾ ಹೋರಾಟ ನಡೆಯಿತು.

ಕರ್ನಾಟಕದ ಮುಂಡರಗಿಯ ಶಿಬಿರಕ್ಕೆ ಕೇಂದ್ರ ಮಂತ್ರಿ ಗಾಡ್ಗೀಳರನ್ನು ಕಳುಹಿಸಿದ ಪಟೇಲರು, ಈ ಹೋರಾಟಕ್ಕೆ ಬೆಂಬಲ ನೀಡಿ ಪ್ರೋತ್ಸಾಹಿಸಿದರು. 1948ರ ಸೆಪ್ಟೆಂಬರ್‌ನಲ್ಲಿ ಪಟೇಲರು ಭಾರತ ಇನ್ನೂ ಕಾಯಲಾಗದು ಎಂದು ರಾಜಾಜಿಯವರನ್ನು ಒಪ್ಪಿಸಿ, ಹೈದರಾಬಾದನ್ನು ವಶಕ್ಕೆ ತೆಗೆದುಕೊಳಲು ಭಾರತದ ಸೇನೆಯನ್ನು ಕಳುಹಿಸಿದರು. 'ಆಪರೇಷನ್ ಪೋಲೋ' ಎಂಬ ಈ ಕಾರ್ಯಾಚರಣೆಯಲ್ಲಿ ಸಾವಿರಾರು ರಜಾಕಾರರು ಕೊಲ್ಲಲ್ಪಟ್ಟರು. 1948 ಸೆಪ್ಟೆಂಬರ್ 17 ರಂದು ಈಗಿನ ಬೀದರ್ ಜಿಲ್ಲೆಯ ಹುಮನಾಬಾದಿನಲ್ಲಿ ನಿಜಾಮನ ಸೈನ್ಯ ಶರಣಾಯಿತು. ಹೈದರಾಬಾದ್ ಪ್ರಾಂತ್ಯ ಸುರಕ್ಷಿತವಾಗಿ ಭಾರತದ ಭಾಗವಾಯಿತು. ಯಾವುದೇ ನಾಗರಿಕ ಪ್ರತಿಭಟನೆಯಿಲ್ಲದೇ ಯಶಸ್ವಿಯಾದ ಹೈದರಾಬಾದಿನ ವಿಲೀನವನ್ನು ಅನೇಕ ಭಾರತೀಯ ಮುಸ್ಲಿಮರು ಕೊಂಡಾಡಿದ್ದರು.

**ಭಾರತದ ಬಿಸ್ಮಾರ್ಕ್**

ಭಾರತವನ್ನು ಒಟ್ಟುಗೂಡಿಸುವುದು ಸುಲಭದ ಕೆಲಸವೇನಾಗಿರಲಿಲ್ಲ. ಪಟೇಲರ ಗಣನೀಯ ಸೇವೆಯನ್ನು ಗಮನದಲ್ಲಿಟ್ಟು ಅವರನ್ನು ಭಾರತದ ಬಿಸ್ಮಾರ್ಕ್ ಎಂದು ಕರೆಯಲಾಗುತ್ತದೆ. ಪಟೇಲರು ಭಾರತದ ಕಾನ್ಸಿಟ್ಯುಯೆಂಟ್ ಅಸೆಂಬ್ಲಿಯ ಹಿರಿಯ ಸದಸ್ಯರಾಗಿದ್ದರು. ಭಾರತದ ಸಂವಿಧಾನದಲ್ಲಿ ನಾಗರಿಕ ಸ್ವಾತಂತ್ರ್ಯದ ರೂಪುರೇಷೆಗಳನ್ನು ನಿರ್ಧರಿಸುವುದಕ್ಕಾಗಿ ರಚಿಸಲಾಗಿದ್ದ ಅನೇಕ ಮಹತ್ವದ ಸಮಿತಿಗಳ ನಾಯಕರಾಗಿದ್ದರು.

ಸರ್ಕಾರದ ರಕ್ಷಣಾತ್ಮಕ ಅಧಿಕಾರವಿರುವ, ವ್ಯಾಪಕ ವೈಯಕ್ತಿಕ ಸ್ವಾತಂತ್ರ್ಯಕ್ಕೆ ಅವರು ಬೆಂಬಲ ನೀಡಿದರು. ರಾಷ್ಟ್ರೀಕೃತ ಸಿವಿಲ್ ಸರ್ವೀಸನ್ನು ಅವರು ಬಲವಾಗಿ ಬೆಂಬಲಿಸಿದ್ದಲ್ಲದೇ ಆಸ್ತಿ ಹಕ್ಕು ಮತ್ತು ರಾಜಧನದ ಕಲಮುಗಳನ್ನೂ ಸೇರಿಸಿದರು. ಭಾರತದಲ್ಲಿದ್ದ ಪುಟ್ಟ ಪುಟ್ಟ ರಾಜರಿಂದಾಳಲ್ಪಟ್ಟ ರಾಜ್ಯಗಳನ್ನು ಒಂದುಗೂಡಿಸುವಲ್ಲಿ



ಪ್ರಮುಖ ಪಾತ್ರ ವಹಿಸಿದ ಇವರು 'ಉಕ್ಕಿನ ಮನುಷ್ಯ' ಎಂದೇ ಅಮರರಾದರು. ಸರ್ದಾರ್ ಪಟೇಲರಿಗೆ 1991 ರಲ್ಲಿ ಭಾರತ ರತ್ನ ಪ್ರಶಸ್ತಿಯನ್ನು ನೀಡಿ ಗೌರವಿಸಲಾಯಿತು.

ಆಧುನಕ ಭಾರತದ ಸಂಸ್ಥಾಪಕರಲ್ಲೊಬ್ಬರಾದ ಸರ್ದಾರ್ ಪಟೇಲರನ್ನು ಇಂದು ಸ್ಮರಿಸುವುದು ನಮ್ಮೆಲ್ಲರ ಕರ್ತವ್ಯ.

**ರಾಷ್ಟ್ರೀಯ ಏಕತಾ ದಿವಸ ಏಕೆ?**

ಸ್ವಾತಂತ್ರ್ಯೋತ್ತರ ಭಾರತದಲ್ಲಿ ಪಟೇಲ್ ಅವರಿಂದ ಬಿಗಿಕ್ರಮಗಳ ಬರದೇ ಹೋಗಿದ್ದರೆ ದೇಶ ಇನ್ನಷ್ಟು ದುರ್ಬಲವಾಗುತ್ತಿತ್ತು. ದೇಶದ ಸಮಗ್ರತೆ, ಐಕ್ಯತೆಯನ್ನು ಕಾಯ್ದುಕೊಳ್ಳುವಲ್ಲಿ ಅಂದಿನ ಗೃಹಸಚಿವರಾಗಿದ್ದ ಪಟೇಲರು ಕೈಗೊಂಡ ಕಟ್ಟುನಿಟ್ಟಿನ ಕ್ರಮಗಳು ಇಂದು ಸದೃಢ ಭಾರತವನ್ನು ಕಟ್ಟಿವೆ. ದೇಶದ ಏಕತೆಗಾಗಿ ಸರ್ದಾರ್ ಪಟೇಲ್ ಅವರು ನಡೆಸಿದ ಹೋರಾಟ ಮತ್ತು ಅವರ ಸಂದೇಶವನ್ನು ಸಾರುವುದು ಈ ದಿನಾಚರಣೆಯ ಉದ್ದೇಶ.

**ಏಕತೆ ಪ್ರತಿಮೆ**


ಸರ್ದಾರ್ ಪಟೇಲರ ಸ್ಮರಣಾರ್ಥ ನಿರ್ಮಿಸಿರುವ ಏಕತೆ ಪ್ರತಿಮೆ 182 ಮೀಟರ್ (597 ಅಡಿ) ನಷ್ಟು ಎತ್ತರವಿದ್ದು ವಿಶ್ವದ ಅತಿ ಎತ್ತರದ ಪ್ರತಿಮೆಯ ದಾಖಲೆಯನ್ನು ಹೊಂದಿದೆ. ಗುಜರಾತಿನ ವಡೋದರಾ ನಗರದ 100 ಕಿಲೋಮೀಟರ್ ಆಗ್ನೇಯ ಭಾಗದಲ್ಲಿರುವ ರಾಜಿಪ್ಲಾ ಬಳಿಯ ಸರ್ದಾರ್ ಸರೋವರ ಅಣೆಕಟ್ಟೆಗೆ ಎದುರಾಗಿ ಈ ಪ್ರತಿಮೆ ಇದೆ. ಅ. 2014 ರಲ್ಲಿ ವಿನ್ಯಾಸ ನಿರ್ಮಾಣ ಮತ್ತು ನಿರ್ವಹಣೆಗಾಗಿ ರೂ.29.50 ಬಿಲಿಯನ್ (US $ 420 Million) ಗುತ್ತಿಗೆಯನ್ನು ಪಡೆದ ಲಾರ್ಸನ್ ಟರ್ಬೋ (L & T) ಇದನ್ನು ನಿರ್ಮಿಸಿದೆ. ಈ ನಿರ್ಮಾಣವನ್ನು 2014ರ ಅಕ್ಟೋಬರ್ ಮಧ್ಯದಲ್ಲಿ ಪೂರ್ಣಗೊಳಿಸಲಾಯಿತು. ಭಾರತದ ಶಿಲ್ಪಿ ರಾಮ್ ವಿ. ಸುತಾರ್ ಅವರು ಇದರ ವಿನ್ಯಾಸಕಾರ. 31 ಅಕ್ಟೋಬರ್ 2018 ರಂದು ಪಟೇಲ್‌ರವರ 143ನೇ ಜನ್ಮ ವಾರ್ಷಿಕೋತ್ಸವದಂದು ಈ ವಿಗ್ರಹದ ಲೋಕಾರ್ಪಣೆ ಮಾಡಲಾಯಿತು.

**– ಡಾ. ಶ್ರೀಧರ ಹೆಚ್**
ಮುಖ್ಯಸ್ಥರು, ಇತಿಹಾಸ ವಿಭಾಗ

---

## ಶತಮಾನೋತ್ಸವ ಸ್ಮರಣೆಯಲ್ಲಿ ಐತಿಹಾಸಿಕ ಬೆಳಗಾಂ ಕಾಂಗ್ರೆಸ್ ಅಧಿವೇಶನ – 2024

- ಗಾಂಧೀಜಿ ಅಧ್ಯಕ್ಷತೆವಯಿಸಿದ ಏಕೈಕ ಅಧಿವೇಶನ
- 1924 ಬೆಳಗಾವಿ ಅಧಿವೇಶನ (Dec 26 & 27)
- 39ನೇ INC ಅಧಿವೇಶನ
- ಸ್ಥಳ–ಟಿಳಕವಾಡಿ ಬೆಳಗಾವಿ (84ಎಕರೆ ಜಾಗ)
- ಭಾಗವಹಿಸಿದವರು–17000
- ಅಧಿವೇಶನ ನೆಡೆಯುವ ಸ್ಥಳ / ವೇದಿಕೆ ಹೆಸರು– ವಿಜಯನಗರ (70 ಅಡಿ ಗೋಪುರ ಶೈಲಿ ಪ್ರವೇಶ ದ್ವಾರ),
- ಗೋಪುರ ಶೈಲಿ–ವಿರೂಪಾಕ್ಷ ದೇವಾಲಯ ಹಂಪಿ,
- ಕುಡಿಯುವ ನೀರಿನ ಬಾವಿ–ಪಂಪಾ ಸರೋವರ/ ಕಾಂಗ್ರೆಸ್ ಬಾವಿ (ಹರಪನಳ್ಳಿ ಎಂಬ ಪುಟ್ಟ ಬಾಲಕ ಬಿದ್ದು ಸಾವು),
- ಗಾಂಧೀಜಿ ಉಳಿದುಕೊಂಡ ಕುಟಿರ – ಶ್ರೀ ವಿದ್ಯಾರಣ್ಯ ಆಶ್ರಮ,
- ಅಧಿವೇಶನದ ಪ್ರಮುಖ ರೂವಾರಿ – ಗದಗಿನ ಹುದಲಿಯ ಗಂಗಾಧರ್ ರಾವ್ ದೇಶಪಾಂಡೆ,
- ಸ್ವಾಗತ ಸಮಿತಿ ಅಧ್ಯಕ್ಷರು – ಗಂಗಾಧರ್ ರಾವ್ ದೇಶಪಾಂಡೆ,
- ಪ್ರದಾನ ಕಾರ್ಯದರ್ಶಿ–ನೆಹರೂ ಮತ್ತು ಗಂಗಾಧರ್ ರಾವ್ ದೇಶಪಾಂಡೆ,
- ಸ್ವಚ್ಛತಾ ಶಿಸ್ತುಪಾಲನೆ – ಡಾ.ನಾ.ಸು.ಹಾರ್ಡಿಕರ್ (ಹಿಂದೂಸ್ಥಾನಿ ಸೇವಾದಳ ಮುಖ್ಯಸ್ಥರು)
- ಸ್ವಾಗತ ಗೀತೆ – ವಂದೇ ಮಾತರಂ & ಉದಯವಾಗಲಿ ನಮ್ಮ ಚೆಲುವ ಕನ್ನಡ ನಾಡು,
- ಗಂಗೂಬಾಯಿ ಹಾನಗಲ್ – ಹುಯಿಲ್ ಗೋಳ್ ನಾರಾಯಣ ಅವರ
- ಉದಯವಾಗಲಿ ನಮ್ಮ ಚೆಲುವ ಕನ್ನಡ ನಾಡಗೀತೆ ಹಾಡಿದರು, (ವೀಣೆ ನುಡಿಸಿದವರು– ವೀಣೆ ಶೇಷಣ್ಣ)
- ಗಾಂಧೀಜಿ ಭಾಷಣ ಅನುವಾದ ಮಾಡಿದವರು– ಎಚ್. ನರಸಿಂಹಯ್ಯ,
- ಈ ಭಾಷಣ ಕಲ್ಕತ್ತಾ ಒಪ್ಪಂದವನ್ನು ಅನುಸರಿಸುತದೆ,
- ಅಧಿವೇಶನಕ್ಕೆ ಕುವೆಂಪು ಭಾಗವಹಿಸದ ದಾಖಲೆ ಅವರ – ನೆನಪಿನ ದೋಣಿಯಲ್ಲಿ ಉಲ್ಲೇಖಿಸಿದ್ದಾರೆ,
- ಈ ಅಧಿವೇಶನವನ್ನು ಯುನಿಟಿ ಕಾಂಗ್ರೆಸ್ ಅಧಿವೇಶನ ಎನ್ನುತ್ತಾರೆ.




**– ಕೃಷ್ಣ ಹಂಪನ**
ಅಂತಿಮ ಬಿ.ಎ.



## ನಾಡು ಕಟ್ಟಿದ ಕನ್ನಡ ಕುಲಪುರೋಹಿತ
## ಕರ್ನಾಟಕ ಏಕೀಕರಣದ ರೂವಾರಿ ಆಲೂರು ವೆಂಕಟರಾಯರು



ಇಡೀ ಕರ್ನಾಟಕ 1956ರ ನವೆಂಬರ್ ಒಂದರಂದು ಏಕೀಕರಣದ ಸಂಭ್ರಮದ ಕಡಲಲ್ಲಿ ಮುಳುಗಿತ್ತು. ಆದರೆ ಆಲೂರು ವೆಂಕಟರಾಯರು ಹಂಪಿ ವಿರೂಪಾಕ್ಷ ದೇವಾಲಯದ ತಾಯಿ ಭುವನೇಶ್ವರಿ ದೇವಿಗೆ ಭಕ್ತಿಯಿಂದ ಪೂಜೆ ಮಾಡಿ ಸಾರ್ಥಕತೆ ಅನುಭವಿಸಿದ್ದರು. ಇದರಿಂದಲೇ ಅವರಿಗೆ ಕನ್ನಡ ಕುಲಪುರೋಹಿತ ಎಂಬ ದಿವ್ಯ ಬಿರುದನ್ನು ಜನರು ನೀಡಿದ್ದರು.

ಆಲೂರು ವೆಂಕಟರಾಯರು ರಾಷ್ಟ್ರೀಯತೆಯ ಕಲ್ಪನೆ ಜತೆಗೆ ಸ್ವಾತಂತ್ರ್ಯ ಸಂಗ್ರಾಮದಲ್ಲು ಪಾಲ್ಗೊಂಡಿದ್ದವರು. ಸಾವರ್ಕರ್, ತಿಲಕ್ ಅವರಂತಹ ಧೀರರ ಒಡನಾಟವನ್ನು ಹೊಂದಿದ್ದರು. 1900ರ ಕಾಲದಲ್ಲಿ ಕನ್ನಡ ಭಾಷೆಯನ್ನಾಡುವ ಪ್ರದೇಶಗಳು ಮೈಸೂರು, ಬಾಂಬೆ ಹಾಗೂ ಹೈದರಾಬಾದ್‌ಗೆ ಹಂಚಿಹೋಗಿತ್ತು. ಕೆಲವಷ್ಟು ಪ್ರದೇಶಗಳು ಮಹಾರಾಷ್ಟ್ರ ಪ್ರಾಂತ್ಯದಲ್ಲಿದ್ದವು. ಆಗ ಕನ್ನಡಿಗರ ಕಾಯಕಲ್ಪಕ್ಕೆ ಟೊಂಕ ಕಟ್ಟಿನಿಂತವರು ವೆಂಕಟರಾವ್.


ಬೇಸಿಗೆ ರಜೆಯೊಂದರಲ್ಲಿ ಹಂಪಿಯನ್ನು ದರ್ಶಿಸಿದಾಗ ಅಲ್ಲಿನ ಚಿತ್ರಣ ಮನಸ್ಸಿನ ಮೇಲೆ ಪ್ರಭಾವ ಬೀರಿತು. ಕನ್ನಡಾಂಬೆಯ ಪ್ರಭಾವ ಮನದಲ್ಲಿ ದಟ್ಟವಾಗಿ ಬೇರೂರಿತು. ಮುಂದೆ ವಕೀಲಿ ವೃತ್ತಿಯನ್ನು ತೊರೆದು ಕನ್ನಡಕ್ಕಾಗಿ ಜೀವನ ಮುಡಿಪಿಟ್ಟರು. ನಾಡಿನ ಇತಿಹಾಸವನ್ನು ಅಧ್ಯಯನ ಮಾಡಿ ಪತ್ರಿಕೆಗಳ ಮೂಲಕ ಕನ್ನಡಾಭಿಮಾನವನ್ನು ಅಂಕುರಿಸಿದರು.

ಏಕೀಕರಣದ ಸಮಯದಲ್ಲಂತೂ ಕನ್ನಡಿಗರಿಗೆ ಕರ್ನಾಟಕವನ್ನು ದಕ್ಕುವಂತೆ ಮಾಡಿದರು. ನಂತರವೂ ಕರ್ನಾಟಕ ಕಟ್ಟುವ ಕೆಲಸ ಬಿಡಲಿಲ್ಲ. ರಾಷ್ಟ್ರಗೀತೆಯಲ್ಲಿ ಕರ್ನಾಟಕದ ಹೆಸರೇ ಇಲ್ಲವೆಂದು ಪ್ರಧಾನಿ ಹಾಗೂ ರಾಷ್ಟ್ರಪತಿಗೆ ಪ್ರಶ್ನಿಸಿದ್ದರು. ಅದಕ್ಕಾಗಿಯೇ ವರಕವಿ ದ.ರಾ.ಬೇಂದ್ರೆ ಇವರನ್ನು ಕರ್ನಾಟಕ ಪ್ರಾಣೋಪಾಸಕ ಎಂದದ್ದು. ರಾಷ್ಟ್ರೀಯ ಶಿಕ್ಷಣ ಸಂಸ್ಥೆಯಲ್ಲಿ ವೃತ್ತಿಪರ ತರಗತಿಗಳನ್ನು ನೀಡುತ್ತಿದ್ದರು. 1907 ರಲ್ಲಿ ಕನ್ನಡ ಪುಸ್ತಕಗಳ ಕೊರತೆ ನೀಗಿಸಲು ಗ್ರಂಥಕರ್ತರ ಸಮಾವೇಶ ಮಾಡಿದ್ದರು. ಕನ್ನಡ ಸಾಹಿತ್ಯ ಪರಿಷತ್ತು ನಿರ್ಮಿಸುವಲ್ಲಿ ಮುಖ್ಯಪಾತ್ರವಿದೆ. 'ನನ್ನ ಜೀವನ ಸ್ಮೃತಿಗಳು' ಆತ್ಮಕಥನದಲ್ಲಿ ಆಧುನಿಕ ಕರ್ನಾಟಕದ ಇತಿಹಾಸವನ್ನೇ ತೆರೆದಿಟಿದ್ದಾರೆ. ಶ್ರೀ ವಿದ್ಯಾರಣ್ಯ ಚರಿತ್ರೆ, ಕರ್ನಾಟಕ ಗತವೈಭವ, ಕರ್ನಾಟಕ ವೀರತತ್ವಗಳು, ಕರ್ನಾಟಕತ್ವದ ಸೂತ್ರಗಳು ಸೇರಿದಂತೆ ಸುಮಾರು 27 ಕೃತಿಗಳ ಕರ್ತೃ. ಬಾಲಗಂಗಾಧರ ತಿಲಕರ ಗೀತಾರಹಸ್ಯವನ್ನು ಕನ್ನಡಕ್ಕೆ ಅನುವಾದಿಸಿದ್ದಾರೆ.

**– ಅಂಕಿತ ಎಸ್**
ದ್ವಿತೀಯ ಬಿ.ಎ.

## ನೇತಾಜಿ ಸುಭಾಷ್ ಚಂದ್ರ ಬೋಸ್ ಅವರ 129ನೇ ಜನ್ಮ ವಾರ್ಷಿಕೋತ್ಸವ ಸ್ಮರಣೆಯಲ್ಲಿ





## ಪ್ರಾಚೀನ ಭಾರತದ ಮಹಾಜನಪದಗಳು

ಈ ಮಹಾಜನಪದಗಳು ಉತ್ತರ ಮತ್ತು ಮಧ್ಯ ಭಾರತದಾದ್ಯಂತ ಹರಡಿವೆಯಲ್ಲದೇ ಆಧುನಿಕ ಉತ್ತರ ಪ್ರದೇಶ, ಬಿಹಾರ, ರಾಜಸ್ಥಾನ, ಪಂಜಾಬ್, ಮಧ್ಯಪ್ರದೇಶ ಮತ್ತು ಇಂದಿನ ಪಾಕಿಸ್ತಾನ ಮತ್ತು ಅಫ್ಘಾನಿಸ್ತಾನದ ಕೆಲವು ಭಾಗಗಳನ್ನು ಒಳಗೊಂಡಿದೆ.

| ಮಹಾಜನಪದಗಳು | ರಾಜಧಾನಿಗಳು | ಪ್ರಸ್ತುತ ಸ್ಥಳಗಳು |
|---|---|---|
| ಅಂಗ | ಚಂಪಾ | ಆಧುನಿಕ ಬಿಹಾರ (ಭಾಗಲ್ಪುರ್) |
| ಮಗಧ | ರಾಜಗೃಹ (ಪಾಟಲಿಪುತ್ರ) | ದಕ್ಷಿಣ ಬಿಹಾರ |
| ವಜ್ಜಿ (ವೃಜ್ಜಿ) | ವೈಶಾಲಿ | ಉತ್ತರ ಬಿಹಾರ |
| ಮಲ್ಲ | ಕುಸಿನಗರ, ಪಾವ | ಪೂರ್ವ ಉತ್ತರ ಪ್ರದೇಶ |
| ಕಾಶಿ | ವಾರಣಾಸಿ | ಪೂರ್ವ ಉತ್ತರ ಪ್ರದೇಶ |
| ಕೋಸಲ | ಶ್ರಾವಸ್ತಿ | ಪೂರ್ವ ಉತ್ತರ ಪ್ರದೇಶ ಮತ್ತು ನೇಪಾಳದ ಭಾಗಗಳು |
| ವತ್ಸ | ಕೌಸಂಬಿ (ಪ್ರಯಾಗರಾಜ್ ಬಳಿ) | ಆಧುನಿಕ ಉತ್ತರ ಪ್ರದೇಶ |
| ಕುರು | ಇಂದ್ರಪ್ರಸ್ಥ, ಹಸ್ತಿನಾಪುರ | ದೆಹಲಿ–ಹರಿಯಾಣ–ಪಶ್ಚಿಮ ಉತ್ತರ ಪ್ರದೇಶ |
| ಪಂಚಾಲ | ಅಹಿಚ್ಛತ್ರ (ಉತರ), ಕಂಪಿಲ್ಯ (ದಕ್ಷಿಣ) | ಪಶ್ಚಿಮ ಉತ್ತರ ಪ್ರದೇಶ |
| ಮತ್ಸ್ಯ | ವಿರಾಟ್‌ನಗರ | ಆಧುನಿಕ ರಾಜಸ್ಥಾನ |
| ಚೇದಿ | ಶುಕ್ತಿಮತಿ | ಬುಂದೇಲ್‌ಖಂಡ್ ಪ್ರದೇಶ (ಮಧ್ಯಪ್ರದೇಶ) |
| ಉರಸೇನ | ಮಥುರಾ | ಪಶ್ಚಿಮ ಉತ್ತರ ಪ್ರದೇಶ |
| ಅಸ್ಸಾಕ (ಅಶ್ಯಾಕ) | ಪ್ರತಿಷ್ಠಾನ್ | ದಖ್ಖನ್ ಪ್ರದೇಶ ಮಹಾರಾಷ್ಟ್ರ |
| ಅವಂತಿ | ಉಜ್ಜಯಿನಿ (ಉತ್ತರ) ಮಾಹಿಷ್ಮತಿ | (ದಕ್ಷಿಣ) ಮಧ್ಯಪ್ರದೇಶ |
| ಗಾಂಧಾರ | ತಕ್ಷಶಿಲಾ | ಇಂದಿನ ಪಾಕಿಸ್ತಾನ (ರಾವಲ್ಪಿಂಡಿ ಪ್ರದೇಶ) |
| ಕಾಂಬೋಜ | ರಾಜಪುರ | ವಾಯುವ್ಯ ಪಾಕಿಸ್ತಾನ ಮತ್ತು ಅಫ್ಘಾನಿಸ್ತಾನ |



## Awarness Programme on 'Raising Cancer Incidence & Its Management'
## An IQAC initiative VoMC, NSS & Student Parliament in association with Bharath Cancer Hospital, Mysuru - 24.11.2024











## ಶ್ರೀ ರೇಣುಕಾದೇವಿ ವಿದ್ಯಾಸಂಸ್ಥೆ, ಶಿವಮೊಗ್ಗ ಇಲ್ಲಿ ನಡೆದ
## ವಾರ್ಷಿಕೋತ್ಸವ ಸಮಾರಂಭದ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದ ಕ್ಷಣ – 04.01.2025











## Volunteers of Mahajana Corps (VoMC) Actively Participated & Served in Mysuru Literary Fest 2025 : 19.01.2025








ಶಿಕ್ಷಣದಿಂದ ಶ್ರೇಷ್ಠತೆ

**ಎಸ್‌ಬಿಆರ್‌ಆರ್ ಮಹಾಜನ ಪ್ರಥಮದರ್ಜೆ ಕಾಲೇಜು (ಸ್ವಾಯತ್ತ)**

ಜಯಲಕ್ಷ್ಮೀಪುರಂ, ಮೈಸೂರು–12

ಶ್ರೇಷ್ಠತೆಯ ಸಾಮರ್ಥ್ಯವುಳ್ಳ ಕಾಲೇಜು

**ಇತಿಹಾಸ ವಿಭಾಗ**

**Dept. of History**

**ಮೈಸೂರು ವಿಶ್ವವಿದ್ಯಾನಿಲಯದಿಂದ ಸಂಯೋಜನೆಗೊಂಡು, ನ್ಯಾಕ್‌ನಿಂದ 'ಎ' ಮಾನ್ಯತೆ ಪಡೆದಿದೆ.**




ಸಂಚಿಕೆ: 47 ಮಾರ್ಚ್ 2025 | ಪ್ರಧಾನ ಸಂಪಾದಕರು: ಡಾ. ಬಿ.ಆರ್. ಜಯಕುಮಾರಿ, ಪ್ರಾಂಶುಪಾಲರು | www.mahajana.edu.in | ಸಂಪಾದಕರು: ಡಾ. ಶ್ರೀಧರ ಹೆಚ್, ಇತಿಹಾಸ ವಿಭಾಗ | ಪುಟಗಳು: 8



## ಸಂಪಾದಕೀಯ

### ಜ್ಞಾನದಾತೆ ಸಾವಿತ್ರಿಬಾಯಿ ಫುಲೆ



ಸ್ವಾತಂತ್ರ್ಯ ಪೂರ್ವ ಭಾರತದ ಸಮಾನತವಾದಿ, ಸ್ತ್ರೀವಾದಿ ಮತ್ತು ಸಾಮಾಜಿಕ ಸುಧಾರಣೆಗಳ ಮೊದಲ ಚಾರಿತ್ರಿಕ ಹೆಜ್ಜೆ ಎಂದು ಗುರುತಿಸುವುದಾದರೆ ಅದು ಜ್ಯೋತಿ ರಾವ್ ಫುಲೆ ಮತ್ತು ಸಾವಿತ್ರಿಬಾಯಿ ಫುಲೆ ದಂಪತಿ. ಜ್ಯೋತಿ ರಾವ್ ಫುಲೆಯವರನ್ನು 'ಭಾರತದ ಸಾಮಾಜಿಕ ಹೋರಾಟಗಳ ತಂದೆ' ಎಂದೇ ಇತಿಹಾಸವು ನೆನಪಿಸಿಕೊಳ್ಳುವುದು. ಇಂತಹ ಮಹಾನ್ ಚೇತನದ ಮಡದಿಯಾಗಿ ತನ್ನ ಬಾಳಸಂಗಾತಿಯ ಆಶಯಗಳ ಮಹತ್ವವನ್ನು ಅರಿತುಕೊಂಡು ಅವುಗಳನ್ನು ತನ್ನ ಜೀವನದ ಮುಖ್ಯ ಗುರಿಯನ್ನಾಗಿಸಿಕೊಂಡು ಬದುಕಿನ ಕೊನೆಯವರೆಗೂ ಮುನ್ನಡೆಸಿದ ಮಹಾನ್ ಚೇತನ ಸಾವಿತ್ರಿಬಾಯಿ ಫುಲೆ. ಭಾರತದ ಪುರೋಹಿತಶಾಹಿ ಮತ್ತು ಊಳಿಗಮಾನ್ಯ ವ್ಯವಸ್ಥೆ ಶೂದ್ರರು ಮತ್ತು ಅಸ್ಪೃಶ್ಯರು ಸವರ್ಣೀಯರ ಸೇವೆಗೆಂದು ಮಾತ್ರ. ಅಕ್ಷರ, ಸ್ವಾತಂತ್ರ್ಯ, ಸಮಾನತೆ, ಸ್ವಾಭಿಮಾನಗಳೆಲ್ಲ ತಳಸಮುದಾಯಗಳಿಗೆ ನಿಷಿದ್ಧ ಎಂಬ ನಿಯಮವನ್ನು ವಿಧಿಸಿದ್ದ ಕಾಲದಲ್ಲಿ, ಅಂಥ ಜಾತಿಮನಸ್ಥಿತಿಗಳ ವಿರುದ್ಧ ದೃಢವಾಗಿ ನಿಂತು ಶೂದ್ರಾತಿ ಶೂದ್ರರಿಗೆ ಅಕ್ಷರಾಭ್ಯಾಸ ಮಾಡಿಸಿ ಶಿಕ್ಷಣದ ಹಕ್ಕನ್ನು ಕಲ್ಪಿಸಿಕೊಟ್ಟು, ಸ್ವಾಭಿಮಾನದ ಜ್ಯೋತಿಯನ್ನು ಅಕ್ಷರಗಳ ಮೂಲಕ ನಮ್ಮೆಲ್ಲರೆದೆಗಳಲ್ಲಿ ಬೆಳಗಿಸಿದವರು ಮಹಾತ್ಮಾ ಜ್ಯೋತಿಬಾ ಫುಲೆ ಮತ್ತು ತಾಯಿ ಸಾವಿತ್ರಿಬಾಯಿ ಫುಲೆ.

1831 ಜನವರಿ 3ರಂದು ಸಾವಿತ್ರಿಬಾಯಿ ಕಂಡೋಜಿ ಪಾಟೀಲ್, ಲಕ್ಷ್ಮೀಬಾಯಿ ದಂಪತಿಯ ಮಗಳಾಗಿ ಜನಿಸಿದರು. ತನ್ನ 9ನೇ ವಯಸ್ಸಿನಲ್ಲೇ ಜ್ಯೋತಿಬಾ ಅವರೊಡನೆ ವಿವಾಹವಾದರು. ಮಹಿಳೆಯರಿಗೆ ಶಿಕ್ಷಣವನ್ನು ನೀಡಬೇಕೆಂಬ ಅಗಾಧವಾದ ಆಸೆ ಹೊಂದಿದ್ದ ಜ್ಯೋತಿಬಾ ಮೊದಲು ತನ್ನ ಮಡದಿ ಸಾವಿತ್ರಿಬಾಯಿಗೆ ಅಕ್ಷರಾಭ್ಯಾಸ ಮಾಡಿಸಿ ಅವರ ಮೊದಲ ಗುರುವಾದರು. ಬಾಳಸಂಗಾತಿಯ ಘನ ಉದ್ದೇಶವನ್ನು ಅರಿತ ಸಾವಿತ್ರಿಬಾಯಿ ಅಷ್ಟೇ ಆಸ್ಥೆ ಮತ್ತು ಶ್ರದ್ಧೆಯಿಂದ ಕಲಿತರು. ಕಲಿಕೆಯ ಆಸಕ್ತಿ ಅವರನ್ನು ಭಾರತದ ಶೋಷಿತ ಸಮುದಾಯಗಳ ವಿಮೋಚಕಿಯನ್ನಾಗಿ ಬೆಳೆಸಿತು. ಸಾವಿತ್ರಿಬಾಯಿ ಪತಿಯ ಮೊದಲ ಅನುಯಾಯಿ. ಅವರ ಎಲ್ಲಾ ಪ್ರಯೋಗಗಳ ಮೊದಲ ಫಲಿತಾಂಶ. ತನ್ನ ಸಂಗಾತಿಯ ಸಾಮಾಜಿಕ ಬದಲಾವಣೆಯ ಮೊದಲ ಬೆಂಬಲಿಗರು. ಅವರ ಎಲ್ಲಾ ಕಾರ್ಯದಲ್ಲಿ ಒತ್ತಾಸೆಯಾಗಿ ನಿಂತು, ಅದು ತನ್ನದೇ ಕರ್ತವ್ಯ ಎನ್ನುವಷ್ಟರ ಮಟ್ಟಿಗಿನ ಅಪಾರವಾದ ಸಹಕಾರವನ್ನು ನೀಡಿದ ಕಾರ್ಯಕರ್ತೆ. ಜ್ಯೋತಿಬಾ ಹೊತ್ತ ಎಲ್ಲಾ ಸಾಮಾಜಿಕ ಹೊಣೆಗಳನ್ನು ತನ್ನ ಹೆಗಲಿಗೇರಿಸಿಕೊಂಡು ಮುನ್ನಡೆಸಿದ ಕಟ್ಟಾಳು.

ಸಾವಿತ್ರಿಬಾಯಿ ಮತ್ತು ಅವರ ಸ್ನೇಹಿತೆ ಫಾತಿಮಾ ಶೇಕ್ 1846–47ರಲ್ಲಿ ಅಹಮದನಗರದ ಶಾಲೆಯಲ್ಲಿ ಕಲಿತರು. 1849ರಲ್ಲಿ ಪುಣೆಯ ಮನೆಯೊಂದರಲ್ಲಿ ಭಾರತದ ಮೊದಲ ಬಾಲಕಿಯರ ಪಾಠಶಾಲೆಯನ್ನು ಈ ದಂಪತಿ ಪ್ರಾರಂಭಿಸಿದರು. ಒಂಭತ್ತು ವಿದ್ಯಾರ್ಥಿನಿಯರು ಇಲ್ಲಿ ದಾಖಲಾತಿಯನ್ನು ಪಡೆದು ಓದತೊಡಗಿದರು. ಈ ಶಾಲೆಗಳಲ್ಲಿ ಶೂದ್ರ ಮತ್ತು ಅಸ್ಪೃಶ್ಯ ಮಕ್ಕಳೊಂದಿಗೆ ಮುಸಲ್ಮಾನ ಮಕ್ಕಳು ಇದ್ದರು ಎನ್ನುವುದು ಮತ್ತೊಂದು ವಿಶೇಷ. ಸಾವಿತ್ರಿಬಾಯಿಯೇ ಶಾಲೆಗೆ ಮುಖ್ಯ ಶಿಕ್ಷಕಿಯಾಗುವ ಮೂಲಕ ಭಾರತ ದೇಶದ ಮೊತ್ತಮೊದಲ ಶಿಕ್ಷಕಿ ಮತ್ತು ಹೆಣ್ಣು ಮಕ್ಕಳ ಪಾಲಿನ ವಿದ್ಯಾದೇವತೆಯಾದರು. ಅಂದಿನ ಕಾಲದಲ್ಲಿ ಬ್ರಾಹ್ಮಣಶಾಹಿಯನ್ನು ಮತ್ತು ಸವರ್ಣೀಯರನ್ನು ಎದುರಿಸಿ

**ಪು.ತಿ.ನೋ.**



ನಿಲ್ಲುವುದು ಸುಲಭದ ಮಾತಾಗಿರಲಿಲ್ಲ. ಆ ದಾರಿಯನ್ನು ಅವರು ಅತ್ಯಂತ ನಿಂದನೆ, ನೋವು, ಅವಮಾನದಿಂದಲೇ ಕ್ರಮಿಸಿದ್ದರು. ಪಾಠ ಕಲಿಸಲು ಹೋಗುವ ದಾರಿಯ ಮಧ್ಯೆ ಅವರ ಮೇಲೆ ಕಲ್ಲು, ಮಣ್ಣು, ಸೆಗಣಿ ಇವುಗಳಿಂದ ಹಿಮ್ಮೆಟ್ಟಿಸಲು ಪ್ರಯತ್ನಿಸಿದ ಪಟ್ಟಭದ್ರ ಮನಸ್ಸುಗಳನ್ನೇ ಸಾವಿತ್ರಿಬಾಯಿ ತನ್ನ ಅಚಲವಾದ ಶ್ರದ್ಧೆ ಮತ್ತು ಇಚ್ಛಾಶಕ್ತಿಯಿಂದ ಹಿಮ್ಮೆಟ್ಟಿಸಿದರು. ಬಂಡೆಯಂತೆ ನಿಂತು ಅಕ್ಷರಾಭ್ಯಾಸದ ಕಾರ್ಯವನ್ನು ಮುಂದುವರಿಸಿದರು.

ಸಾವಿತ್ರಿಬಾಯಿ ತಾವು ಕಲಿತ ವಿದ್ಯೆಯನ್ನು ಸಮಾಜದ ಬದಲಾವಣೆಗಲ್ಲದೇ ಮತ್ತಾವುದಕ್ಕೂ ಬಳಸಲಿಲ್ಲ ಎನ್ನುವುದಕ್ಕೆ ಅವರು ರಚಿಸಿದ ಕವನಗಳು ಸಾಕ್ಷಿಯಾಗಿವೆ. ಅವರ ಕವನ, ಕಾವ್ಯ, ಲೇಖನಗಳ ವಸ್ತು ಅಥವಾ ಕೇಂದ್ರ ಶೋಷಣೆ, ತಾರತಮ್ಯ, ಅನ್ಯಾಯ. ಅವರ ಮೊದಲ ಕವನ ಸಂಕಲನ 'ಕಾವ್ಯಫುಲೆ'ಯನ್ನು 1854ರಲ್ಲಿ ಪ್ರಕಟಿಸಿದರು. ನಂತರ 'ಪಾವನ್ ಕಾಶಿ ಸುಬೋಧ್ ರತ್ನಾಕರ್' ಎಂಬ ಮತ್ತೊಂದು ಕವನ ಸಂಕಲನ 1891ರಲ್ಲಿ ಪ್ರಕಟವಾಯಿತು. ಇದು ಫುಲೆ ಜೀವನ ಕುರಿತದ್ದಾಗಿತ್ತು. ಇಂದಿಗೂ ಫುಲೆ ಅವರ ಜೀವನವನ್ನು ಗೊತ್ತುಪಡಿಸುವ ಅಧಿಕೃತ ಗ್ರಂಥಗಳಲ್ಲಿ ಇದಕ್ಕೆ ಅಗ್ರಸ್ಥಾನ. ಅವರ 'ಸಾಲ' ಎಂಬ ಲೇಖನ ಜನರ ದುಂದುವೆಚ್ಚದ ಬದುಕನ್ನು ಸಾರುತ್ತಿತ್ತು. "ಕಷ್ಟಪಟ್ಟು ಕೆಲಸ ಮಾಡಿ, ಶ್ರದ್ಧೆಯಿಂದ ಅಧ್ಯಯನ ಮಾಡಿ, ಒಳ್ಳೆಯ ಮಾರ್ಗದಲ್ಲಿ ನಡೆಯಿರಿ" ಎಂಬುದು ಅವರ ಘೋಷವಾಕ್ಯವಾಗಿತ್ತು. ಮಹಿಳೆಯರು ಶಿಕ್ಷಣವನ್ನು ಪಡೆದು ಗುಲಾಮಿ ಬದುಕಿನಿಂದ ಮುಕ್ತವಾಗಿ ಸಬಲರಾಗಲು ಈ ಶಿಕ್ಷಣವು ಅತ್ಯಂತ ಅಗತ್ಯವೆಂಬುದು ಅವರ ಬಲವಾದ ನಂಬಿಕೆ ಮತ್ತು ವಾದವಾಗಿತ್ತು.

ಸಾವಿತ್ರಿಬಾಯಿ ತನ್ನ ಸಂಗಾತಿಯೊಂದಿಗೆ ಕೈಗೊಂಡ ಪ್ರತಿಯೊಂದು ಕೆಲಸವನ್ನು ಅಂದಿನ ಸಮಾಜವು ನಿಷೇಧಿಸಿತ್ತು. ಅಂದರೆ ಶ್ರೇಣೀಕೃತ ಜಾತಿ ವ್ಯವಸ್ಥೆ ಬಹಿಷ್ಕರಿಸಿದ, ಪಾಪ, ಅಪವಿತ್ರ, ಅನೈತಿಕವೆಂದು ಪರಿಗಣಿಸಿದ್ದ ಎಲ್ಲಾ ಸಂದರ್ಭಗಳನ್ನು, ವ್ಯಕ್ತಿಗಳನ್ನು ಮತ್ತು ಕೆಲಸಗಳನ್ನು ಅತ್ಯಂತ ಮುಖ್ಯವೆಂದು, ಇವುಗಳನ್ನು ಮಾಡುವುದೇ ತಮ್ಮ ಜೀವನದ ಪರಮೋಚ್ಚಗುರಿ ಎಂದುಕೊಂಡಿದ್ದರು. ಮತ್ತು ಅವರೆಲ್ಲರಿಗೂ ಬದುಕುವ ಧೈರ್ಯ, ಸ್ಥೈರ್ಯವನ್ನು ತುಂಬಿ ಬದುಕುವ ಭರವಸೆಯನ್ನು ಮೂಡಿಸುವಂತಹ ಮಾರ್ಗಗಳನ್ನು ಸೂಚಿಸಿದರು. ಅವುಗಳಲ್ಲಿ ಪ್ರಮುಖವಾದವುಗಳೆಂದರೆ, 1863ರಲ್ಲಿ ಅನಾಥಾಲಯವನ್ನು ಆರಂಭಿಸಿದ ಸಾವಿತ್ರಿಬಾಯಿಯ ಮಾತೃಹೃದಯ ಆ ಮಕ್ಕಳ ಬಗ್ಗೆ ಅಪಾರವಾದ ಪ್ರೀತಿಯಿಂದ ವರ್ತಿಸುತ್ತಿತ್ತು. ಅನಾಥಾಲಯಕ್ಕೆ ಸಮಾಜದಿಂದ ನಿಂದನೆಗೆ ಮತ್ತು ಟೀಕೆಗೆ ಗುರಿಯಾದ, ಅನೈತಿಕರು ಎನಿಸಿದ ಎಲ್ಲಾ ಮಹಿಳೆಯರು ಮತ್ತು ಮಕ್ಕಳು ಸೇರುವ ಮುಕ್ತ ಅವಕಾಶವನ್ನು ಕಲ್ಪಿಸಲಾಗಿತ್ತು. ಇಂತಹ ವಿಷಯಕ್ಕೆ ಸಂಬಂಧಿಸಿದಂತೆ ಸಮಾಜಕ್ಕೆ ಹೆದರಿ ಆತ್ಮಹತ್ಯೆ ಮಾಡಿಕೊಳ್ಳುವ ಬದಲು ಇಲ್ಲಿ ಆಶ್ರಯವನ್ನು ಪಡೆದುಕೊಳ್ಳುವಂತೆ ಪುಣೆ ನಗರದ ತುಂಬಾ ಪ್ರಚಾರ ಮಾಡಿದರು. ಫುಲೆ ದಂಪತಿಯ ಆಶ್ರಯದ ಕಾರಣದಿಂದಾಗಿ ಆತ್ಮಹತ್ಯೆಗಳು ಕಡಿಮೆಯಾಗುತ್ತಾ ಬಂದವು. ವಿಧವೆಯರು, ಗಂಡನಿಂದ ಹೊರದೂಡಲ್ಪಟ್ಟವರು, ಅನಾಥಮಕ್ಕಳು, ಬೇಡವೆಂದು ಬಿಸಾಡಿದ ಹೆಣ್ಣು ಹಸುಗೂಸುಗಳು ಎಲ್ಲರಿಗೂ ಈ ದಂಪತಿ ಆಶ್ರಯದಾತರಾದರು. ಮಹಿಳೆಯರ ಮೇಲೆ ಈ ಪಟ್ಟಭದ್ರ ವ್ಯವಸ್ಥೆಯು ವಿಧಿಸುತ್ತಿದ್ದ ಕ್ರೂರ ಸಂಪ್ರದಾಯ, ಶಾಸ್ತ್ರಗಳ ವಿರುದ್ಧವೂ ತಾಯಿ ಸಾವಿತ್ರಿಬಾಯಿ ಹೋರಾಡಿದರು.

ಸಾವಿತ್ರಿಬಾಯಿ ಅವರು ಕ್ಷೌರಿಕರು ವಿಧವೆಯರ ಕೂದಲನ್ನು ತೆಗೆಯುವುದಿಲ್ಲವೆಂದು ಪ್ರತಿಭಟಿಸುವಾಗ ಅವರಲ್ಲಿ ಅರಿವನ್ನು ಮೂಡಿಸಿ, 1860ರಲ್ಲಿ ಒಂದು ಹೋರಾಟವನ್ನೇ ತನ್ನ ನೇತೃತ್ವದಲ್ಲಿ ಯಶಸ್ವಿಯಾಗಿ ನಿರ್ವಹಿಸಿದರು. 1863ರಲ್ಲಿ ವಿಧವೆಯರು ಮತ್ತವರ ಮಕ್ಕಳಿಗಾಗಿ ಪ್ರಸೂತಿಗೃಹ ಮತ್ತು ಆಶ್ರಮ ತೆರೆದರು. 1868ರಲ್ಲಿ ಫುಲೆ ದಂಪತಿ ಎಲ್ಲಾ ಜಾತಿಯ ಜನರು ಬಳಸಲು ನೀರಿನತೊಟ್ಟಿ ಕಟ್ಟಿದರು. ಅಂದರೆ ಒಂದು ರಾಜಪ್ರಭುತ್ವ, ರಾಜ್ಯಾಂಗ, ಸರಕಾರ ಮಾಡುವಂತಹ ಬಹುದೊಡ್ಡ ಸಾಮಾಜಿಕ ಜನಮುಖಿ ಕಾರ್ಯಗಳನ್ನು ಕೇವಲ ಫುಲೆ ದಂಪತಿಯೇ ತಮ್ಮ ಜೀವಿತಾವಧಿಯಲ್ಲಿ ಮಾಡಿ ಮಾದರಿಯಾಗಿ ಹೋಗಿದ್ದಾರೆ. ಹಾಗೆ ನೋಡಿದರೆ ಬಹುಷ ಕೊಲ್ಲಾಪುರದ ಸಾಹು ಮಹಾರಾಜ, ಬರೋಡಾದ ಸಯ್ಯಾಜಿರಾವ್ ಗಾಯಕ್ವಾಡ್ ಮತ್ತು ಮೈಸೂರಿನ ನಾಲ್ವಡಿ ಕೃಷ್ಣರಾಜ ಒಡೆಯರ್ ಈ ಮೂರು ರಾಜ ಸಂಸ್ಥಾನಗಳು ಮಾಡಿದ ದಲಿತೋದ್ಧಾರದ ಮತ್ತು ಪ್ರಗತಿಪರ ಕೆಲಸಗಳ ಸ್ಫೂರ್ತಿ ಇಲ್ಲಿಂದ ಪಡೆದಿರಬಹುದು ಎಂದೆನಿಸುತ್ತದೆ.

ಅಲ್ಲಿಗೆ ನಿಲ್ಲಿಸದೆ 1873 ಸೆಪ್ಟಂಬರ್ 24ರಂದು 'ಸತ್ಯಶೋಧಕ ಸಮಾಜ' ಎಂಬ ಸಂಸ್ಥೆಯನ್ನು ಆರಂಭಿಸಿ ಅದರ ಮುಖಾಂತರ ಹಲವಾರು ಸಮಾಜ ಸುಧಾರಣ ಕೆಲಸಗಳನ್ನು ಮಾಡಿದರು. ಈ ಸಂಸ್ಥೆಯ ಅಡಿಯಲ್ಲಿ ಅನೇಕ ಅಂತರ್ಜಾತಿ ವಿವಾಹಗಳನ್ನು ಮಾಡಿಸುವುದು ಮತ್ತು ಮಹಿಳೆಯರ ಸಮಸ್ಯೆಗಳನ್ನು ಪ್ರಧಾನವಾಗಿ ತೆಗೆದುಕೊಂಡು ಹೋರಾಡುವುದು, ಜಾತಿವಿನಾಶ, ಸಮಾನತೆ, ಸಹಬಾಳ್ವೆ ಇವೇ ಮೊದಲಾದ ವಿಚಾರಗಳು ಸತ್ಯಶೋಧಕ ಸಮಾಜದಲ್ಲಿ ಪ್ರತಿನಿತ್ಯವು ಪ್ರತಿಧ್ವನಿಸುತ್ತಿತ್ತು.

ತಳ ಸಮುದಾಯಕ್ಕೆ ಶಿಕ್ಷಣ ನೀಡುವ ಕಾರ್ಯವು ನಿರಂತರವಾಗಿ ನಡೆಯುತ್ತಿತ್ತು. ಬಾಲ್ಯವಿವಾಹ ನಿಷೇಧ, ವಿಧವಾ ವಿವಾಹಕ್ಕೆ

ಪು.ತಿ.ನೋ.



ಪ್ರೋತ್ಸಾಹ, ಅನಾಥಮಕ್ಕಳ, ಮಹಿಳೆಯರ ರಕ್ಷಣೆ ಇವು ಸತ್ಯಶೋಧಕ ಸಮಾಜದ ಕೆಲಸಗಳಾಗಿದ್ದವು. ಸಾಮಾಜಿಕ ವ್ಯವಸ್ಥೆಗೆ ವಿರುದ್ಧವಾಗಿ ಬ್ರಾಹ್ಮಣ ವಿಧವೆಗೆ ಹುಟ್ಟಿದ್ದು ಎಂದು ಜರಿದಿದ್ದ ಮಗುವನ್ನೇ 1874ಲ್ಲಿ ದತ್ತು ಸ್ವೀಕರಿಸಿದರು. ಯಶವಂತ (ಇದೇ ಹೆಸರನ್ನು ಡಾ.ಬಿ.ಆರ್. ಅಂಬೇಡ್ಕರ್ ತಮ್ಮ ಮಗನಿಗೆ ಇಟ್ಟಿದ್ದರು) ಎಂದು ನಾಮಕರಣಗೊಂಡ ಆ ಮಗು ಮುಂದೆ ಬೆಳೆದು ವೈದ್ಯನಾಗಿ ಪುಣೆ ನಗರಕ್ಕೆ ಪ್ಲೇಗ್ ಬಂದಾಗ ತಾಯಿ ಸಾವಿತ್ರಿ ಬಾಯಿಯವರೊಂದಿಗೆ ಜನಸಾಮಾನ್ಯರ ಸೇವೆ ಮಾಡಿದರು.

1890 ನವೆಂಬರ್ 28ರಂದು ಮಹಾತ್ಮಾ ಫುಲೆ ಸಾವನ್ನಪ್ಪಿದರು. ತನ್ನ ಬಾಳಸಂಗಾತಿಯ ಚಿತೆಗೆ ಸಾವಿತ್ರಿಬಾಯಿ ಅಗ್ನಿಸ್ಪರ್ಶ ಮಾಡುವ ಮೂಲಕ ಭಾರತದ ಚರಿತ್ರೆಯಲ್ಲಿ ಹೊಸ ಅಧ್ಯಾಯ ಬರೆದರು. ಫುಲೆಯ ಮರಣದ ನಂತರ ಎಲ್ಲಾ ಜವಾಬ್ದಾರಿ ಮತ್ತು ಸವಾಲುಗಳು ಆಕೆಯ ಮೇಲೆ ಬಿದ್ದವು. ಅವುಗಳನ್ನು ಅಚ್ಚುಕಟ್ಟಾಗಿ, ದಿಟ್ಟತನದಿಂದ ಎದುರಿಸಿ, ಸಂಗಾತಿಯ ಆಶಯಗಳನ್ನು ಮುಂದುವರಿಸುವಲ್ಲಿ ಯಶಸ್ವಿಯಾದರು. ಸಾವಿತ್ರಿಬಾಯಿ ತನ್ನ 66ನೇ ವಯಸ್ಸಿನಲ್ಲಿದ್ದಾಗ ಅಂದರೆ 1897ರಲ್ಲಿ ಪುಣೆಯಲ್ಲಿ ಪ್ಲೇಗ್ ಹರಡಿತು. ರೋಗಿಗಳಿಗೆ ಔಷದೋಪಚಾರ ಮಾಡುವಲ್ಲಿ ಸಾವಿತ್ರಿಬಾಯಿ ಹಗಲಿರುಳು ವ್ಯಸ್ತರಾದರು. ಪ್ಲೇಗ್ ಅಂಟುರೋಗ, ಅದು ತನಗೂ ಬರಬಹುದೆಂದು ತಿಳಿದಿದ್ದರೂ ಸದಾ ಕಾಲ ರೋಗಿಗಳ ಮಧ್ಯೆಯೇ ಇದ್ದು ಅವರನ್ನು ಶುಶೂಷೆ ಮಾಡುವುದನ್ನು ಮಾತ್ರ ನಿಲ್ಲಿಸಲೇ ಇಲ್ಲ. ಇದು ಅವರ ಸಾಮಾಜಿಕ ಬದ್ಧತೆಯ ಜೊತೆಗೆ ರಾಜಿಯಾಗದಿರುವ ಮನಸ್ಥಿತಿಯನ್ನು ಪ್ರದರ್ಶಿಸುತ್ತದೆ. ಪ್ಲೇಗ್ ಕಾಯಿಲೆಯಿಂದ ಹುಳಗಳಂತೆ ಸಾಯುತ್ತಿದ್ದವರನ್ನು ಮುಟ್ಟಲು, ಸಂಸ್ಕಾರ ಮಾಡಲು ಯಾವ ಸರಕಾರ, ಆಡಳಿತವೂ ಮುಂದೆ ಬರದಿದ್ದಾಗ, 66 ವರ್ಷದ ಸಾವಿತ್ರಿಬಾಯಿ ಫುಲೆ ತಾವೇ ಹೆಣಗಳನ್ನು ಸ್ಮಶಾಣಕ್ಕೆ ಹೊತ್ತೊಯ್ದು ಸಂಸ್ಕಾರ ಮಾಡಿದರು. ಹಾಗೆ ನೂರಾರು ಮೃತದೇಹಗಳನ್ನು ಸಂಸ್ಕಾರ ಮಾಡಿದ ಆ ತಾಯಿಗೂ ಪ್ಲೇಗ್ ಸೋಂಕು ತಗಲಿತು. 1897 ಮಾರ್ಚ್ 10ರಂದು ಅವರು ಪ್ಲೇಗ್ ಕಾಯಿಲೆಯಿಂದ ಕಣ್ಣು ಮುಚ್ಚಿದರು. ಆ ತಾಯಿಯ ಬಿಡುವಿಲ್ಲದ ಹೋರಾಟದ ಬದುಕು ಬಸವಳಿದು ಕೊನೆಯ ಕ್ಷಣದವರೆಗೂ ಸೇವೆ ಮಾಡುತ್ತಲೇ ಸಾರ್ಥಕವನ್ನು ಕಂಡಿತು. ಹೀಗೆ ಸಾವಿತ್ರಿಬಾಯಿಫುಲೆ ಅವರ ಬಾಳ ಸಂಗಾತಿಯ ಆದರ್ಶಗಳನ್ನು ತನ್ನದಾಗಿಸಿಕೊಂಡು ಮಹಿಳೆಯರು, ಅಸ್ಪೃಶ್ಯರು, ಶೂದ್ರರ ಏಳಿಗೆಗಾಗಿ ದುಡಿದರು. ಅವರ ಜೀವನವನ್ನು ವಿವರಿಸುವಾಗ ದಂಪತಿಯನ್ನು ಬೇರ್ಪಡಿಸಿ ಹೇಳಲು ಸಾಧ್ಯವೇ ಇಲ್ಲ. ಪರಸ್ಪರ ಸಹಕಾರ ಮತ್ತು ಪ್ರೀತಿ ವಿಶ್ವಾಸದಿಂದಲೇ ಬದುಕಿತ್ತು ಈ ಜೋಡಿ.

ಸಾವಿತ್ರಿಬಾಯಿ ಅನಾಥಮಕ್ಕಳ ಮತ್ತು ಬಹಿಷ್ಕಾರಕ್ಕೊಳಪಟ್ಟ ಮಹಿಳೆಯರ ತಾಯಿಯಾಗಿ ಹಾಗೂ ಮಾದರಿ ಮಡದಿಯಾದರಲ್ಲದೆ, ಶಿಕ್ಷಕಿಯಾಗಿ, ಚಿಂತಕಿಯಾಗಿ, ಲೇಖಕಿಯಾಗಿ ಮತ್ತು ಕವಯಿತ್ರಿಯಾಗಿ ಹೊರಹೊಮ್ಮಿದ್ದು ರೋಮಾಂಚನವಾದದ್ದು. ಅನಕ್ಷರಕುಕ್ಷಿ ಮಹಿಳೆಯೊಬ್ಬಳು ಮದುವೆಯ ನಂತರ ಗಂಡನಿಂದ ಅಕ್ಷರ ಕಲಿತು, ಬ್ರಿಟಿಷ್ ಅಧಿಕಾರಿಯನ್ನು ತನ್ನ ಇಂಗ್ಲೀಷ್ ಪಾಂಡಿತ್ಯದಿಂದ ಮಣಿಸಿದ್ದು ನಿಜಕ್ಕೂ ಅವಿಸ್ಮರಣೀಯವಾದ ಘಟನೆ. ಇಂತಹ ಅನೇಕ ಅಸಾಧಾರಣ ಘಟನೆಗಳನ್ನು ನಾವು ಕಥೆಗಳಲ್ಲಿ ಮಾತ್ರವೇ ಕೇಳಲು ಸಾಧ್ಯವಿತ್ತು. ಆದರೆ ಅದನ್ನು ವಾಸ್ತವಕ್ಕಿಳಿಸಿದ ಮಹಾನ್ ವ್ಯಕ್ತಿತ್ವವೊಂದು ನಮ್ಮ ದೇಶದಲ್ಲಿ ಜೀವಿಸಿತ್ತು ಎನ್ನುವುದೇ ಪರಮಾಶ್ಚರ್ಯ.

**– ಡಾ. ಶ್ರೀಧರ ಹೆಚ್**
ಮುಖ್ಯಸ್ಥರು, ಇತಿಹಾಸ ವಿಭಾಗ

**ಮೈಸೂರು ರೇಡಿಯಂಟ್ ಆಯೋಜಿಸಿದ್ದ ಹಾಫ್ ಮ್ಯಾರಥಾನ್‌ನಲ್ಲಿ ವಿದ್ಯಾರ್ಥಿ ಸ್ವಯಂಸೇವಕರು ಭಾಗವಹಿಸಿದ್ದ ಸಂದರ್ಭ – 23.02.2025**





# ಕರ್ನಾಟಕದ ಜಲಿಯನ್ ವಾಲಾಭಾಗ್ ಖ್ಯಾತಿಯ ವಿದುರಾಶ್ವತ್ಥ



ಭಾರತ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಬಹಳಷ್ಟು ಊರು, ಗ್ರಾಮ, ನಗರಗಳು ಹೋರಾಟಗಳ ಮೂಲಕ ತಮ್ಮದೇ ಆದ ಕೊಡುಗೆಗಳನ್ನು ನೀಡುವ ಮೂಲಕ ತಮ್ಮ ಅಸ್ತಿತ್ವವನ್ನು ಉಳಿಸಿಕೊಂಡು ಬರುತ್ತಿದೆ. ಅಂತಹ ಹೋರಾಟದ ಸಾಲಿಗೆ ಜಿಲ್ಲೆಯ ಗೌರಿಬಿದನೂರು ತಾಲೂಕಿನ ವಿಧುರಾಶ್ವತ್ಥ ಗ್ರಾಮವು ದಕ್ಷಿಣದ ಜಲಿಯನ್ ವಾಲಾಭಾಗ್ ಎಂದು ಕರೆಸಿಕೊಳ್ಳುವ ಮೂಲಕ ಚರಿತ್ರೆಯ ಪುಟಗಳಲ್ಲಿ ಚಿರಸ್ಥಾಯಿಯಾಗಿ ಉಳಿದುಕೊಂಡಿದೆ.

ಪಂಜಾಬಿನ ಅಮೃತಸರದ ಜಲಿಯನ್ ವಾಲಾಭಾಗ್ ಮೈದಾನದಲ್ಲಿ ನಡೆದಂತಹವುದೇ ಒಂದು ಹೃದಯ ವಿದ್ರಾವಕ ಘಟನೆ. 1938 ರ ಏಪ್ರಿಲ್ 25 ರಂದು ಗೌರಿಬಿದನೂರಿನ ವಿಧುರಾಶ್ವತ್ಥದಲ್ಲಿ ನಡೆಯಿತು. ಧ್ವಜಸತ್ಯಾಗ್ರಹಕ್ಕೆಂದು ನೆರೆದಿದ್ದ ಜನರ ಮೇಲೆ ಪೊಲೀಸರು ಗುಂಡು ಹಾರಿಸಿ ಸುಮಾರು 32 ಜನರ ದುರಂತ ಸಾವಿಗೆ ಕಾರಣರಾಗಿದ್ದರು. ಈ ಘಟನೆ ನಂತರ ಇಡೀ ಸಂಸ್ಥಾನದಲ್ಲಿ ಚಳುವಳಿಯ ದಿಕ್ಕೇ ಬದಲಾಯಿತು. 1939ರಲ್ಲಿ ಮೈಸೂರು ಕಾಂಗ್ರೆಸ್‌ನ ಎರಡನೇ ಅಧಿವೇಶನ ವಿಧುರಾಶ್ವತ್ಥದಲ್ಲಿಯೇ ನಡೆಯಿತು.

1768ರಲ್ಲಿ ಕೋಲಾರ ಮತ್ತು ಮುಳಬಾಗಿಲು ಪ್ರದೇಶಗಳ ಮೇಲೆ ಈಸ್ಟ್ ಇಂಡಿಯಾ ಕಂಪೆನಿಯ ಸೈನ್ಯವು ಆಕ್ರಮಣ ಮಾಡುವ ಮೂಲಕ ಆಗಿನ ಕರ್ನಾಟಕ ರಾಜ್ಯದ ಈ ಭಾಗದಲ್ಲಿ ಬ್ರಿಟಿಷರ ವಿರುದ್ಧ ಯುದ್ಧಗಳು ಪ್ರಾರಂಭವಾದವು. 1917 ರಲ್ಲಿ ಪ್ರಜಾಮಿತ್ರ ಮಂಡಳಿಯು ಮೈಸೂರು ಸಂಸ್ಥಾನದ ಬೆಂಗಳೂರು, ಚಿತ್ರದುರ್ಗ, ಹಾಸನ, ಶಿವಮೊಗ್ಗ, ಕಡೂರು, ತುಮಕೂರು ಮತ್ತು ಕೋಲಾರ ಸೇರಿದಂತೆ ಒಟ್ಟು 8 ಜಿಲ್ಲೆಗಳಲ್ಲಿ ಪ್ರಥಮ ರಾಜಕೀಯ ಪಕ್ಷವಾಗಿ ಉದಯವಾಯಿತು. 1918ರ ನಂತರ ಮೈಸೂರು ಸಂಸ್ಥಾನದಲ್ಲಿ ಅಸ್ತಿತ್ವಕ್ಕೆ ಬಂದ ಪ್ರಾಂತೀಯ ಕಾಂಗ್ರೆಸ್ ಸಮಿತಿಯು ಮದ್ಯಪಾನ ನಿಷೇಧ ಹಿಂದಿ ಭಾಷಾ ವಿಚಾರ ಧಾರ್ಮಿಕ ಏಕತೆ, ಅಸ್ಪೃಶ್ಯತೆ ನಿವಾರಣೆ ಮತ್ತು ಖಾದಿ ಪ್ರಚಾರಗಳ ಮೂಲಕ ರಾಷ್ಟ್ರೀಯ ಭಾವನೆ ಮೂಡಿಸುವ ಕಾರ್ಯಕ್ರಮಗಳನ್ನು ಹಮ್ಮಿಕೊಂಡರೂ ರಾಷ್ಟ್ರೀಯ ಸ್ವಾತಂತ್ರ್ಯದ ಪರಿಕಲ್ಪನೆಗೆ ರಾಜ್ಯದಲ್ಲಿ ಯಾವುದೇ ನಿರ್ದಿಷ್ಟ ಸ್ವರೂಪ ನೀಡಲು ಸಾಧ್ಯವಾಗಿಲ್ಲ.

1934ರಲ್ಲಿ ಮೈಸೂರು ಪ್ರಜಾ ಸಂಯುಕ್ತ ಸಂಸ್ಥೆ ಎಂಬ ಹೆಸರಿನಲ್ಲಿ ಒಂದುಗೂಡಿದವು. ಕಾಂಗ್ರೆಸ್‌ನ ಕಾರ್ಯಕ್ರಮಗಳ ಅನುಷ್ಠಾನ ಮುಂತಾದ ಧ್ಯೇಯೋದ್ದೇಶಗಳನ್ನು ಈ ಪಕ್ಷ ಹೊಂದಿತ್ತು.

ಕೆ.ಚೆಂಗಲರಾಯರೆಡ್ಡಿ, ವಿ.ವೆಂಕಟಪ್ಪ, ಎಸ್.ಸಿ.ನಾಗಯ್ಯ ರೆಡ್ಡಿ, ಎಚ್.ಸಿ.ದಾಸಪ್ಪ, ಎಚ್.ಸಿದ್ದಯ್ಯ, ಎಚ್.ಗುಂಡಪ್ಪಗೌಡ ಮುಂತಾದ ಮುಖಂಡರ ನಾಯಕತ್ವದಲ್ಲಿ ಪಕ್ಷ ಸಮರ್ಥವಾಗಿ ಬೆಳೆಯಿತು. ಸರ್ಕಾರದ ದಮನಕಾರಿ ನೀತಿಯನ್ನು ಖಂಡಿಸಲು ಹಾಗೂ ಸಂಸ್ಥಾನದಲ್ಲಿ ಕಾಂಗ್ರೆಸ್ ಸಂಸ್ಥೆಯನ್ನು ಬಲಪಡಿಸಲು ಮೈಸೂರು ಕಾಂಗ್ರೆಸ್ ಬೋರ್ಡ್‌ನ ಪರವಾಗಿ ಕೌನ್ಸಿಲ್ ಆಫ್ ಆ್ಯಕ್ಷನ್ ಎಂಬ ಸಮಿತಿಯನ್ನು ಟಿ.ಸಿದ್ದಲಿಂಗಯ್ಯನವರ ನೇತೃತ್ವದಲ್ಲಿ ನೇಮಿಸಲಾಯಿತು.

ಕಾಂಗ್ರೆಸ್ ಪಕ್ಷದೊಡನೆ ಪ್ರಜಾಸಂಯುಕ್ತ ಪಕ್ಷವನ್ನು ವಿಲೀನಗೊಳಿಸುವ ನಿಟ್ಟಿನಲ್ಲಿ ಟಿ.ಸಿದ್ದಲಿಂಗಯ್ಯ, ಕೆ.ಚೆಂಗಲರಾಯರೆಡ್ಡಿ, ಎನ್.ಎಸ್.ಹರ್ಡೀಕರ್ ಮತ್ತು ಕಮಲಾದೇವಿ ಚಟ್ಟೋಪಾಧ್ಯಾಯರು ಪ್ರಮುಖ ಪಾತ್ರ ವಹಿಸಿದ್ದರು. ಈ ಪ್ರಯತ್ನಗಳು ಜಾರಿಯಲ್ಲಿರುವಾಗಲೇ ಕಾಂಗ್ರೆಸ್ ನಾಯಕರಾದ ಕೆ.ಟಿ.ಭಾಷ್ಯಮ್, ಎನ್.ಸಿ.ತಿಮ್ಮಾರೆಡ್ಡಿ ಬಂಧನವಾದ್ದರಿಂದ ಸಂಸ್ಥಾನದ ಹೋರಾಟ ಉಗ್ರ ಸ್ವರೂಪ ತಾಳಿತು. ಕರ್ನಾಟಕ ಸ್ವಾತಂತ್ರ್ಯ ಚಳುವಳಿಯಲ್ಲಿ ಶಿವಪುರದಲ್ಲಿ ನಡೆದ ಕಾಂಗ್ರೆಸ್ ಅಧಿವೇಶನ ಪ್ರಮುಖ ಪಾತ್ರ ಪಡೆದಿದೆ. 1938 ರಲ್ಲಿ ಮಂಡ್ಯ ಜಿಲ್ಲೆಯ ಶಿವಪುರದಲ್ಲಿ ಕಾಂಗ್ರೆಸ್ ಅಧಿವೇಶನವನ್ನು ನಡೆಸಲು ಸಿದ್ಧತೆಗಳು ನಡೆಯುತ್ತಿದ್ದಂತೆ ಕಾಂಗ್ರೆಸ್ ಧ್ವಜವನ್ನು ಹಾರಿಸುವುದನ್ನು ಮೈಸೂರು ಸರ್ಕಾರ ನಿಷೇಧಿಸಿತು. ಇವುಗಳ ಸಾಲಿನಲ್ಲಿ ಗೌರಿಬಿದನೂರು ತಾಲೂಕಿನ ವಿಧುರಾಶ್ವತ್ಥದಲ್ಲಿ ನಡೆದ ಧ್ವಜ ಸತ್ಯಾಗ್ರಹವು ಇತಿಹಾಸದ ಪುಟಗಳಲ್ಲಿ ಅವಿಸ್ಮರಣೀಯವಾಗಿದೆ.

ಪ್ರವಾಸಿಗರನ್ನು ಆಕರ್ಷಿಸುತ್ತಿರುವ ವಿಧುರಾಶ್ವತ್ಥ ಗ್ರಾಮವನ್ನು ರಾಷ್ಟ್ರೀಯ ಸ್ವಾತಂತ್ರ್ಯ ಚಳುವಳಿಯ ಇತಿಹಾಸದ, ಪುಟಗಳಲ್ಲಿ ಕರ್ನಾಟಕದ ಜಲಿಯನ್ ವಾಲಾಬಾಗ್ ಎಂದೇ ಗುರುತಿಸಲಾಗುತ್ತದೆ. ಅಲ್ಲದೆ ಅವಿಭಜಿತ ಕೋಲಾರ ಜಿಲ್ಲೆಯ ಈಗಿನ ಚಿಕ್ಕಬಳ್ಳಾಪುರ ಜಿಲ್ಲೆಯ ಗೌರಿಬಿದನೂರು ತಾಲೂಕಿನ ವಿಧುರಾಶ್ವತ್ಥವನ್ನು ಆಸ್ತಿಕರು ಪವಿತ್ರ ಕ್ಷೇತ್ರವೆಂದು ಪರಿಗಣಿಸುತ್ತಾರೆ.

ಅವಿಭಜಿತ ಕೋಲಾರ ಜಿಲ್ಲೆಯ ಈಗಿನ ಚಿಕ್ಕಬಳ್ಳಾಪುರ ಜಿಲ್ಲೆಯ ಗೌರಿಬಿದನೂರು ತಾಲೂಕಿನ ವಿದುರಾಶ್ವತ್ಥವನ್ನು ಆಸ್ತಿಕರು ಪವಿತ್ರ ಕ್ಷೇತ್ರವೆಂದು ಪರಿಗಣಿಸುತ್ತಾರೆ. ಇಲ್ಲಿ ಅಶ್ವತ್ಥನಾರಾಯಣ ಸ್ವಾಮಿಯ ದೇವಸ್ಥಾನವೂ ಇದೆ. ಈ ಸಂದರ್ಭದಲ್ಲಿ ಹಿಂದೂಪುರ, ಅನಂತಪುರಂ, ಒಳಗೊಂಡಂತೆ ನೆರೆಯ ರಾಜ್ಯಗಳ ದೂರದ ಊರುಗಳಿಂದ ಇಲ್ಲಿ ಪ್ರತಿಷ್ಠೆ ಮಾಡಿರುವ ನಾಗರ ಕಲ್ಲು, ವೀರಸೌಧ, ವೀರಗಲ್ಲುಗಳಂತಹ ಹಲವರು ಸ್ಥಳಗಳನ್ನು ವೀಕ್ಷಿಸಲು ಮತ್ತು ಪೂಜಾ ಕೈಕಾರ್ಯಗಳಲ್ಲಿ ಭಾಗವಹಿಸಲು ಲಕ್ಷಾಂತರ ಭಕ್ತರು ಆಗಮಿಸುತ್ತಾರೆ.

**– ಪ್ರಸನ್ನ ಎಸ್**
ಪ್ರಥಮ ಬಿ.ಎ.



## ಆರ್. ಶಾಮಾಶಾಸ್ತ್ರಿ



ಕೌಟಿಲ್ಯನ ಅರ್ಥಶಾಸ್ತ್ರವನ್ನೂ ಒಳಗೊಂಡಂತೆ ಮಹತ್ವದ ಕೃತಿಗಳನ್ನು ಬೆಳಕಿಗೆ ತಂದ ಮಹಾನ್ ವಿದ್ವಾಂಸ ಮತ್ತು ಹಲವು ಮಹತ್ವದ ಪ್ರತಿಭೆಗಳ ಸಂಗಮರಾಗಿದ್ದ ಆರ್. ಶಾಮಾಶಾಸ್ತ್ರಿಗಳು 1868 ರ ಜನವರಿ 12 ರಂದು ಹಾಸನ ಜಿಲ್ಲೆಯ ರುದ್ರಪಟ್ಟಣದಲ್ಲಿ ಜನಿಸಿದರು. ಶಾಸ್ತ್ರಿಗಳಿಗೆ ಕನ್ನಡ, ಇಂಗ್ಲಿಷ್, ಸಂಸ್ಕೃತ ಭಾಷೆಗಳ ಜೊತೆಗೆ ಜ್ಯೋತಿಷ್ಯ ಶಾಸ್ತ್ರದಲ್ಲೂ ಅಪಾರ ಪಾಂಡಿತ್ಯವಿತ್ತು.

ಶಾಮಾಶಾಸ್ತ್ರಿಗಳ ನಿಸ್ವಾರ್ಥ ಸೇವೆಗಾಗಿ ಅಮೆರಿಕದ ವಾಷಿಂಗ್‌ಟನ್ ವಿಶ್ವ ವಿದ್ಯಾಲಯಕ್ಕೆ ಸೇರಿದ ಓರಿಯಂಟಲ್ ಯೂನಿವರ್ಸಿಟಿಯ ಫಿಲಾಸಫಿಕಲ್ ಎಂಬ ಸಂಸ್ಥೆ 1919 ರಲ್ಲಿ ಇವರಿಗೆ ಪಿಎಚ್. ಡಿ ಪದವಿ ಕೊಟ್ಟು ಗೌರವಿಸಿತು. 1921 ರಲ್ಲಿ ರಾಯಲ್ ಏಷಿಯಾಟಿಕ್ ಸೊಸೈಟಿಯು (ಮುಂಬಯಿ ಶಾಖೆ) ಕಾಂಪ್‌ಬೆಲ್ ಸ್ಮಾರಕ ಚಿನ್ನದ ಪದಕ ಕೊಟ್ಟು ಗೌರವಿಸಿತು.

ಕಲ್ಕತ್ತ ವಿಶ್ವವಿದ್ಯಾಲಯವು 1921 ರಲ್ಲಿ ಡಾಕ್ಟರ್ ಆಫ್ ಫಿಲಾಸಫಿ ಪದವಿ ನೀಡಿತು. ಮೈಸೂರಿನ ಮಹಾರಾಜರಿಂದ ಅರ್ಥಶಾಸ್ತ್ರ ವಿಶಾರದ, ಆಗಿನ ಬ್ರಿಟಿಷ್ ಸರಕಾರದ ಮಹಾಮಹೋಪಾಧ್ಯಾಯ ಪ್ರಶಸ್ತಿ, ಕಾಶಿಯ ಭಾರತ ಧರ್ಮ ಮಹಾಮಂಡಲದಿಂದ ವಿದ್ಯಾಲಂಕಾರ, ಪಂಡಿತರಾಜ ಬಿರುದು ಮುಂತಾದ ಹಲವಾರು ಗೌರವಗಳು ಶಾಮಾಶಾಸ್ತ್ರಿಗಳಿಗೆ ಸಂದಿದ್ದವು.

ಬಹುಭಾಷಾ ಪ್ರಾಜ್ಞರಾಗಿದ್ದ ರುದ್ರಪಟ್ನ ಶಾಮಾಶಾಸ್ತ್ರಿಗಳು 1944 ವರ್ಷದ ಜನವರಿ 23 ರಂದು ನಿಧನರಾದರು.

**– ಮಾನ್ಯಶ್ರೀ ಎನ್**
ದ್ವಿತೀಯ ಬಿ.ಎ.

## 'ಕದಂಬ' ಮಾಸ ಸಂಚಿಕೆ–46 ಬಿಡುಗಡೆಯ ಸಂದರ್ಭ





## ಶ್ರೀರಂಗಪಟ್ಟಣದ ಸಮೀಪವಿರುವ ಸುಪ್ರಸಿದ್ಧ 'ಪಯಣ ವಿಂಟೇಜ್ ಕಾರ್ ಮ್ಯೂಸಿಯಂ'ಗೆ ಭೇಟಿ ನೀಡಿದ ಸಂದರ್ಭ – 18.02.2025











PAYANA ಪಯಣ
GPS Map Camera


MYB 3374








MYX 5206







## ಇತಿಹಾಸ, ಅರ್ಥಶಾಸ್ತ್ರ, ಭೂಗೋಳಶಾಸ್ತ್ರ ಮತ್ತು ಸಮಾಜಶಾಸ್ತ್ರ ವಿಭಾಗಗಳ ಸಹಯೋಗದಲ್ಲಿ ಒಂದು ದಿನದ ಶೈಕ್ಷಣಿಕ ಅಧ್ಯಯನ ಪ್ರವಾಸ – 22.02.2025

## ಸ್ಥಳಗಳು: ಶ್ರೀರಂಗಪಟ್ಟಣ, ಕುಂತಿಬೆಟ್ಟ, ಶಿವಶೈಲಾ ಹಾಗೂ ಕೆರೆತೊಣ್ಣೂರು










ಶಿಕ್ಷಣದಿಂದ ಶ್ರೇಷ್ಠತೆ

**ಎಸ್‌ಬಿಆರ್‌ಆರ್ ಮಹಾಜನ ಪ್ರಥಮದರ್ಜೆ ಕಾಲೇಜು (ಸ್ವಾಯತ್ತ)**

ಜಯಲಕ್ಷ್ಮೀಪುರಂ, ಮೈಸೂರು–12

ಶ್ರೇಷ್ಠತೆಯ ಸಾಮರ್ಥ್ಯವುಳ್ಳ ಕಾಲೇಜು

**ಇತಿಹಾಸ ವಿಭಾಗ**

**Dept. of History**

**ಮೈಸೂರು ವಿಶ್ವವಿದ್ಯಾನಿಲಯದಿಂದ ಸಂಯೋಜನೆಗೊಂಡು, ನ್ಯಾಕ್‌ನಿಂದ 'ಎ' ಮಾನ್ಯತೆ ಪಡೆದಿದೆ.**




ಸಂಚಿಕೆ: 48 ಏಪ್ರಿಲ್ 2025 | ಪ್ರಧಾನ ಸಂಪಾದಕರು: ಡಾ. ಬಿ.ಆರ್. ಜಯಕುಮಾರಿ, ಪ್ರಾಂಶುಪಾಲರು | www.mahajana.edu.in | ಸಂಪಾದಕರು: ಡಾ. ಶ್ರೀಧರ ಹೆಚ್, ಇತಿಹಾಸ ವಿಭಾಗ | ಪುಟಗಳು: 10



**ಸಂಪಾದಕೀಯ**

# ಕರ್ನಾಟಕದ ಅಪ್ರತಿಮ ಹೋರಾಟಗಾರ ಮೈಲಾರ ಮಹಾದೇವಪ್ಪ

ಬಂದೂಕುಗಳು ಇದ್ದರೂ ಮಹದೇವಪ್ಪನವರು ಅಹಿಂಸಾ ತತ್ವಕ್ಕೆ ಕಟ್ಟಿಬದ್ಧರಾಗಿದ್ದರಿಂದ ಯಾರೂ ಗುಂಡು ಹಾರಿಸಬಾರದೆಂದು ಆಜ್ಞೆ ಮಾಡಿಬಿಟ್ಟರು. ಆದರೆ ಎದುರಾಳಿಗಳ 3–4 ಬುಲೆಟ್‌ಗಳು ಮೈಲಾರರ ಎದೆ ಸೀಳಿಬಿಟ್ಟವು. ಅಹಿಂಸೆ ಅಹಿಂಸೆ... ಭಾರತ್ ಮಾತಾ ಕಿ ಜೈ ಎನ್ನುತ್ತಾ ಅವರು ನೆಲಕ್ಕುರುಳಿದರು.

ನಮ್ಮ ದೇಶದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಭಾಗವಹಿಸಿ ಪ್ರಾಣತ್ಯಾಗ ಮಾಡಿದ ಮಹನೀಯರ ಸಾಲಿನಲ್ಲಿ ಎದ್ದು ಕಾಣುವ ಪ್ರಮುಖ ಹೆಸರು, ಹುತಾತ್ಮ ಮೋಟೆಬೆನ್ನೂರಿನ ಮೈಲಾರ ಮಹಾದೇವಪ್ಪನವರದು. ಅತಿ ಚಿಕ್ಕ (14) ವಯಸ್ಸಿನಲ್ಲಿಯೇ ಅವರು ಸ್ವಾತಂತ್ರ್ಯ ಹೋರಾಟದ ಬಗ್ಗೆ ತಿಳಿದುಕೊಂಡು ತಮ್ಮ ತಲೆ ಮೇಲಿನ ವಿದೇಶಿ ಜರಿ ಟೊಪ್ಪಿಗೆಯನ್ನು ತೆಗೆದು ನೆಲಕ್ಕೆ ಬಿಸಾಡಿ ಶಾಲೆ, ಮನೆ, ಹುಟ್ಟೂರುಗಳನ್ನು ತೊರೆದು ಹೋರಾಟದ ಕೇಂದ್ರಗಳಾದ ಧಾರವಾಡ, ಕಲಾದಗಿಗಳಲ್ಲಿ ವಿಧಾಯಕ ಕಾರ್ಯಕ್ರಮಗಳಲ್ಲಿ ಭಾಗಿಯಾಗಲು ಹೊರಟರು. ಅಲ್ಲಿ ಅವಶ್ಯಕ ತರಬೇತಿ ಪಡೆದುಕೊಂಡರು. ಹೀಗೆ ಧಾರವಾಡದ ಯುವಕರ ಸಂಘದಲ್ಲಿದ್ದಾಗ ಹಿರಿಯರಾದ ರಂಗನಾಥ್ ದಿವಾಕರ್, ಹಳ್ಳಿಕೇರಿ ಗುದ್ಲೆಪ್ಪ ಮುಂತಾದ ಹಿರಿಯ ಹೋರಾಟಗಾರರ ಸಂಪರ್ಕ ದೊರೆಯಿತು. ಅತ್ಯುತ್ಸಾಹದ ಮಹದೇವಪ್ಪ ತಾನು ಇನ್ನೂ ಹೆಚ್ಚಿನ ಪಾತ್ರ ವಹಿಸಬೇಕು ಸ್ವಾತಂತ್ರ್ಯ ಆಂದೋಲನದಲ್ಲಿ ಎಂದು ಅಂದುಕೊಳ್ಳುತ್ತಿದ್ದ. ಇಂತಹ ಒಂದು ಸುದಿನ ಅವನನ್ನು ಅರಸಿಕೊಂಡು ಬಂದೇ ಬಿಟ್ಟಿತು. ಈತನ ಮನೋ ಇಂಗಿತ ಅರಿತ ದಿವಾಕರರು, ಗಾಂಧೀಜಿಯವರ ಕೋರಿಕೆಯಂತೆ, ಮಹಾದೇವನನ್ನು ಸಬರಮತಿಗೆ ಕಳಿಸಿಕೊಡಲು ಮುಂದಾದರು. ಇದನ್ನೇ ಕಾಯುತ್ತಿದ್ದ ಆತ ಅತ್ಯುತ್ಸಾಹದಿಂದ ಅಲ್ಲಿಗೆ ಹೊರಟ.

**ಕರ್ನಾಟಕದ ಏಕಮೇವ ಪ್ರತಿನಿಧಿ**

ಹೀಗೆ ಮಹದೇವ ಹೊರಟಿದ್ದು ದಂಡಿ ಯಾತ್ರೆಯಲ್ಲಿ ಭಾಗಿಯಾಗಲು. ಗಾಂಧೀಜಿಯವರೊಡನೆ ಐತಿಹಾಸಿಕ ಉಪ್ಪಿನ ಸತ್ಯಾಗ್ರಹದ ಪಾದಯಾತ್ರೆಯಲ್ಲಿ ಪಾಲ್ಗೊಳ್ಳಲು. 1930ರ ಮಾರ್ಚ್ 12 ರಿಂದ ಏಪ್ರಿಲ್ 6ರ ವರೆಗೆ 370 ಕಿಲೋಮೀಟರ್ ದೂರವನ್ನು 25 ದಿನಗಳಲ್ಲಿ ಕ್ರಮಿಸಿ, ಬ್ರಿಟಿಷರು ವಿಧಿಸಿದ ಉಪ್ಪಿನ ತೆರಿಗೆಯನ್ನು ಧಿಕ್ಕರಿಸಲು ದಂಡಿಯ ಸಮುದ್ರ ತೀರ ತಲುಪಿದಾಗ, ಗಾಂಧೀಜಿಯವರ ಜೊತೆ ಯುವಕ ಮಹದೇವನಿಗೂ 6 ತಿಂಗಳು ಕಾರಾಗೃಹ ಶಿಕ್ಷೆಯಾಯಿತು. ಹೀಗೆ ಭಾಗವಹಿಸಿದ ಶಿಕ್ಷೆಗೆ ಗುರಿಯಾದ ಕರ್ನಾಟಕದ ಏಕಮೇವ ಪ್ರತಿನಿಧಿ ಮೈಲಾರ ಮಾದೇವಪ್ಪ, ಇವರು ಭಾಗವಹಿಸದೆ ಹೋಗಿದ್ದರೆ.... ಈ ಐತಿಹಾಸಿಕ ಆಂದೋಲನದಲ್ಲಿ ಕನ್ನಡನಾಡಿನ ಸಾಧನೆ ಶೂನ್ಯವಾಗಿ ಹೋಗುತ್ತಿತ್ತು. ಅದನ್ನು ನಿವಾರಿಸಿದ ಕೀರ್ತಿ ಕನ್ನಡಿಗರ ಕೆಚ್ಚೆದೆಯ ಕುರುಹಾದ ಮೈಲಾರ ಮಹಾದೇವಪ್ಪ.

**ಉಪ್ಪಿನ ಮೈಲಾರರು**

ಹೀಗೆ ಉಪ್ಪಿನ ಸತ್ಯಾಗ್ರಹದಲ್ಲಿ ಭಾಗವಹಿಸಿದ ಮಹಾದೇವ ಮೈಲಾರರು, ಜೈಲಿನಿಂದ ಬಿಡುಗಡೆಗೊಂಡು ಕನ್ನಡ ನಾಡಿಗೆ ಬಂದಾಗ ಅವರಿಗೆ ವೀರೋಚಿತ ಸ್ವಾಗತ ದೊರೆಯಿತು. ಭವ್ಯ ಮೆರವಣಿಗೆ, ಸಭೆ ಸಮಾರಂಭಗಳು ಸಾಂಗವಾಗಿ ನೆರವೇರಿದವು. ಮುಂದೆ ಅವರು ಉಪ್ಪಿನ ಮೈಲಾರ ಎಂದೇ ಪ್ರಸಿದ್ಧರಾದರು. ಆದರೆ ಮಹಾದೇವ ಇದಾವುದನ್ನೂ ತಲೆಗೇರಿಸಿಕೊಳ್ಳಲಿಲ್ಲ. ಸಬರಮತಿ ಆಶ್ರಮದಲ್ಲಿ ದೊರೆತ ತರಬೇತಿ ಅನುಭವಗಳನ್ನು ಅನುಷ್ಠಾನಗೊಳಿಸಲು ಕೊರಡೂರು ಗ್ರಾಮದಲ್ಲಿ, ಗ್ರಾಮ ಸೇವಾಶ್ರಮ ಪ್ರಾರಂಭಿಸಿದರು. ಅಲ್ಲಿ ಚರಕ ತರಬೇತಿ, ನೂಲುವುದು, ಲಡಿ ಸುತ್ತುವುದು, ಬಟ್ಟೆ ತಯಾರಿಸುವುದು ನಂತರ ತಲೆಮೇಲೆ ಹೊತ್ತು ಮಾರುವುದು. ಅಸ್ಪೃಶ್ಯತಾ ನಿವಾರಣೆ, ಹರಿಜನಕೇರಿ ಸ್ವಚ್ಛಗೊಳಿಸುವುದು, ಯೋಗಾಸನ, ವ್ಯಾಯಾಮ, ಆಯುರ್ವೇದ, ದೇಸಿ ಔಳಧಿ ಪ್ರಯೋಗ ಇತ್ಯಾದಿ ತರಬೇತಿಕೊಡಲು ವ್ಯವಸ್ಥೆ ಮಾಡಲಾಯಿತು. ಇಷ್ಟೊತ್ತಿಗೆ ಮಹಾದೇವಪ್ಪರ ಹಿಂದೆ ಒಂದು ದೊಡ್ಡ ಹೋರಾಟಗಾರರ ತಂಡವೇ ನಿರ್ಮಾಣವಾಗಿತ್ತು.

**ನಿರಂತರ ಹೋರಾಟ**

ಆಂಗ್ಲರ ಆಡಳಿತವನ್ನು ನೆಲಸಮಗೊಳಿಸಲು, ಆ ಸರ್ಕಾರವನ್ನು ನಿಷ್ಕ್ರಿಯಗೊಳಿಸಲು ಹಾಕಿಕೊಂಡ ಕಾರ್ಯಕ್ರಮಗಳು ಉಗ್ರಸ್ವರೂಪ ಪಡೆದುಕೊಳ್ಳತೊಡಗಿದವು. ಇಂತಹ ಎಲ್ಲವುಗಳಲ್ಲಿಯೂ ಮೈಲಾರರ ತಂಡ ಕ್ರಿಯಾಶೀಲವಾಗಿ ತೊಡಗಿಕೊಂಡಿತು. ಬ್ರಿಟಿಷರ ಸರ್ಕಾರಿ

ಪು.ತಿ.ನೋ.



ಖಜಾನೆ, ಅಂಚೆ, ರೈಲ್ವೆ ಕಚೇರಿಗಳನ್ನು ಧ್ವಂಸಮಾಡುವುದು, ಲೂಟಿ ಹೊಡೆಯುವುದು ಇತ್ಯಾದಿಗಳನ್ನು ವ್ಯವಸ್ಥಿತವಾಗಿ ನಡೆಸುತ್ತ ಮುನ್ನಡೆಯಲಾಯಿತು. ಮುಂದಿನ 10–12 ವರ್ಷಗಳಲ್ಲಿ ಮೈಲಾರರು ನಾಲ್ಕಾರು ಸಲ ಬಂಧಿಸಲ್ಪಟ್ಟು ತಮ್ಮ ಹರೆಯದ ಬಹುಭಾಗವನ್ನು ಕಾರಾಗೃಹದಲ್ಲಿಯೇ ಕಳೆಯುವಂತಾಯಿತು. ಹಾಗೆಯೇ ಅವರ ಧರ್ಮಪತ್ನಿ ಸಿದ್ಧಮ್ಮ ಕೂಡ ಗುಜರಾತ್ ಹಾಗೂ ಕರ್ನಾಟಕದ ಕೆಲವು ಜೈಲುಗಳಲ್ಲಿ ಶಿಕ್ಷೆ ಅನುಭವಿಸಿ ಹೊರಬರುತ್ತಿದ್ದರು.

ಹೀಗೆ ಸಬರಮತಿ ಆಶ್ರಮದಲ್ಲಿ ಗಾಂಧೀಜಿ ಹಾಗೂ ಕಸ್ತೂರಬಾ ಅವರ ಜೊತೆಯಲ್ಲಿ ಇದ್ದು, ಸ್ವಾತಂತ್ರ್ಯ ಆಂದೋಲನದಲ್ಲಿ ಧುಮುಕಿ ಜೈಲುವಾಸ ಅನುಭವಿಸಿದ ದಂಪತಿ ಸಿಗುವುದು ದೇಶದಲ್ಲಿಯೇ ಅಪರೂಪ. ಇತಿಹಾಸದಲ್ಲಿ ಅನೇಕ ಕನ್ನಡಿಗರಿಗೆ ಆದ ಅವಜ್ಞೆ ಇವರನ್ನೂ ಬಿಡಲಿಲ್ಲ. ಮುಂದೆ ಚಲೇಜಾವ್ ಚಳುವಳಿಯಲ್ಲೂ ಮಹದೇವಪ್ಪ ಹಾಗೂ ಅವರ ತಂಡದ (ಪ್ರಮುಖರು: ಎಫ್.ಎಸ್.ತಾವರೆ, ವೆಂಕಣ್ಣಾಚಾರ್ಯ ವಾಯಿ ಇವರಿಬ್ಬರೂ ನಂತರ ಶಾಸಕರಾದರು) ಅನೇಕರು ಆಂದೋಲನದಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡು ಜೈಲು ಶಿಕ್ಷೆ ಅನುಭವಿಸಿದರು.

**ಅಂತಿಮ ಹೋರಾಟ**

ಬಹುದೊಡ್ಡ ಪ್ರಮಾಣದಲ್ಲಿ ಯುವಕರನ್ನು ಆಂದೋಲನಕ್ಕೆ ಸೆಳೆಯಬೇಕೆಂದು ಮಹಾದೇವಪ್ಪನವರು ಕಾರ್ಯಪ್ರವೃತ್ತರಾದರು. ಇದರಂಗವಾಗಿ ಹೊಸರೀತಿಯ ಕಂದಾಯ ಕಚೇರಿ / ಖಜಾನೆಯನ್ನು ಧ್ವಂಸ ಮಾಡಲು ಯೋಜನೆಯನ್ನು ಹಾಕಿಕೊಳ್ಳಲಾಯಿತು. ಇಷ್ಟೊತ್ತಿಗಾಗಲೇ ಬ್ರಿಟಿಷ್ ಸರಕಾರ ಮಹದೇವಪ್ಪರನ್ನು ಹಿಡಿದುಕೊಟ್ಟವರಿಗೆ ಬಹುದೊಡ್ಡ ಮೊತ್ತದ ನಗದು ಬಹುಮಾನ ಘೋಷಿಸಿ ಆಗಿತ್ತು. ಇದಕ್ಕಾಗಿಯೇ ದೂರದ ಪುಣೆಯಿಂದ ವಿಶೇಷ ಪೊಲೀಸ್ ಪಡೆಯನ್ನು ತರಿಸಲಾಗಿತ್ತು ಕೂಡ. ಇದೆಲ್ಲ ಗೊತ್ತಿದ್ದೂ ಮಹಾದೇವಪ್ಪನವರು ಎದೆಗುಂದಲಿಲ್ಲ. ಹಾಕಿಕೊಂಡ ಯೋಜನೆಯಂತೆ, 1943ರ ಏಪ್ರಿಲ್ 1 ರಂದು ಬೆಳಗಿನ 7ರ ಹೊತ್ತಿಗೆ ಎರಡು ತಂಡಗಳಲ್ಲಿ ಚಕ್ಕಡಿಗಳಲ್ಲಿ ಮಾರುವೇಷದಲ್ಲಿ ಬಂದು ವೀರಭದ್ರ ಗುಡಿಯಲ್ಲಿದ್ದ ಖಜಾನೆಗೆ ಮುತ್ತಿಗೆ ಹಾಕಲಾಯಿತು. ತಕ್ಷಣ ಎಚ್ಚೆತ್ತ ವಿಶೇಷ ಪೊಲೀಸ್ ಪಡೆ ಗುಂಡಿನ ಮಳೆ ಸುರಿಸತೊಡಗಿತು. ಇವರಲ್ಲಿಯೂ ಸಾಕಷ್ಟು ಬಂದೂಕುಗಳು ಇದ್ದರೂ ಮಹದೇವಪ್ಪನವರು ಅಹಿಂಸಾ ತತ್ವಕ್ಕೆ ಕಟ್ಟಿಬದ್ಧರಾಗಿದ್ದರಿಂದ ಯಾರೂ ಗುಂಡು ಹಾರಿಸಬಾರದೆಂದು ಆಜ್ಞೆ ಮಾಡಿಬಿಟ್ಟರು. ಆದರೆ ಎದುರಾಳಿಗಳ 3–4 ಬುಲೆಟ್‌ಗಳು ಮೈಲಾರರ ಎದೆ ಸೀಳಿಬಿಟ್ಟವು. ಅಹಿಂಸೆ ಅಹಿಂಸೆ... ಭಾರತ್ ಮಾತಾ ಕಿ ಜೈ ಎನ್ನುತ್ತಾ ಅವರು ನೆಲಕ್ಕುರುಳಿದರು. ಆಗ ವಯಸ್ಸು ಕೇವಲ 32. ಈ ಹುತಾತ್ಮನ ಜೊತೆಗೆ ವೀರಯ್ಯ ಹಿರೇಮಠ್, ತೀರಕಪ್ಪ ಮಡಿವಾಳರ ಎಂಬ ಇಬ್ಬರು ಹೋರಾಟಗಾರರೂ ವೀರಮರಣ ಅಪ್ಪಿದರು. ಇವರ ತ್ಯಾಗ ಬಲಿದಾನ ಕೊಂಡಾಡಿದ ಕವಿ ಸಮ್ಮದ್ ಸಾಹೇಬರ ಲಾವಣಿಯ ಈ ಒಂದು ಸಾಲು ನೋಡಿ...ದಿಟ್ಟನ ಹೆಸರನು ಹುಟ್ಟಿದ ಕೂಸಿಗೆ ಇಟ್ಟರೂ ತೀರದು ಉಪಕಾರ. ಹೌದು ಇಂತಹ ಶ್ರೇಷ್ಠರ ಹೆಸರು ಭಗತ್ ಸಿಂಗ್, ರಾಜಗುರು, ಸುಖದೇವರ ಸಾಲಿನಲ್ಲಿ ನಿಲ್ಲುವಂತಹದು. ಏಪ್ರಿಲ್ 1 ಅವರು ಹುತಾತ್ಮರಾದ ದಿನ. ಇಂದು ಅವರನ್ನು ಭಕ್ತಿ ಗೌರವದಿಂದ ಸ್ಮರಿಸುವುದು ಭಾರತೀಯರೆಲ್ಲರ ಆದ್ಯ ಕರ್ತವ್ಯ.

**– ಡಾ. ಶ್ರೀಧರ ಹೆಚ್**

ಮುಖ್ಯಸ್ಥರು, ಇತಿಹಾಸ ವಿಭಾಗ

## ಭಾರತದ ಮೊದಲ ಮಹಿಳೆಯರು

- ಭಾರತದ ಮೊದಲ ಮಹಿಳಾ ರಾಷ್ಟ್ರಪತಿ – ಪ್ರತಿಭಾ ದೇವಿಸಿಂಗ್ ಪಾಟೀಲ್
- ಭಾರತದ ಮೊದಲ ಮಹಿಳಾ ಪ್ರಧಾನಿ – ಇಂದಿರಾ ಪ್ರಿಯದರ್ಶಿನಿ ಗಾಂಧಿ
- ಬಾಹ್ಯಾಕಾಶದಲ್ಲಿ ಮೊದಲ ಮಹಿಳೆ – ಕಲ್ಪನಾ ಚಾವ್ಲಾ
- ಸೇನೆಯಲ್ಲಿ ಮೊದಲ ಭಾರತೀಯ ಮಹಿಳೆ – ಪುನಿತಾ ಅರೋರ / ಪ್ರಿಯಾ ಜಿನ್ಗನ್
- ಮೌಂಟ್ ಎವರೆಸ್ಟ್ ಹತ್ತಿದ ಮೊದಲ ಭಾರತೀಯ ಮಹಿಳೆ – ಬಚೇಂದ್ರಿಪಾಲ್
- ನೌಕಾಸೇನೆಯಲ್ಲಿ ಮೊದಲ ಭಾರತೀಯ ಮಹಿಳೆ – ಶುಭಾಂಗಿ ಸ್ವರೂಪ್
- ಒಲಿಂಪಿಕ್ಸ್‌ನಲ್ಲಿ ಪದಕ ಗೆದ್ದ ಮೊದಲ ಭಾರತೀಯ ಮಹಿಳೆ – ಕರ್ಣಂ ಮಲ್ಲೇಶ್ವರಿ
- ಒಲಿಂಪಿಕ್ಸ್‌ನಲ್ಲಿ ಬೆಳ್ಳಿ ಗೆದ್ದ ಮೊದಲ ಭಾರತೀಯ ಮಹಿಳೆ – ಪಿ.ವಿ.ಸಿಂಧು
- ಭಾರತದ ಮೊದಲ ವಿಶ್ವಸುಂದರಿ – ರೀಟಾ ಫೇರಿಯಾ ಪೊವೆಲ್
- ಭಾರತದ ಮೊದಲ ಭುವನ ಸುಂದರಿ – ಸುಶ್ಮಿತಾ ಸೇನ್
- ಭಾರತದ ಮೊದಲ ನಟಿ – ಜುಬೇದಾ ಬೇಗ


**ಪು.ತಿ.ನೋ.**



- ಭಾರತದ ಮೊದಲ ಗಾಯಕಿ – ರಾಜಕುಮಾರಿ ದುಬೆ
- ಭಾರತದ ಮೊದಲ ವೈದ್ಯೆ – ಆನಂದಿ ಗೋಪಾಲ್ ಜೋಶಿ
- ನೊಬೆಲ್ ಪ್ರಶಸ್ತಿ ಪಡೆದ ಮೊದಲ ಮಹಿಳೆ – ಮದರ್ ಥೆರೆಸಾ
- ಭಾರತದ ಮೊದಲ ಮಹಿಳಾ ಐಪಿಎಸ್ ಅಧಿಕಾರಿ – ಕಿರಣ್ ಬೇಡಿ
- ಮೊದಲ ಮಹಿಳಾ ಚಾಲಕಿ – ರೋಶ್ನಿ ಶರ್ಮಾ
- ಭಾರತದ ಮೊದಲ ಆಟೋ ರಿಕ್ಷಾ ಡ್ರೈವರ್ – ಶೀಲಾ ದಾರ್ವೆ
- ದ್ವಿಶತಕ ಬಾರಿಸಿದ ಮೊದಲ ಭಾರತೀಯ ಮಹಿಳಾ ಕ್ರಿಕೆಟರ್ – ಮಿಥಾಲಿ ರಾಜ್
- ವಾಯುಸೇನೆಯ ಮೊದಲ ಮಹಿಳಾ ಅಧಿಕಾರಿ – ಅಂಜಲಿ ಗುಪ್ತಾ
- ಸುಪ್ರೀಂ ಕೋರ್ಟ್‌ನ ಮೊದಲ ಮಹಿಳಾ ಜಡ್ಜ್ – ಎಂ.ಫಾತಿಮಾ ಬಿವಿ
- ಭಾರತೀಯ ವಾಯುನೆಲೆಯ ಮೊದಲ ಮಹಿಳಾ ಪೈಲೆಟ್ – ದುರ್ಗಾ ಬ್ಯಾನರಿ
- ಆಸ್ಕರ್ ಗೆದ್ದ ಮೊದಲ ಭಾರತೀಯ ಮಹಿಳೆ – ಭಾನು ಅಥೈ
- ಮೊದಲ ಮಿಸಸ್ ವರ್ಲ್ಡ್ ಪ್ರಶಸ್ತಿ ಗೆದ್ದ ಭಾರತೀಯ ಮಹಿಳೆ – ಅದಿತಿ ಗೋವಿಟ್ರಿಕರ್
- ಯುದ್ಧ ವಿಮಾನದ ಮೊದಲ ಮಹಿಳಾ ಪೈಲಟ್ – ಎ. ಚತುರ್ವೇದಿ

**– ಕನ್ನಿಕಾ ಜೆ**
ಬಿ.ಎ. ಅಂತಿಮ ವರ್ಷ

## ಭಾರತದ ಕೋಗಿಲೆ ಸರೋಜಿನಿ ನಾಯ್ಡು



ಭಾರತದ ಕೋಗಿಲೆ' ಎಂದು ಪ್ರಸಿದ್ಧರಾದ ಕವಯತ್ರಿ, ಬರಹಗಾರ್ತಿ, ಸಾಮಾಜಿಕ ಕಾರ್ಯಕರ್ತೆ, ಸ್ವಾತಂತ್ರ್ಯ ಹೋರಾಟಗಾರ್ತಿ ಸರೋಜಿನಿ ನಾಯ್ಡು ಅವರು ಫೆಬ್ರವರಿ 13, 1879 ರಂದು ಹೈದರಾಬಾದಿನಲ್ಲಿ ಜನಿಸಿದರು. ಅವರು ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಅಧಿವೇಶನದ ಪ್ರಥಮ ಮಹಿಳಾ ಅಧ್ಯಕ್ಷೆ ಹಾಗೂ ಉತ್ತರ ಪ್ರದೇಶದ ಪ್ರಥಮ ರಾಜ್ಯಪಾಲರಾದ ಹೆಗ್ಗಳಿಕೆಗೆ ಪಾತ್ರರಾದವರು.

ಸರೋಜಿನಿಯವರ ತಂದೆ ಅಘೋರನಾಥ ಚಟ್ಟೋಪಾಧ್ಯಾಯರು ವಿಜ್ಞಾನಿ ಮತ್ತು ತತ್ವಶಾಸ್ತ್ರಜ್ಞರು. ಹೈದರಾಬಾದಿನಲ್ಲಿ ನಿಜಾಂ ಕಾಲೇಜನ್ನು ಸಂಸ್ಥಾಪಿಸಿದ ಕೀರ್ತಿ ಅವರದು. ತಾಯಿ ಸುಂದರಿದೇವಿ ಬಂಗಾಳದ ಕವಯತ್ರಿ, ಸರೋಜಿನಿಯವರ ಸಹೋದರ ಬೀರೇಂದ್ರನಾಥರು ಕ್ರಾಂತಿಕಾರಿಯಾಗಿ ಹಾಗೂ ಅವರ ಮತ್ತೊಬ್ಬ ಸಹೋದರ ಹರೀಂದ್ರನಾಥರು ಕವಿಯಾಗಿ, ರಂಗತಜ್ಞರಾಗಿ ಹಾಗೂ ನಟರಾಗಿ ಪ್ರಸಿದ್ಧರು.

ಬಾಲಪ್ರತಿಭೆ ಎನಿಸಿದ್ದ ಸರೋಜಿನಿ ನಾಯ್ಡು ಅವರು ಓದಿನಲ್ಲಿ ಯಾವಾಗಲೂ ಮುಂದು. ಉರ್ದು, ತೆಲುಗು, ಇಂಗ್ಲೀಷ್, ಬೆಂಗಾಳಿ ಮತ್ತು ಪರ್ಷಿಯನ್ ಭಾಷೆಗಳಲ್ಲಿ ಅವರು ಪ್ರಾವೀಣ್ಯತೆ ಸಾಧಿಸಿದ್ದರು. ಮದ್ರಾಸ್ ವಿಶ್ವವಿದ್ಯಾಲಯದ ಮೆಟ್ರಿಕ್ಯುಲೇಷನ್ ಪರೀಕ್ಷೆಯಲ್ಲಿ ಸರೋಜಿನಿಯವರು ಪ್ರಥಮ ಸ್ಥಾನ ಪಡೆದಾಗ ಅವರು ಎಲ್ಲೆಡೆ ಪ್ರಸಿದ್ಧರಾಗಿಬಿಟ್ಟಿದ್ದರು. ತಂದೆಯವರಿಗೆ ಮಗಳು ಸರೋಜಿನಿ ವಿಜ್ಞಾನ ಅಥವಾ ಗಣಿತದಲ್ಲಿ ಹೆಚ್ಚು ಸಾಧಿಸಬೇಕೆಂಬ ಅಭಿಪ್ರಾಯವಿತ್ತಾದರೂ ಸರೋಜಿನಿ ಅವರಿಗೆ ಕಾವ್ಯದಲ್ಲಿ ಹಂಬಲ ಮೂಡಿತು.

ಇಂಗ್ಲೀಷಿನಲ್ಲಿ ಕಾವ್ಯರಚನೆಯಲ್ಲಿ ತೊಡಗಿದ ಸರೋಜಿನಿ ಅವರ ಪ್ರತಿಭೆಯ ಬಗ್ಗೆ ಸಂತೋಷಿಸಿದ ಹೈದರಾಬಾದ್ ನಿಜಾಮರು ಸರೋಜಿನಿಯವರಿಗೆ ವಿದೇಶದಲ್ಲಿ ಓದುವ ಸಲುವಾಗಿ ವಿದ್ಯಾರ್ಥಿ ವೇತನವನ್ನು ನೀಡಿದರು. ಸರೋಜಿನಿ ತಮ್ಮ ಹದಿನಾರನೆಯ ವಯಸ್ಸಿನಲ್ಲಿ ಇಂಗ್ಲೆಂಡಿಗೆ ಹೊರಟರು.

ಲಂಡನ್ನಿನ ಕಿಂಗ್ಸ್ ಕಾಲೇಜ್ ಮತ್ತು ಕೇಂಬ್ರಿಡ್ಜಿನ ಗಿರ್ಟನ್ ಕಾಲೇಜುಗಳಲ್ಲಿ ವ್ಯಾಸಂಗ ನಡೆಸುತ್ತಿದ್ದ ಸರೋಜಿನಿಯವರು ಆ ಕಾಲದ ಪ್ರಸಿದ್ಧ ಕವಿಗಳಾದ ಅರ್ಥರ್ ಸೈಮನ್ ಮತ್ತು ಎಡ್ಮಂಡ್ ಗಸ್ಸೇ ಅವರೊಡನೆ ಸಂಪರ್ಕ ಬೆಳೆಸಿಕೊಂಡರು. ಗಸ್ಸೇ ಅವರು ಸರೋಜಿನಿ ಅವರಿಗೆ ಭಾರತದ ಪರ್ವತಗಳು, ನದಿ, ದೇವಾಲಯ, ಸಾಮಾಜಿಕ ಪರಿಸರ ಮತ್ತು ಜೀವನಗಳನ್ನು ತಮ್ಮ ಕಾವ್ಯಕ್ಕೆ ವಸ್ತುವನ್ನಾಗಿ ಮಾಡಿಕೊಳ್ಳಲು ಸೂಚಿಸಿದರು. ಹೀಗಾಗಿ ಸರೋಜಿನಿಯವರು ತಮ್ಮ ಸಮಕಾಲೀನ ಭಾರತೀಯ ಬದುಕು ಮತ್ತು ಘಟನಾವಳಿಗಳನ್ನು ತಮ್ಮ ಕಾವ್ಯಕ್ಕೆ

ಪು.ತಿ.ನೋ.



ವಸ್ತುವನ್ನಾಗಿಸತೊಡಗಿದರು. ಸರೋಜಿನಿಯವರ ಕವನ ಸಂಕಲನಗಳಾದ "The golden threshold", "The Broken Wing", "The bird of Time"

ಮುಂತಾದವು ಬೃಹತ್ ಸಂಖ್ಯೆಯ ಭಾರತೀಯ ಮತ್ತು ಇಂಗ್ಲೀಷ್ ಓದುಗರನ್ನು ಆಕರ್ಷಿಸಿದವು.

ಡಾ.ಗೋವಿಂದರಾಜು ಎಂಬುವವರನ್ನು ಪ್ರೇಮಿಸಿದ ಸರೋಜಿನಿಯವರು ಜಾತಿಪದ್ಧತಿಯಿದ್ದ ಅಂದಿನ ಕಠಿಣ ದಿನಗಳಲ್ಲಿ ಯಾವುದೇ ವಿರೋಧಗಳನ್ನೂ ಲೆಕ್ಕಿಸದೆ ಅಂತರ್ಜಾತೀಯ ವಿವಾಹವಾದರು. ಮುಂದೆ ತಮ್ಮ ವೈವಾಹಿಕ ಜೀವನವನ್ನು ಸುಸೂತ್ರವಾಗಿ ನಿರ್ವಹಿಸಿದ ಅವರಿಗೆ ನಾಲ್ಕು ಮಕ್ಕಳು.

1905 ರ ವರ್ಷದಲ್ಲಿ ಬಂಗಾಳದ ವಿಭಜನೆಯಾದ ಸಂದರ್ಭದಲ್ಲಿ ಸ್ವಾತಂತ್ರ್ಯ ಹೋರಾಟಕ್ಕೆ ಧುಮುಕಿದ ಸರೋಜಿನಿ ನಾಯ್ಡು ಅವರು ಗೋಪಾಲಕೃಷ್ಣ ಗೋಖಲೆ, ರಬೀಂದ್ರನಾಥ ಠಾಗೂರ್, ಮಹಮ್ಮದ್ ಅಲಿ ಜಿನ್ನಾ, ಅನ್ನಿಬೆಸೆಂಟ್, ಸಿ.ಪಿ.ರಾಮಸ್ವಾಮಿ ಅಯ್ಯರ್, ಮಹಾತ್ಮ ಗಾಂಧಿ, ಜವಾಹರಲಾಲ್ ನೆಹರೂ ಮುಂತಾದವರ ಜೊತೆಯಲ್ಲಿ ನಿರಂತರ ಸಂಪರ್ಕದಲ್ಲಿದ್ದರು. ಸ್ತ್ರೀಯರಲ್ಲಿ ಜಾಗೃತ ಮನೋಭಾವನೆಯನ್ನು ತರಲು ದೇಶದಾದ್ಯಂತ ಸಂಚರಿಸಿದ ಅವರು ದೇಶದಲ್ಲಿ ಸ್ತ್ರೀಯರಲ್ಲಿ ಆತ್ಮವಿಶ್ವಾಸ ತುಂಬುವ ಕಾಯಕ ನಡೆಸಿದರು.

ಸರೋಜಿನಿ ನಾಯ್ಡು ಅವರು 1925ರ ವರ್ಷದಲ್ಲಿ ಕಾನ್ಪುರದಲ್ಲಿ ಜರುಗಿದ ರಾಷ್ಟ್ರೀಯ ಕಾಂಗ್ರೆಸ್ ಅಧಿವೇಶನದ ಅಧ್ಯಕ್ಷತೆಯನ್ನು ವಹಿಸಿದ್ದುದೇ ಅಲ್ಲದೇ ಅಸಹಕಾರ ಚಳುವಳಿಯಲ್ಲಿ ಮುಂಚೂಣಿಯಲ್ಲಿ ನಿಂತು ಗಾಂಧೀಜಿ ಮತ್ತು ಇತರ ಸ್ವಾತಂತ್ರ್ಯ ಹೋರಾಟಗಾರರ ಜೊತೆಯಲ್ಲಿ ಸೆರೆಮನೆ ವಾಸವನ್ನನುಭವಿಸಿದರು.

1942 ರಲ್ಲಿ ಬ್ರಿಟಿಷರೇ ಭಾರತ ಬಿಟ್ಟು ತೊಲಗಿ ಚಳುವಳಿಯಲ್ಲಿ ಅವರನ್ನು 21 ತಿಂಗಳುಗಳ ಕಾಲ ಸೆರೆವಾಸದಲ್ಲಿ ಇರಿಸಲಾಯಿತು. ಗಾಂಧೀಜಿಯವರೊಡನೆ ಆತ್ಮೀಯ ಸಂಬಂಧ ಹೊಂದಿದ್ದ ಸರೋಜಿನಿ ನಾಯ್ಡು ಅವರು ಗಾಂಧೀಜಿಯವರನ್ನು ಪ್ರೀತಿಯಿಂದ **'ಮಿಕ್ಕಿಮೌಸ್'** ಎಂದು ಕರೆಯುತ್ತಿದ್ದರಂತೆ.

ಸ್ವಾತಂತ್ರ್ಯಾನಂತರದಲ್ಲಿ ಸರೋಜಿನಿ ನಾಯ್ಡು ಅವರನ್ನು ಉತ್ತರ ಪ್ರದೇಶದ ರಾಜ್ಯಪಾಲರನ್ನಾಗಿ ನೇಮಿಸಲಾಯಿತು. ಸರೋಜಿನಿ ನಾಯ್ಡು ಅವರು ಮಾರ್ಚ್ 2, 1949 ರಂದು ನಿಧನರಾದರು.

**ಸರೋಜಿನಿ ನಾಯ್ಡು ಕೃತಿಗಳು**

'The Golden threshold', 'The Bird of Time : Songs of Life Death and the Spring, "The Broken Wing" : Songs of Love Death and the Spring, including "The Gift of India" 'Muhammad Ali Jinnah: An 'Ambassador of Unity' (1916), 'The Sceptred Flute: Songs of India', 'The Feather of the Dawn'

ಮುಂತಾದವು ಸರೋಜಿನಿ ನಾಯ್ಡು ಅವರ ಪ್ರಸಿದ್ಧ ಪ್ರಕಟಣೆಗಳಾಗಿವೆ.

**– ದೀಪಿಕಾ ಬಿ**
ಬಿ.ಎ. ಅಂತಿಮ ವರ್ಷ




**'ಕದಂಬ'** ಮಾಸ ಪತ್ರಿಕೆ ಬಿಡುಗಡೆಯ ಸಂದರ್ಭ
(ಸಂಚಿಕೆ 47)



Dr. Sreedhara H, Delivered talk on "Study Methods & A brief insights of Karnataka Hisotry" at JSS Women's College, Mysuru - 25.2.2025













Special Lecture & Interactive Session
Topic: Indian Art - Architecture
Resource Person: Dr. K.N. Mohan, Professor of History GFGC, K.R. Nagara - 6.3.2025









# ಭಾರತೀಯ ಕಲೆ, ವಾಸ್ತುಶಿಲ್ಪಕ್ಕೆ ಸಾವಿರಾರು ವರ್ಷಗಳ ಇತಿಹಾಸವಿದೆ



• **ಕನ್ನಡಪ್ರಭ ವಾರ್ತೆ** ಮೈಸೂರು

ಭಾರತೀಯ ಕಲೆ ಮತ್ತು ವಾಸ್ತುಶಿಲ್ಪಕ್ಕೆ ಸಾವಿರಾರು ವರ್ಷಗಳ ಇತಿಹಾಸ ಮತ್ತು ಸಾಂಸ್ಕೃತಿಕ ಹಿನ್ನೆಲೆ ಇದೆ ಎಂದು ಕೆ.ಆರ್. ನಗರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಇತಿಹಾಸ ಪ್ರಾಧ್ಯಾಪಕ ಡಾ.ಕೆ.ಎನ್. ಮೋಹನ್ ಹೇಳಿದರು.

ನಗರದ ಜಯಲಕ್ಷ್ಮೀಪುರಂನಲ್ಲಿರುವ ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ಇತಿಹಾಸ ವಿಭಾಗ ಮತ್ತು ಐಕ್ಯೂಎಸಿಯ ಸಹಯೋಗದಲ್ಲಿ ಭಾರತೀಯ ವಾಸ್ತುಶಿಲ್ಪ ಕಲೆ ಒಂದು ಐತಿಹಾಸಿಕ ಒಳನೋಟ ಎಂಬ ವಿಷಯ ಕುರಿತು ವಿಶೇಷ ಉಪನ್ಯಾಸ ಮತ್ತು ಸಂವಾದ ಕಾರ್ಯಕ್ರಮದ ಸಂಪನ್ಮೂಲ ವ್ಯಕ್ತಿಗಳಾಗಿ ಅವರು ಮಾತನಾಡಿದರು.

ಸಿಂಧೂ ಬಯಲಿನ ನಾಗರಿಕತೆಯಿಂದ ಭಾರತೀಯರ ವಾಸ್ತುಶೈಲಿಯ ಪ್ರಕಾರವು ಆರಂಭಗೊಂಡಿತು. ಅಲ್ಲಿಂದ ಮುಂದೆ ಮೌರ್ಯರು ಮತ್ತು ಗುಪ್ತರ ಕಾಲದಲ್ಲಿ ಉತ್ತರ ಭಾರತದಲ್ಲಿ ನಾಗರ ಕಲಾಶೈಲಿಯು ಅಸ್ತಿತ್ವಕ್ಕೆ ಬಂದು ಅನೇಕ ದೇವಾಲಯಗಳು, ಬೌದ್ಧಸ್ತೂಪಗಳು, ಜೈನಬಸದಿಗಳು ಸೇರಿ ಭವ್ಯವಾದ ಅರಮನೆಗಳು ನಿರ್ಮಾಣಗೊಂಡವು ಎಂದು ಅವರು ತಿಳಿಸಿದರು.

ದಕ್ಷಿಣ ಭಾರತದಲ್ಲಿ ಪಲ್ಲವರ ಕಾಲದಲ್ಲಿ ದ್ರಾವಿಡ ಕಲಾಶೈಲಿಯೂ ಉಗಮಗೊಂಡು ಚೋಳರು ಸೇರಿದಂತೆ ಕರ್ನಾಟಕದ ಬಾದಾಮಿ ಚಾಲುಕ್ಯರು, ರಾಷ್ಟ್ರಕೂಟರು ಮತ್ತು ಹೊಯ್ಸಳರಕಾಲದಲ್ಲಿಹಲವುಪ್ರಸಿದ್ಧದೇವಾಲಯಗಳು ನಿರ್ಮಾಣವಾದವು. ವಿಶೇಷವಾಗಿ ಬಾದಾಮಿ ಚಾಲುಕ್ಯರ ಕಾಲದಲ್ಲಿ ನಾಗರ ಮತ್ತು ದ್ರಾವಿಡ ಶೈಲಿಗಳು ಸಮ್ಮಿಲನ ಗೊಂಡು ನೂತನ ವೇಸರಶೈಲಿಯು ಅಸ್ತಿತ್ವಕ್ಕೆ ಬಂದು ನೂರಾರು ವಿಭಿನ್ನವಾದ ಮತ್ತು ಆಕರ್ಷಣೀಯವಾದ ದೇವಾಲಯಗಳು ಅಸ್ತಿತ್ವಕ್ಕೆ ಬಂದವು. ವಿಜಯನಗರದ ಅರಸರ ಕಾಲದಲ್ಲಿ ದ್ರಾವಿಡ ಕಲಾಶೈಲಿಯು ದಕ್ಷಿಣ ಭಾರತದಲ್ಲಿ ಪರಾಕಾಷ್ಠೆಯ ಹಂತವನ್ನು ತಲುಪಿತು ಎಂದು ಅವರು ಹೇಳಿದರು.

ಕಾಲೇಜಿನ ಪ್ರಾಂಶುಪಾಲೆ ಡಾ.ಬಿ.ಆರ್. ಜಯಕುಮಾರಿ ಪ್ರಾಸ್ತಾವಿಕ ನುಡಿಗಳ ಮೂಲಕ ಶುಭ ಕೋರಿದರು. ಇತಿಹಾಸ ವಿಭಾಗದ ಮುಖ್ಯಸ್ಥರು ಹಾಗೂ ಶೈಕ್ಷಣಿಕ ಡೀನ್ ಡಾ. ಎಚ್. ಶ್ರೀಧರ, ವಿಭಾಗದ ಅಧ್ಯಾಪಕರಾದ ಎ.ಆರ್. ನಂದೀಶ್, ಎನ್. ಜಯಲಕ್ಷ್ಮೀ ಹಾಗೂ ಇತಿಹಾಸ ವಿಷಯದ ವಿದ್ಯಾರ್ಥಿಗಳು ಇದ್ದರು.



## Recently Discovered Copper Plate Grant of Vijayanagara king Dçvarâya I*



This set of five copper plates joined together with a ring and a *seal depicting an image of Vâmana avatâr of VishGu, was discovered recently *near Bengaluru in Karnataka.*

It is written in Sanskrit and Kanna a language and Nâgarî characters, dated Úaka 1328 _(nâga-chakshu-guna-úasi)_, Vyaya, Kârttîka ba. 10, Friday, which is equivalent to 1406 CE, November 5.



It records the gift of the village Guipalli, renamed as Dçvarâyapura-agrahâra to several brâhmaGas of various _gôtrâs_ and _sûtras_, well versed in Vçdas and various _úâstras_ by the king Dçvarâya I, son of Harihara.

*It is interesting to note that the seal bears an image of Vâmana in the place of the usual image of Varâha, which is the royal insignia of the Vijayanagara empire.*

*Director(Epigraphy),Archaeological Survey of India*



# Rare copper plates of Vijayanagar period come to ligh

The Hindu Bureau
MYSURU

A set of five copper plates belonging to the Vijayanagar period, has come to light and has been deciphered by the Epigraphy branch of the Archaeological Survey of India, in Mysuru.

The copper plate inscriptions joined together with a ring, is reckoned to be very rare and the first of its kind as it has a seal depicting Vamana, an avatar of Lord Vishnu, instead of Varaha, which is the royal insignia of Vijayanagar empire.

K. Munirathnam Reddy, Director, Epigraphy Brach, ASI, said he had referred it to various scholars and nobody ha been able to ascertain why there was the emblem of Vamana instead of Varaha.

Dr. Reddy said the inscriptions on the copper plate were in Sanskrit and Kannada languages with Nagari character.

It was dated to Saka 1328 equivalent to 1406 CE (November 5). The copper plate records the gift of the village Dudipalli, renamed as Devarayapura Agrahara, to several Brahmins of various gotras and sutras, well versed in the Vedas and shastras, by King Devaraya I, who is the son of Harihara, one of the founders of the Vijayanagar empire.

This was in the custody of an individual based in Bengaluru by name Hardik, who contacted the Epigraphy Branch and informed it. Dr. Reddy said he would visit Bengaluru on Wednesday to copy the inscriptions.

**It has an insignia of Vamana instead of Varaha, which was the emblem of Vijayanagar rulers; it was in possession of an individual in Bengaluru**

Copper plate inscriptions of the Vijayanagar era and dated to 1406 CE. SPECIAL ARRANGEMENT

The Vijayanagar copper plate inscription with the insignia of Vamana instead of thee royal emblem Varaha. SPECIAL ARRANGEMENT

**Discovery in A.P. forests**

Recently, Dr. Reddy and his team trekked through the Lankkamala Reserve Forest in Andhra Pradesh and conducted a thorough survey at Bandigani Chella, with the support of the A.P. Forest Department.

During their expedition, the team discovered three rock shelters, one of which contains paintings of various figures like animals, geometric line drawings, and human figures.

The pre-historic paintings were done in Red Ochre. Dr. Reddy said the rock art painting site dated back to megalithic or iron age from 2500 BCE to 2nd century CE.

In addition, the team also surveyed the reserve forest at Nityapujakona and Akkadevatala Konda with the assistance of the Forest Department of




**VoMC in Half Marathon, Mysuru**



## II Year B.A. Students visited to Oriental Research Institute (ORI) Mysuru - 26.03.2025











Dr. Sreedhara H, Delivered talk on "Importance of History in Competitive Exams" at GFGC for Women's, K.R. Nagara, Mysuru - 24.3.2025












One day Training programme for Final B.Com & BBA Studentson

on **MBA Entrance, CAT & MAT Exams** - 26.03.2025

Resource Person: **Mr. Parshwanath D Palabhavi,** Founder & Director, New PACE, Bengaluru

**Organised by Entry to Service, Department of Commerce in association with IQAC**










ಕನ್ನಡಪ್ರಭ

# ಮಹಾಜನ ಕಾಲೇಜಿನಲ್ಲಿ ಎಂಬಿಎ ಪ್ರವೇಶಾತಿ ಪರೀಕ್ಷೆ ಕುರಿತು ತರಬೇತಿ

• **ಕನ್ನಡಪ್ರಭ ವಾರ್ತೆ** ಮೈಸೂರು



ನಗರದ ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ಎಂಟ್ರಿ-ಟು-ಸರ್ವಿಸ್, ವಾಣಿಜ್ಯಶಾಸ್ತ್ರ ಮತ್ತು ಆಡಳಿತ ನಿರ್ವಹಣಾಶಾಸ್ತ್ರ ವಿಭಾಗ ಹಾಗೂ ಐಕ್ಯೂಎಸಿ ಸಹಯೋಗದೊಂದಿಗೆ ಎಂ.ಬಿ.ಎ. ಪ್ರವೇಶಾತಿ ಪರೀಕ್ಷೆ, ಕ್ಯಾಟ್ ಮತ್ತು ಮ್ಯಾಟ್ ಪರೀಕ್ಷೆಗಳಿಗೆ ಸಂಬಂಧಿಸಿದಂತೆ ತರಬೇತಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು.

ಸಂಪನ್ಮೂಲ ವ್ಯಕ್ತಿಯಾಗಿದ್ದ, ಬೆಂಗಳೂರಿನ ನ್ಯೂಪೇಸ್ ಅಕಾಡೆಮಿಯ ಸಂಸ್ಥಾಪಕ ನಿರ್ದೇಶಕ ಡಿ. ಪಾರ್ಶ್ವನಾಥ್ ಮಾತನಾಡಿ, ಬಿಬಿಎ ಮತ್ತು ಬಿ.ಕಾಂ. ಪದವಿಗಳ ನಂತರ ವ್ಯವಹಾರ ಆಡಳಿತ ವಿಷಯದಲ್ಲಿ ಸ್ನಾತಕೋತ್ತರ ಪದವಿ ಪ್ರವೇಶಾತಿಗೆ ಸಂಬಂಧಿಸಿದಂತೆ ನಡೆಸುವ ಸಾಮಾನ್ಯ ಪ್ರವೇಶಾತಿ ಪರೀಕ್ಷೆ ಸೇರಿದಂತೆ, ಕ್ಯಾಟ್ ಮತ್ತು ಮ್ಯಾಟ್ ಪರೀಕ್ಷೆಗಳಿಗೆ ಹೇಗೆ ಪೂರ್ವಭಾವಿ ಸಿದ್ಧತೆ ಮಾಡಿಕೊಳ್ಳಬೇಕು ಎಂದು ತಿಳಿಸಿದರು.

ಪ್ರವೇಶಾತಿ ಪರೀಕ್ಷೆ ನಡೆಸುವ ಸಂದರ್ಭ ಅರ್ಹತೆಯ ಮಾನದಂಡಗಳು, ವಿವಿಧ ತರಬೇತಿ ಸಂಸ್ಥೆಗಳು ಮತ್ತು ಪರೀಕ್ಷೆಯಲ್ಲಿ ಪ್ರಮುಖವಾಗಿ ಕೇಳುವ ವಿಷಯಾಧಾರಿತ ಪ್ರಶ್ನಾ ಮಾದರಿಗಳು, ಅಧ್ಯಯನ ವಿಧಾನ ಮತ್ತು ಅಧ್ಯಯನ ಸಾಮಾಗ್ರಿಗಳು ಸೇರಿದಂತೆ ಈ ಹಿಂದೆ ನಡೆಸಿರುವ ಎಂ.ಬಿ.ಎ ಪ್ರವೇಶಾತಿ ಪರೀಕ್ಷೆಗೆ ಸಂಬಂಧಿಸಿದ ಪ್ರಶ್ನೆಪತ್ರಿಕೆಗಳು ಹಾಗೂ ಮಾರ್ಗಸೂಚಿಗಳನ್ನು ನಿರಂತರವಾಗಿ ಅಧ್ಯಯನ ಮಾಡುವಂತೆ ಅವರು ತಿಳಿಸಿದರು.

ನಿರಂತರ ಪರಿಶ್ರಮ, ಸಮಯ ನಿಗಧಿ, ವಸ್ತುನಿಷ್ಠ ಪಠ್ಯಕ್ರಮ, ಉತ್ತಮ ಮಾರ್ಗದರ್ಶನ ಹಾಗೂ ವ್ಯವಸ್ಥಿತ ಅಧ್ಯಯನವು ಈ ಪರೀಕ್ಷೆಯ ಯಶಸ್ಸಿನ ಮೂಲಮಂತ್ರಗಳಾಗಿರುತ್ತವೆ. ಒಂದು ಬಾರಿ ವಿಫಲವಾದರೂ ಮತ್ತೊಂದು ಬಾರಿ ಯಶಸ್ಸಿನ ಗುರಿಮುಟ್ಟುವ ಸಂಕಲ್ಪವನ್ನು ವಿದ್ಯಾರ್ಥಿಗಳು ಇಟ್ಟುಕೊಳ್ಳಬೇಕು ಎಂದು ಅವರು ಸೂಚಿಸಿದರು.

ಜೊತೆಗೆ ಬ್ಯಾಂಕಿಂಗ್, ರೈಲ್ವೆ ಸೇರಿದಂತೆ ವಿವಿಧ ಕೇಂದ್ರ ಸರ್ಕಾರದ ಸೇವಾವಲಯಗಳಿಗೆ ನಡೆಸುವ ಸಾಮಾನ್ಯ ಪ್ರವೇಶಾತಿ ಪರೀಕ್ಷೆಗಳಿಗೆ ಪದವಿ ಹಂತದಲ್ಲೇ ಸೂಕ್ತ ಸಿದ್ಧತೆ ಮತ್ತುತರಬೇತಿ ಪಡೆದದ್ದೇ ಆದರೆ ಯಶಸ್ಸು ನಿಶ್ಚಿತ ಎಂದರು.

ಪದವಿಯ ನಂತರ ಮುಂದಿನ ಸ್ಪಷ್ಟ ಗುರಿಯನ್ನು ಹಿಂದೆ ವಿದ್ಯಾರ್ಥಿಗಳು ನಿರ್ಧಿಷ್ಟಪಡಿಸಿಕೊಂಡು ಆ ಗುರಿಯನ್ನು ತಲುಪುವಲ್ಲಿ ಕಾರ್ಯಪ್ರವೃತ್ತರಾಗಬೇಕು ಎಂದು ಕಿವಿಮಾತು ಹೇಳಿದರು.

ಶೈಕ್ಷಣಿಕ ಡೀನ್ ಮತ್ತು ಇತಿಹಾಸ ವಿಭಾಗದ ಮುಖ್ಯಸ್ಥರು ಹಾಗೂ ಎಂಟ್ರಿ-ಟು-ಸರ್ವಿಸ್ ನ ಸಂಚಾಲಕ ಡಾ.ಎಚ್. ಶ್ರೀಧರ, ಅರ್ಥಶಾಸ್ತ್ರವಿಭಾಗದ ಸಹಾಯಕ ಪ್ರಾಧ್ಯಾಪಕ ಡಾ.ಪಿ.ಜಿ. ಪುಷ್ಪರಾಣಿ, ಐಕ್ಯೂಎಸಿ ಸಂಚಾಲಕಿ ಡಿ. ಗೀತಾ, ವಾಣಿಜ್ಯಶಾಸ್ತ್ರ ಮತ್ತು ವ್ಯವಹಾರ ನಿರ್ವಹಣಾ ಶಾಸ್ತ್ರ ವಿಭಾಗದ ಮುಖ್ಯಸ್ಥರಾದ ಡಾ. ಶಿವಕುಮಾರ್, ವಿಭಾಗದ ಎಲ್ಲ ಅಧ್ಯಾಪಕರು ಹಾಗೂ ವಿದ್ಯಾರ್ಥಿಗಳು ಇದ್ದರು.

ಶಿಕ್ಷಣದಿಂದ ಶ್ರೇಷ್ಠತೆ

**ಎಸ್‌ಬಿಆರ್‌ಆರ್ ಮಹಾಜನ ಪ್ರಥಮದರ್ಜೆ ಕಾಲೇಜು (ಸ್ವಾಯತ್ತ)**

ಜಯಲಕ್ಷ್ಮೀಪುರಂ, ಮೈಸೂರು–12

ಶ್ರೇಷ್ಠತೆಯ ಸಾಮರ್ಥ್ಯವುಳ್ಳ ಕಾಲೇಜು

**ಇತಿಹಾಸ ವಿಭಾಗ**

**Dept. of History**

**ಮೈಸೂರು ವಿಶ್ವವಿದ್ಯಾನಿಲಯದಿಂದ ಸಂಯೋಜನೆಗೊಂಡು, ನ್ಯಾಕ್‌ನಿಂದ 'ಎ' ಮಾನ್ಯತೆ ಪಡೆದಿದೆ.**




ಸಂಚಿಕೆ: 49 ಆಗಸ್ಟ್ 2025 | ಪ್ರಧಾನ ಸಂಪಾದಕರು: ಡಾ. ಬಿ.ಆರ್. ಜಯಕುಮಾರಿ, ಪ್ರಾಂಶುಪಾಲರು | www.mahajana.edu.in | ಸಂಪಾದಕರು: ಡಾ. ಶ್ರೀಧರ ಹೆಚ್, ಇತಿಹಾಸ ವಿಭಾಗ | ಪುಟಗಳು: 10



## ಸಂಪಾದಕೀಯ

ಮಾನವತಾವಾದಿ, ಆದರ್ಶದೊರೆ

## ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್

ಒಡೆಯರ್ ಆಡಳಿತ ದಾರಿಯು ಎಲ್ಲಾ ಕಾಲದಲ್ಲೂ ಜನರ ಪರವಾಗಿ, ಅಭಿವೃದ್ಧಿ ಪರವಾಗಿ, ಮಾನವನ ಸಂಪನ್ಮೂಲ ಮನರಂಜನೆ, ಅದರ ಸದುಪಯೋಗಕ್ಕಾಗಿ. ತಮ್ಮ ಆಡಳಿತದಲ್ಲಿ ದೊಡ್ಡ ಶಕ್ತಿಯಾಗಿ ದೇಶದ ಮುಂದೆ ಕಾಣಿಸುತ್ತಿದ್ದರು.

ಮೈಸೂರು ಎಂದರೆ ಸ್ವತಂತ್ರ ಬರುವುದಕ್ಕಿಂತ ಮುಂಚೆ ಕತ್ತಲಲ್ಲಿ ಇದ್ದರೂ, ನಾಗರಿಕತೆಯ ಗುಣ ಲಕ್ಷಣಗಳು ಅಷ್ಟಾಗಿ ಗೊತ್ತಿರಲಿಲ್ಲ ಶಿಕ್ಷಣ ಇರಲಿಲ್ಲ. ಅಸಮಾನತೆ, ಅಸ್ಪೃಶ್ಯತೆ, ಮಹಿಳಾ ದೌರ್ಜನ್ಯ, ದೇವದಾಸಿ ಪದ್ಧತಿ ಜೀವಂತವಾಗಿದ್ದ ಕಾಲವದು. ಆದರೂ ನಾವು ಏಷ್ಯಾದಲ್ಲಿ ಮೊದಲನೆಯ ರಾಜ್ಯ ಹೈಡ್ರೋ ಎಲೆಕ್ಟ್ರಾನಿಕ್‌ನಿಂದ ವಿದ್ಯುತ್ ಉತ್ಪಾದನೆ ಮಾಡಿದ ರಾಜ್ಯ. ಕತ್ತಲೆಯಿಂದ ಬೆಳಕಿನ ಕಡೆಗೆ ಹೋಗುವಂತದ್ದು, ಇಡೀ ಏಷ್ಯಾ ಖಂಡದಲ್ಲಿ ಮೈಸೂರಲ್ಲಿ ಮೊದಲಿಗೆ ಬೀದಿ ದೀಪ ಅಳವಡಿಸಲಾಯಿತು.

ಜನರ ಜೀವನದ ಬಗ್ಗೆ ಸಾಕಷ್ಟು ಪರಿಕಲ್ಪನೆ ತುಂಬಿಕೊಂಡಿದ್ದ, ಅವರು ವಿದ್ಯುಚ್ಛಕ್ತಿ ಎಂದರೆ ಗೃಹಬಳಕೆ, ಕೃಷಿ ಮತ್ತು ಕೈಗಾರಿಕಾ ಅವಶ್ಯಕತೆ ಬೇಕಾದಂತಹ ಅತ್ಯಂತ ಅಮೂಲ್ಯವಾದಂತಹ ವಸ್ತು ವಿದ್ಯುತ್‌ಚ್ಛಕ್ತಿ. ಏಷ್ಯಾ ಖಂಡದಲ್ಲಿ ಕತ್ತಲೆಯಲ್ಲಿ ಇದ್ದಾಗ ಅವರು ವಿದ್ಯುತ್ ತಂದು ಕೊಟ್ಟವರು. ಸ್ವಾತಂತ್ರ್ಯ ಬರುವುದಕ್ಕೂ ಮೊದಲೇ ಉತ್ತಮ ದೃಷ್ಟಿಕೋನ ಅವರ ಆಡಳಿತದಲ್ಲಿ ಇತ್ತು.

ಆಡಳಿತ ಮಾಡುವವರು ಪ್ರಜಾಪ್ರಭುತ್ವವಾದಿಗಳಾಗಿರಬೇಕು. ಪ್ರಜಾಪ್ರಭುತ್ವವಾದ ಜನರಿಗೋಸ್ಕರ, ಜನರ ಬದುಕಿಗೋಸ್ಕರ, ಅವರ ಏಳಿಗೆಗೋಸ್ಕರ ಸಮುದಾಯದ ಸೌಹಾರ್ದತೆಗಾಗಿ ಮತ್ತು ಅವರ ಸ್ವಾಭಿಮಾನ ಮತ್ತು ಸ್ವರಾಜ್ಯದ ಬದುಕಿಗಾಗಿ ಅವರು ತಮ್ಮ ಆಡಳಿತ ಕಾಲವನ್ನು ನಡೆಸಿದ್ದಾರೆ. ಇಡೀ ಆಡಳಿತದಲ್ಲಿ ಜೀವನದುದ್ದಕ್ಕೂ ಅವರು ಮಾಡಿದ ಕೆಲಸಗಳು ಇಂದು ನಮ್ಮ ಕಣ್ಣ ಮುಂದೆ ಗೋಚರಿಸುತ್ತಿವೆ.

ಅವರು ಕೇವಲ ಒಬ್ಬ ರಾಜನಾಗಿರಲಿಲ್ಲ ಶಿಕ್ಷಣದಲ್ಲಿ ಉನ್ನತ ಅಧ್ಯಯನವನ್ನು ಮಾಡಿದವರು.

ಶಿಕ್ಷಣಕ್ಕೆ ಮಹತ್ವ ಕೊಟ್ಟವರು. ಬುದ್ಧ ಹೇಳಿರುವಂತೆ ನಿನಗೆ ನೀನೇ ಗುರು ನಿನಗೆ ನೀನೇ ಬೆಳಕು, ಎಂಬುವಂತೆ ನಮಗೆ ಶಿಕ್ಷಣ ಬೇಕೇ ಬೇಕು ಎಂದು ಶಿಕ್ಷಣಕ್ಕೆ ಮಹತ್ವ ನೀಡಿದವರು.

ಮೈಸೂರು ವಿಶ್ವವಿದ್ಯಾನಿಲಯ, ಮಹಾರಾಜ ಕಾಲೇಜು, ಮಹಾರಾಣಿ ಕಾಲೇಜು ಹಾಗೂ ಶಿಕ್ಷಣ ಸಂಸ್ಥೆಗಳು ನಮ್ಮ ಕಣ್ಮುಂದೆ ಇದೆ. ದಲಿತರು, ಹಿಂದುಳಿದವರು, ಮಹಿಳೆಯರು ಎಲ್ಲರಿಗೂ ಶಿಕ್ಷಣವು ಸಿಗಬೇಕು ಎನ್ನುವ ಸಲುವಾಗಿ ಶಿಕ್ಷಣದ ಮಹತ್ವದ ಬಗ್ಗೆ ಅವರು ನಿಲುವನ್ನು ಪಡೆದರು.

ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವರಾದ ಶಿವರಾಜ ಎಸ್. ತಂಗಡಗಿ ಮಾತನಾಡಿ, ಇಡೀ ದೇಶವೇ ಮೈಸೂರಿನ ಕಡೆ ತಿರುಗಿ ನೋಡುವ ಆಡಳಿತ ಮಾಡಿದಂತವರು ಯಾರಾದರೂ ಇದ್ದರೆ ಅವರು ಮೈಸೂರಿನ ನಾಲ್ವಡಿ ಕೃಷ್ಣರಾಜ ಒಡೆಯರ್.

ಇಂತಹ ಮಹಾನ್ ರಾಜರ ಜಯಂತಿಯನ್ನು ಯಾಕೆ ಮಾಡುತ್ತಿದ್ದೇವೆ ಎಂದರೆ ಇವರ ಜಯಂತ್ಯೋತ್ಸವದಿಂದ ಅವರು ಮಾಡಿದಂತಹ ಕೆಲಸಗಳನ್ನು ನಮ್ಮ ಯುವ ಪೀಳಿಗೆಗೆ ಹಾಗೂ ಯುವಕರಿಗೆ ತಿಳಿಸುವಂತಹ ಪ್ರಯತ್ನದಲ್ಲಿ ಇಂತಹ ಜಯಂತೋತ್ಸವವನ್ನು ಸಂಭ್ರಮದಿಂದ ಮಾಡುತ್ತಿದ್ದೇವೆ.

ಕನ್ನಡ ನಾಡಿನ ಪ್ರಾತಃ ಸ್ಮರಣೀಯ ವ್ಯಕ್ತಿಗಳಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರ್ ಒಬ್ಬರು. ಆಧುನಿಕ ಕನ್ನಡ ನಾಡಿನ ನಿರ್ಮಾತೃ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್. ಇಂದು ನಮ್ಮ

**ಪು.ತಿ.ನೋ.**



ರಾಜ್ಯ ರಾಜಧಾನಿ ಬೆಂಗಳೂರನ್ನು 'ಭಾರತದ ಸಿಲಿಕಾನ್ ವ್ಯಾಲಿ' ಎಂದು ಕರೆಯಲಾಗುತ್ತದೆ. ವಿಶ್ವದಾದ್ಯಂತ ಬೆಂಗಳೂರು ಸಾಕಷ್ಟು ಪ್ರಸಿದ್ಧಿ ಪಡೆದಿದೆ. ದೇಶದ ಯುವಜನರು ಉದ್ಯೋಗಾವಕಾಶ ಅರಸುವಾಗ ಅವರ ಮನಸ್ಸಿನಲ್ಲಿ ಮೂಡುವುದು ಮೊದಲಿಗೆ ಬೆಂಗಳೂರಿನ ಹೆಸರು.

ಮಾಹಿತಿ ತಂತ್ರಜ್ಞಾನ, ಕೈಗಾರಿಕೆಗಳು, ಸ್ಟಾರ್ಟ್ ಅಪ್, ಶೈಕ್ಷಣಿಕ ವಲಯ ಹೀಗೆ ಬೆಂಗಳೂರು ಹತ್ತು ಹಲವು ಕ್ಷೇತ್ರಗಳಲ್ಲಿ ಇಂದು ವಿಶ್ವವ್ಯಾಪಿಯಾಗಿದೆ. ಆದರೆ ಈ ಸಾಧನೆ ಕೇವಲ ಒಂದೆರಡು ದಶಕಗಳಲ್ಲಿ ಸಾಧನೆಯಾದದ್ದಲ್ಲ. ಅದರ ಹಿಂದೆ ನೂರಾರು ವರ್ಷಗಳ ಪರಿಶ್ರಮವಿದೆ. ಈ ಎಲ್ಲವೂ ಮೈಸೂರಿನ ಪ್ರಸಿದ್ಧ ಮಹಾರಾಜರಾಗಿದ್ದ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ಹಾಕಿದ ಅಡಿಪಾಯದ ಮೇಲೆ ಎದ್ದು ನಿಂತಿರುವ ಭವ್ಯ ಸೌಧವಾಗಿದೆ.

ನಾಲ್ವಡಿ ಕೃಷ್ಣರಾಜ ಒಡೆಯರು ಮೈಸೂರು ರಾಜ್ಯಕ್ಕೆ ನೀಡಿದ ಅಮೂಲ್ಯ ಕೊಡುಗೆ ಎಂದರೆ, ಸ್ಥಳೀಯ ಸಂಸ್ಥೆಗಳನ್ನು ರಚಿಸಿ, ಆಡಳಿತ ವಿಕೇಂದ್ರೀಕರಣಕ್ಕೆ ಅನುವು ಮಾಡಿ ಕೊಟ್ಟದ್ದು. ರಾಜ್ಯದ ಸಣ್ಣ ಸಣ್ಣ ಪಟ್ಟಣಗಳಲ್ಲಿಯೂ ಕೂಡ ಮುನ್ಸಿಪಾಲಿಟಿಗಳು ರಚನೆಯಾದವು. ಹಳ್ಳಿಗಳಲ್ಲಿ ಪ್ರಥಮ ಬಾರಿಗೆ ಗ್ರಾಮಪಂಚಾಯತಿಗಳು ಕಾರ್ಯ ನಿರ್ವಹಿಸಲು ಆರಂಭ ಮಾಡಿದುದರಿಂದ, ಗ್ರಾಮೀಣ ಪ್ರದೇಶಗಳ ಆಡಳಿತದಲ್ಲಿ ಜನರ ಭಾಗವಹಿಸುವಿಕೆಗೆ ಅಪಾರ ಉತ್ತೇಜನ ನೀಡಲಾಯಿತು.

**– ಡಾ. ಶ್ರೀಧರ ಹೆಚ್**
ಮುಖ್ಯಸ್ಥರು, ಇತಿಹಾಸ ವಿಭಾಗ

## ನಾಡಪ್ರಭು ಕೆಂಪೇಗೌಡ

- ಕೊಡುಗೈ ದಾನಿಯಾಗಿದ್ದರು.
- ಕೆರೆ, ಕಟ್ಟೆ, ಪೇಟೆ ಹಾಗೂ ದೇವಾಲಯಗಳ ನಿರ್ಮಾಪಕ.
- 60 ವೀರಶೈವ ಮಠಗಳ ಸ್ಥಾಪನೆ.
- ಬೆಂಗಳೂರು ನಗರ 'ನಿರ್ಮಾತೃ'.
- ನಗರಾಭಿವೃದ್ಧಿ ಮತ್ತು ಉದ್ಯೋಗಗಳನ್ನು ಸೃಷ್ಟಿಸಿದರು.
- ಬೆಂಗಳೂರು ಕೋಟೆಯ ದಕ್ಷಿಣ ಭಾಗದ ದಿಡ್ಡಿಬಾಗಿಲ ಭದ್ರಬುನಾದಿಗಾಗಿ ಕೆಂಪೇಗೌಡರ ಸೊಸೆ ಲಕ್ಷ್ಮಿದೇವಿ ಅವರು ಸ್ವತಃ ಆತ್ಮಾರ್ಪಣೆ ಮಾಡಿಕೊಂಡರು.
- ಗಂಗರ ಕಾಲದಿಂದ ಆಡಳಿತ ಪ್ರಾರಂಭಿಸಿದ ನಾಡಪ್ರಭುಗಳು.
- ತದನಂತರ ಕೆಂಪೇಗೌಡರು ವಿಜಯನಗರ ಸಾಮ್ರಾಟರ ಸಾಮಂತರಾಗಿ ಯಲಹಂಕ ನಾಡಿನ ಚುಕ್ಕಾಣಿ ಹಿಡಿದರು.
- ಬೆಂಗಳೂರಿನಲ್ಲಿ ಪಂಚಗೋಪುರಗಳ ನಿರ್ಮಾಣ.

1) ಬೆಳ್ಳಿಮಂಟಪ (ವಾಣಿಜ್ಯ ಮಂಟಪ)
2) ಇಲಂತೆ ಮಂಟಪ (ಆರೋಗ್ಯ ಮಂಟಪ)
3) ಚಾಕಿಸ್ಥಾನ ಮಂಟಪ (ನ್ಯಾಯ ಮಂಟಪ)
4) ಸಿಡುಂಕಲ್ ಮಂಟಪ (ದೈವ ಮಂಟಪ)

- ಬೆಂಗಳೂರು ಜನರ ಕುಡಿಯುವ ನೀರಿಗಾಗಿ ಅನೇಕ ಕೆರೆಕಟ್ಟೆಗಳ ನಿರ್ಮಾಣ

1) ಕೆಂಪಾಂಬುದಿ ಕೆರೆ
2) ಗಿಡ್ಡೆಗೌಡರ ಕೆರೆ
3) ಕಾರಂಜಿ ಕೆರೆ
4) ಜಕ್ಕರಾಯನಕೆರೆ
5) ಕೆಂಪಾಪುರ ಅಗ್ರಹಾರ ಕೆರೆ
6) ಮಾವಳ್ಳಿ ಸಿದ್ದಾಪುರ ಕೆರೆ

- ಹಲವು ಪ್ರಸಿದ್ಧ ದೇವಾಲಯಗಳ ನಿರ್ಮಾಣ

**ಪು.ತಿ.ನೋ.**



1) ಶ್ರೀ ಗವಿಗಂಗಾಧರೇಶ್ವರ ದೇವಸ್ಥಾನ
2) ಶ್ರೀ ಬಸವೇಶ್ವರ ದೇವಾಲಯ
3) ಶ್ರೀ ದೊಡ್ಡ ವಿಘ್ನೇಶ್ವರ ದೇವಾಲಯ
4) ಶ್ರೀ ಹನುಮಂತದೇವರ ಗುಡಿ
5) ಚೆನ್ನಿಗರಾಯಸ್ವಾಮಿ ದೇವಾಲಯ

♦ ಪ್ರಸಿದ್ಧ ವ್ಯಾಪಾರಿ ಪೇಟೆಗಳನ್ನು ನಿರ್ಮಿಸಿದರು.

1) ಬಿನ್ನಿಪೇಟೆ
2) ಚಿಕ್ಕಪೇಟೆ
3) ಬಳೆಪೇಟೆ
4) ಅಕ್ಕಿಪೇಟೆ
5) ಮಾಮೂಲ್ ಪೇಟೆ
6) ಗಾಣಿಗರ ಪೇಟೆ
7) ನಗರ್ತಪೇಟೆ
8) ಕಾಟನ್ ಪೇಟೆ
9) ಸುಲ್ತಾನ್ ಪೇಟೆ
10) ತಿಗಳರ ಪೇಟೆ
11) ಕುಂಬಾರ ಪೇಟೆ
12) ಗೊಲ್ಲರ ಪೇಟೆ

♦ ಕೆಂಪೇಗೌಡ ವಂಶಸ್ಥರು ಗ್ರಾಮದ ಬ್ರಾಹ್ಮಣರಿಗೆ ಹೊಲ, ಗದ್ದೆ ಮತ್ತು ಮನೆಗಳನ್ನು ದಾನ ಮಾಡುವ ಮೂಲಕ ಕೊಡುಗೈ ದಾನಿಯಾಗಿದ್ದರು.

♦ 500 ವರ್ಷಗಳ ಹಿಂದೆಯೇ ಕೆಂಪೇಗೌಡರು ತಮ್ಮ ದೂರದೃಷ್ಟಿಯಿಂದ ಬೆಂಗಳೂರು ನಗರ ನಿರ್ಮಿಸಿದರು.

♦ ಕೆಂಪೇಗೌಡರು ಬಸವಣ್ಣನವರಂತೆ ಸಮಾಜದ ಎಲ್ಲಾ ವರ್ಗಗಳ ಜನರನ್ನು ಸರ್ವಸಮನ್ವಯತೆಯಿಂದ ಕಂಡರು.

♦ ಸುಮಾರು 46 ವರ್ಷಗಳ ಕಾಲ ನಾಡನ್ನು ಆಳ್ವಿಕೆ ನಡೆಸಿದ ಕೆಂಪೇಗೌಡರು ಸಾಮಾನ್ಯರಲ್ಲಿ ಸಾಮಾನ್ಯರಾಗಿ ಬದುಕಿ ಸರ್ವಜ್ಞಾನ ಪರಂಪರಾಗತವಾಗಿ ಬೆಳೆದರು.

**– ಹೇಮಂತ್‌ಕುಮಾರ್ ಜೆ**
ದ್ವಿತೀಯ ಬಿಎ ವಿದ್ಯಾರ್ಥಿನಿ



## ಬ್ರಿಟಿಷರ ನಿದ್ದೆಗೆಡಿಸಿದ್ದ ಗೆರಿಲ್ಲಾ ಯುದ್ಧ ನಿಷ್ಣಾತ ಅಲ್ಲೂರಿ ಸೀತಾರಾಮರಾಜು

ವಿಶಾಖಪಟ್ಟಣಂನ ಒಂದು ಸಣ್ಣ ಗ್ರಾಮದಲ್ಲಿ 1897 ಜುಲೈ 4ರಂದು ಜನಿಸಿದ ಅಲ್ಲೂರಿ ಸೀತಾರಾಮರಾಜು ಬದುಕಿದ್ದು ಕೇವಲ 27 ವರ್ಷ ಮಾತ್ರ. ಆದರೆ ಅಷ್ಟು ಸಣ್ಣ ವಯಸ್ಸಿನಲ್ಲಿ ಬಹಳ ದೊಡ್ಡ ಹೋರಾಟಗಳನ್ನು ರೂಪಿಸಿದರು. ಬ್ರಿಟಿಷರ ವಿರುದ್ಧ ಬುಡಕಟ್ಟು ಸಮುದಾಯಗಳನ್ನು ಒಗ್ಗೂಡಿಸಿ ಹೋರಾಟಕ್ಕೆ ಹಚ್ಚಿದರು. ಗೆರಿಲ್ಲಾ ದಾಳಿಗಳ ಮೂಲಕ ಬ್ರಿಟಿಷರನ್ನು ಕಂಗೆಡಿಸಿದರು. ಅಗಿನ ಮದ್ರಾಸ್ ಪ್ರಾಂತ್ಯದ ಹಲವೆಡೆ ಇವರ ಕಾರ್ಯಾಚರಣೆ ನಡೆದಿತ್ತು.
ಕುತೂಹಲ ಎಂದರೆ ದಾಳಿಗೆ ಮುನ್ನ ತಾನು ಯಾವಾಗ ಯಾವ ಸಮಯದಲ್ಲಿ ಎಲ್ಲಿ ದಾಳಿ ಮಾಡುತ್ತೇನೆ ಎಂದು ಬ್ರಿಟಿಷರಿಗೆ ಅವರು ಎಚ್ಚರಿಕೆಯನ್ನೂ ಕೊಟ್ಟಿರುತ್ತಾರೆ. ಮುಂದೆ ನಡೆದ ಎಲ್ಲಾ ದಾಳಿಯಲ್ಲೂ ಅವರು ಇದೇ ರೀತಿ ಮುನ್ನೆಚ್ಚರಿಕೆ ಕೊಡುತ್ತಾರೆ.



## ಬ್ರಿಟಿಷರ ವಿರುದ್ಧ ಹೋರಾಡಿದ ವೀರ ನಾರಿ - ಝಾನ್ಸಿಯ ಝಲ್ಕಾರಿ ಬಾಯಿ

1857 ರ ಭಾರತದ ದಂಗೆಯಲ್ಲಿ ಝಾನ್ಸಿಯ ರಾಣಿಯಾದ ಲಕ್ಷ್ಮಿ ಬಾಯಿಯ ಪಾತ್ರ ಬಹು ಮುಖ್ಯವಾದದ್ದು. ಝಾನ್ಸಿಯ ಝಲ್ಕಾರಿ ಬಾಯಿಯೂ ಸಹ ಲಕ್ಷ್ಮಿ ಬಾಯಿ ಅಷ್ಟೇ ವೀರ ನಾರಿಯಾಗಿದ್ದಳು . ಝಲ್ಕಾರಿ ಬಾಯಿ ನವೆಂಬರ್ 22 , 1830 ರಲ್ಲಿ ಜನಿಸಿದ ಝಲ್ಕಾರಿ ಬಾಯಿಯು ತನ್ನ ಚಿಕ್ಕ ವಯಸ್ಸಿನಲ್ಲಿಯೇ ತನ್ನ ತಾಯಿಯನ್ನು ಕಳೆದುಕೊಂಡು ತಂದೆಯ ಆಶ್ರಯದಲ್ಲಿ ಬೆಳೆದಳು. ಎಲ್ಲ ಮಕ್ಕಳಂತೆ ಆಟಗಳಲ್ಲಿ ಸಮಯವನ್ನು ವ್ಯರ್ಥಮಾಡದೆ ಇವಳು ತನ್ನ ಸಮಯವನ್ನು ಶಸ್ತ್ರಾಸ್ತ್ರಗಳ ಅಭ್ಯಾಸದಲ್ಲಿ ತೊಡಗಿಸಿದಳು.



# ಜಪಾನಿಗರ ಬದುಕು ಕಸಿದ ಹಿರೋಶಿಮಾ ಅಣು ದಾಳಿಗೆ 80 ವರ್ಷ

ಆ ಘಟನೆಯಿಂದ ಒಂದು ದೇಶದ ಲಕ್ಷಾಂತರ ಜನ ಸಾವನ್ನಪ್ಪಿ ಸಂಕಷ್ಟ ಅನುಭವಿಸಿದರೆ, ಮತ್ತೊಂದು ದೇಶಕ್ಕೆ ಇಡೀ ಜಗತ್ತಿಗೆ ತನ್ನ ಶಕ್ತಿಯನ್ನು ತೋರಿಸಿದ ಪ್ರತಿಷ್ಠೆ. ಆದರೆ ಆ ಘಟನೆಯಿಂದ ಪ್ರಪಂಚಕ್ಕೆ ವಿನಾಶದ ಮುನ್ಸೂಚನೆ ದೊರಕಿತ್ತು.

ಅದು 1945ರ ಆಗಸ್ಟ್ 6, ಮುಂಜಾನೆ 8.15ಕ್ಕೆ ಜಪಾನ್ ದೇಶದ ಪ್ರಮುಖ ಮಿಲಿಟರಿ ನೆಲೆಯಾಗಿದ್ದ ಹಿರೋಶಿಮಾ ನಗರದ ನಾಗರಿಕರು ಯುದ್ಧದ ಭೀತಿಯಲ್ಲೇ, ಎಂದಿನಂತೆ ತಮ್ಮ ಕೆಲಸ ಕಾರ್ಯಗಳಲ್ಲಿ ತೊಡಗಿದ್ದರು. ಆಗಸದಿಂದ ಅಮೆರಿಕದ ಸೇನಾ ವಿಮಾನವೊಂದು ಜಗತ್ತಿನಲ್ಲಿ ಮೊಟ್ಟ ಮೊದಲ ಬಾರಿಗೆ ಅಣುಬಾಂಬ್ ಹಾಕಿತ್ತು. ಕೆಲವೇ ಕ್ಷಣದಲ್ಲಿ ಬಾಂಬ್ ಬಿದ್ದ ಸ್ಥಳದಿಂದ ಸುತ್ತಲೂ ಸುಮಾರು 4 ಕಿಲೋಮೀಟರ್ ದೂರದ ಜಾಗ ಸುಟ್ಟು ಬೂದಿಯಾಗಿತ್ತು. ಹಿರೋಶಿಮಾ ನಗರದ ಸುಮಾರು 90ರಷ್ಟು ಜಾಗ ಛಿದ್ರಗೊಂಡು, ಲಕ್ಷಾಂತರ ಮಂದಿ ಸಾವನ್ನಪ್ಪಿದ್ದರು. ಇನ್ನೂ ಅನೇಕರು ಗಾಯಾಳುಗಳಾದರು. ಮನುಕುಲ ಕಂಡ ಈ ಅತ್ಯಂತ ಘೋರ ಕರಾಳ ಘಟನೆಗೆ ಇಂದಿಗೆ 80 ವರ್ಷ.

**ಅಣುಬಾಂಬ್ ದಾಳಿಯ ಉದ್ದೇಶ**

1939ರಲ್ಲಿ ಆರಂಭಗೊಂಡಿದ್ದ 2ನೇ ಮಹಾಯುದ್ಧವು 1945ರ ಹೊತ್ತಿಗೆ ನಿರ್ಣಾಯಕ ಘಟ್ಟ ತಲುಪಿತ್ತು. ಇಟಲಿ ಮತ್ತು ಜರ್ಮನಿ ದೇಶಗಳು ಮಿತ್ರ ರಾಷ್ಟ್ರಗಳಿಗೆ ಶರಣಾಗಿದ್ದವು. ಆದರೆ ಜಪಾನ್ ಇನ್ನೂ ಶರಣಾಗಿರಲಿಲ್ಲ. ಈ ವೈಷಮ್ಯದಿಂದ ಅಮೆರಿಕ ಜಪಾನ್ ಮೇಲೆ ಆಕ್ರಮಣ ಮಾಡಿತ್ತು. ಜಪಾನ್ ಇದಕ್ಕೆ ಪ್ರತಿದಾಳಿ ಮಾಡಿದ್ದರಿಂದ ಆಕ್ರೋಶಗೊಂಡ ಅಂದಿನ ಅಮೆರಿಕ ಅಧ್ಯಕ್ಷ ಹ್ಯಾರಿ ಎಸ್. ಟ್ರೂಮನ್ ಜಪಾನ್‌ಗೆ 'ನಿಮ್ಮ ದೇಶವನ್ನು ಕ್ಷಣಮಾತ್ರದಲ್ಲಿ ನಾಶ ಮಾಡುವ ಶಸ್ತ್ರಾಸ್ತ್ರ ನಮ್ಮ ಬಳಿ ಇದೆ. ಕೂಡಲೇ ಯುದ್ಧ ನಿಲ್ಲಿಸಿ ಶರಣಾಗಿ. ಇಲ್ಲದಿದ್ದರೆ ದಾಳಿ ಮಾಡಬೇಕಾಗುತ್ತದೆ' ಎಂಬ ಎಚ್ಚರಿಕೆಯ ಪತ್ರ ರವಾನಿಸಿದ್ದರು. ಆದರೆ ಪತ್ರಕ್ಕೆ 9 ದಿನವಾದರೂ ಉತ್ತರ ಸಿಗದ ಹಿನ್ನೆಲೆ 1945 ರ ಆಗಸ್ಟ್ 6 ರಂದು ಜಪಾನ್‌ನ ಪ್ರಮುಖ ನಗರವಾದ ಹಿರೋಶಿಮಾ ಮೇಲೆ ಅಮೆರಿಕವು 'ಲಿಟಲ್ ಬಾಯ್' ಎಂಬ ಹೆಸರಿನ 4030 ಕೆ.ಜಿ. ತೂಕದ ಯುರೇನಿಯಂ – 235ನಿಂದ ತಯಾರಿಸಿದ್ದ ಅಣ್ವಸ್ತ್ರವನ್ನು ಎಸೆಯಿತು. ಇದಾದ 3 ದಿನಗಳ ಬಳಿಕ ಅಂದರೆ ಆಗಸ್ಟ್ 9 ರಂದು ಜಪಾನ್‌ನ ಮತ್ತೊಂದು ನಗರವಾದ ನಾಗಾಸಾಕಿ ಎಂಬ ನಗರಕ್ಕೂ 'ಫ್ಯಾಟ್‌ಮ್ಯಾನ್' ಎಂಬ ಹೆಸರಿನ ಪ್ಲುಟೋನಿಯಂ –239ನಿಂದ ತಯಾರಿಸಿದ್ದ 4535 ಕೆ.ಜಿ. ತೂಕದ ಅಣುಬಾಂಬ್ ಹಾಕಿ ಘೋರ ಪಾಪ ಮಾಡಿತು. ಈ ದಾಳಿಯಲ್ಲೂ ಹೆಚ್ಚು ಜನರು ಸಾವನ್ನಪ್ಪಿದರು. ಇದರಿಂದ ಅಪಾರ ಸಂಕಷ್ಟ ಅನುಭವಿಸಿದ ಜಪಾನ್ ಅಮೆರಿಕಕ್ಕೆ ಶರಣಾಯಿತು.

**ಅಪಾರ ಜೀವಹಾನಿ, ವಿನಾಶ**

ಅಣುಬಾಂಬ್‌ನ ವಿಕಿರಣದ ಹರಡುವಿಕೆಯಿಂದ ಜಪಾನ್ ಅಪಾರ ಜೀವಹಾನಿ, ವಿನಾಶ ಅನುಭವಿಸಿತು. ಅಲ್ಲಿನ ಆರೋಗ್ಯ ಇಲಾಖೆಯ ಮಾಹಿತಿ ಪ್ರಕಾರ, ಹಿರೋಶಿಮಾ ನಗರದಲ್ಲಿ 90 ಸಾವಿರದಿಂದ 1,66,000 ಜನರು ಸಾವಿಗೀಡಾದರೆ, ಬಹಳಷ್ಟು ಜನ ಗಾಯಾಳುಗಳಾಗಿ ಕೆಲ ದಿನಗಳ ನಂತರ ನರಳಿ ಸತ್ತರು. ಕಟ್ಟಡಗಳೆಲ್ಲವೂ ಭಸ್ಮವಾದವು. ರೇಡಿಯೋ ಟವರ್‌ಗಳೆಲ್ಲವೂ ನಾಶಗೊಂಡು ಸಂವಹನ ವ್ಯವಸ್ಥೆ ಹಾಳಾಯಿತು. ನಾಗಾಸಾಕಿ ಮೇಲೆ ನಡೆದ ದಾಳಿಯಲ್ಲಿ ಸುಮಾರು 40,000 ಜನರು ತಕ್ಷಣವೇ ಸಾವನ್ನಪ್ಪಿದ್ದರು. 1946ರ ಅಂತ್ಯದ ವೇಳೆಗೆ ಅಲ್ಲಿನ ಒಟ್ಟು ಸಾವಿನ ಸಂಖ್ಯೆ 74,000 ಎಂದು ಅಂದಾಜಿಸಲಾಗಿದೆ. ಘಟನೆಯಲ್ಲಿ ಬದುಕುಳಿದ ಜನರು ಹೀನಾಯವಾಗಿ ಮುಂದಿನ ಜೀವನ ಕಳೆಯುವಂತಾಯಿತು. ಮುಂಪೀಳಿಗೆಗಳೆಲ್ಲವೂ ವಿಕಿರಣ ಕಾಯಿಲೆ, ಕ್ಯಾನ್ಸರ್, ವಿಕಲಾಂಗತೆ ಮತ್ತು ಇತರೆ ಕಾಯಿಲೆಗಳಿಂದ ಬಳಲುವಂತಾಯಿತು. ಈ ಬಾಂಬ್ ಸ್ಫೋಟಗೊಂಡ ಅದೆಷ್ಟೋ ವರ್ಷಗಳ ಬಳಿಕವೂ ಇಂದಿಗೂ ಅಲ್ಲಿನ ಜನ ನೋವನ್ನು ಅನುಭವಿಸುತ್ತಿದ್ದಾರೆ. ಇದರಿಂದ ಎಚ್ಚೆತ್ತುಕೊಂಡ ಜಗತ್ತು ಪರಮಾಣು ಶಸ್ತ್ರಾಸ್ತ್ರಗಳಿಂದಾಗುವ ಅಪಾಯವನ್ನು ತಿಳಿದು ಯಾವುದೇ ದೇಶಗಳ ನಡುವೆ ಯುದ್ಧ ಸಂಭವಿಸಿದರೂ ಪರಮಾಣು ದುರಂತ ನಡೆಯದಂತೆ ತಡೆಯುತ್ತಿದೆ. ಈ ದಿನವನ್ನು ಕರಾಳ ದಿನವನ್ನಾಗಿ ಆಚರಿಸಲಾಗುತ್ತಿದೆ.

**– ಜಗದೇಶ್ವರಿ ಹೆಚ್.ಆರ್.**
ಪ್ರಥಮ ಬಿಎ ವಿದ್ಯಾರ್ಥಿನಿ



# ನಮ್ಮ ರಾಷ್ಟ್ರದ ಬಗ್ಗೆ ನಮಗೆಷ್ಟು ಗೊತ್ತು?

- ಭಾರತದ ರಾಷ್ಟ್ರಧ್ವಜ ಅಳವಡಿಸಿಕೊಂಡಿದ್ದು – **ಜುಲೈ 22, 1947**
- ಧ್ವಜ ವಿನ್ಯಾಸಗೊಳಿಸಿದವರು – **ಪಿಂಗಾಲಿ ವೆಂಕಯ್ಯ**
- ಧ್ವಜದ ಉದ್ದ – **ಅಗಲ: 3:2**
- ಧ್ವಜದ ನಿಯಮ ಜಾರಿಗೆ ಬಂದಿದ್ದು – **2002 ರಲ್ಲಿ**
- ಧ್ವನಿ ನಿಯಮಕ್ಕೆ ತಿದ್ದುಪಡಿ ತಂದದ್ದು – **2005 ರಲ್ಲಿ**
- ಭಾರತದ ರಾಷ್ಟ್ರಗೀತೆಯನ್ನು ಅಳವಡಿಸಿಕೊಂಡದ್ದು – **ಜ. 24, 1950**
- ಮೊದಲು ಹಾಡಿದ್ದು – **ಡಿ. 27, 1911 ಕೊಲ್ಕತ್ತಾ ಅಧಿವೇಶನದಲ್ಲಿ**
- ಮೂಲ ರಚಿತ ಭಾಷೆ – **ಬಂಗಾಳಿ**
- ರಚನೆ – **ರವೀಂದ್ರನಾಥ ಟ್ಯಾಗೋರ್**
- ಹಾಡುವ ಅವಧಿ – **48 ರಿಂದ 52 ಸೆಕೆಂಡ್**
- ಒಳಗೊಂಡಿರುವ ಸಾಲುಗಳು – **13**
- ಭಾರತದ ರಾಷ್ಟ್ರೀಯ ಚಿಹ್ನೆ – **ನಾಲ್ಕು ಮುಖದ ಸಿಂಹ**
- ರಾಷ್ಟ್ರೀಯ ಲಾಂಛನ ಅಳವಡಿಸಿಕೊಂಡದ್ದು – **ಜ. 26, 1950**
- ಸತ್ಯಮೇವ ಜಯತೆಯ ಲಿಪಿ – **ದೇವನಾಗರಿ ಲಿಪಿ**
- ಉಪನಿಷತ್ತು – **ಮುಂಡಕೋಪನಿಷತ್**
- ಭಾರತದ ನಾಡಗೀತೆ – **ವಂದೆ ಮಾತರಂ**
- ವಂದೆ ಮಾತರಂ ರಚನೆ – **ಬಂಕಿಮಚಂದ್ರ ಚಟರ್ಜಿ**
- ಕಾದಂಬರಿ – **ಆನಂದ ಮಠ**
- ಮೊದಲು ಹಾಡಿದ್ದು – **1896 ಕೊಲ್ಕತ್ತಾ ಅಧಿವೇಶನದಲ್ಲಿ**
- ಅಳವಡಿಸಿಕೊಂಡದ್ದು – **ಜ. 24, 1950**
- ದೇಶಭಕ್ತಿಗೀತೆ – **ಸಾರೇ ಜಹಾಂಸೆ ಅಚ್ಛಾ**
- ರಚನೆ – **ಮಹಮದ್ ಇಕ್ಬಾಲ್**
- ಭಾಷೆ – **ಉರ್ದು**
- ಶೈಲಿ – **ಗಜಲ್**

**– ಮೋನಿಕಾ ಬಿ**
ಅಂತಿಮ ಬಿಎ ವಿದ್ಯಾರ್ಥಿನಿ



One-day Workshop on

**Nationalism and Youth**

Resource Person: **Sri K.C. Singh,** Founder & Chairman, Love-India Regional Institute, Bengaluru, Author of Bharata Ratna Novel

**VoMC, NSS, NCC, Student Parliament, Rotaract Club, Red Cross Club & IQAC**

**in association with**

**Love-India Regional Institute, Bengaluru - 12.08.2025**

















ಕನ್ನಡಪ್ರಭ

# ಮಕ್ಕಳೇ ರಾಷ್ಟ್ರೀಯ ಏಕತಾ ಭಾವ ಬೆಳೆಸಿಕೊಳ್ಳಿ

## ಮಹಾಜನ ಕಾಲೇಜಿನಲ್ಲಿ ನಡೆದ ರಾಷ್ಟ್ರೀಯತೆ, ಯುವಕರು ಕುರಿತು ಕಾರ್ಯಾಗಾರದಲ್ಲಿ ಕೆ.ಸಿ.ಸಿಂಗ್ ಕರೆ

• **ಕನ್ನಡಪ್ರಭ ವಾರ್ತೆ** ಮೈಸೂರು

ವಿದ್ಯಾರ್ಥಿಗಳು ಪ್ರಜಾಪ್ರಭುತ್ವ ತತ್ವಗಳನ್ನು ಎತ್ತಿ ಹಿಡಿಯುವ ಮೂಲಕ ರಾಷ್ಟ್ರೀಯ ಏಕತಾ ಭಾವವನ್ನು ಬೆಳೆಸಿಕೊಳ್ಳಬೇಕು ಎಂದು ಲವ್-ಇಂಡಿಯಾ ರೀಜನಲ್ ಇನ್ಸ್ ಟಿಟ್ಯೂಟ್ ಸಂಸ್ಥಾಪಕ ಹಾಗೂ ಅಧ್ಯಕ್ಷ ಕೆ.ಸಿ. ಸಿಂಗ್ ಕರೆ ನೀಡಿದರು.

ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ವಿದ್ಯಾರ್ಥಿ ಸ್ವಯಂ ಸೇವಾ ಘಟಕ, ಎನ್‌ಎಸ್‌ಎಸ್, ಎನ್‌ಸಿಸಿ ಘಟಕ, ವಿದ್ಯಾರ್ಥಿ ಸಂಸತ್, ರೋಟರ್ಯಾಕ್ಟ್ ಕ್ಲಬ್, ಯೂತ್ ರೆಡ್ ಕ್ರಾಸ್ ಮತ್ತು ಐಕ್ಯೂಎಸಿ ಹಾಗೂ ಕರ್ನಾಟಕ ಸರ್ಕಾರದ ಯುವ ಸಬಲೀಕರಣ ಇಲಾಖೆ ಹಾಗೂ ತಾಂತ್ರಿಕ ಶಿಕ್ಷಣ ಇಲಾಖೆಯಿಂದ ಮಾನ್ಯತೆ ಪಡೆದಿರುವ ಬೆಂಗಳೂರಿನ ಲವ್-ಇಂಡಿಯಾ ರೀಜನಲ್ ಇನ್ಸ್ ಟಿಟ್ಯೂಟ್ ಸಹಯೋಗದಲ್ಲಿ ರಾಷ್ಟ್ರೀಯತೆ ಮತ್ತು ಯುವಕರು ಎಂಬ ವಿಷಯ ಕುರಿತು ನಡೆದ ಒಂದು ದಿನದ ಕಾರ್ಯಾಗಾರದಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಆಗಮಿಸಿ, ಉಪನ್ಯಾಸದ ಮೂಲಕ ವಿದ್ಯಾರ್ಥಿಗಳೊಂದಿಗೆ ಸಂವಾದ ನಡೆಸಿ, ರಾಷ್ಟ್ರೀಯತೆ, ದೇಶಪ್ರೇಮ ಮತ್ತು ಯುವಜನಾಂಗ ವನ್ನು ಕುರಿತು ಅವರು ಮಾತನಾಡಿದರು.

ಜ್ಞಾನದ ಹಂಚಿಕೆ ಮತ್ತು ರಾಷ್ಟ್ರ ನಿರ್ಮಾಣದ ಚಟುವಟಿಕೆಗಳಲ್ಲಿ ಇಂದಿನ ಯುವ ಜನಾಂಗ ಸಕ್ರಿಯವಾಗಿ ತೊಡಗಿಸಿಕೊಳ್ಳಬೇಕು. ಸಾಮಾಜಿಕ, ಸಾಂಸ್ಕೃತಿಕ ಮತ್ತು ಆರ್ಥಿಕ ಅಭಿವೃದ್ಧಿಗಳಲ್ಲಿ ಯುವಜನರ ಬುದ್ಧಿವಂತಿಕೆ ಹಾಗೂ ಸಮಯ ಪ್ರಜ್ಞೆಯ ಮಹತ್ವವನ್ನು ತಿಳಿಸಿದರು. ವಿದ್ಯಾರ್ಥಿಗಳು ಸಮಾಜ ಮತ್ತು ರಾಷ್ಟ್ರಕ್ಕಾಗಿ ಸಾಧ್ಯವಾದಷ್ಟು ಉತ್ತಮ ಮತ್ತುಸಕಾರಾತ್ಮಕಚಟುವಟಿಕೆಗಳನ್ನುನಿರ್ವಹಿಸುತ್ತಾ, ಉತ್ತಮ ಕಾರ್ಯತಂತ್ರ, ದೂರದೃಷ್ಟಿ ಮತ್ತು ಒಳ್ಳೆಯ ನಿರ್ಣಯಗಳನ್ನು ತೆಗೆದುಕೊಳ್ಳುವ ಧನಾತ್ಮಕ ಅಂಶ ಗಳನ್ನು ಮೈಗೂಡಿಸಿಕೊಳ್ಳಬೇಕೆಂದು ಹೇಳಿದರು.

ಭಾರತದ ಪ್ರಜಾಪ್ರಭುತ್ವ ಮತ್ತು ರಾಷ್ಟ್ರೀಯತೆಯ ಅಡಿಯಲ್ಲಿ ಯುವಕರು ಮೂಲಭೂತವಾಗಿ ತಿಳಿಯಲೇಬೇಕಾಗಿರುವ ಭಾರತದ ಸಂವಿಧಾನ, ತ್ರಿವರ್ಣಧ್ವಜ, ಅಧಿಕೃತ ರಾಷ್ಟ್ರ ಭಾಷೆಗಳು, ರಾಷ್ಟ್ರ ಲಾಂಛನ, ಭಾರತೀಯ ಪ್ರಜಾಸತ್ತಾತ್ಮಕತೆ, ಪ್ರಾಚೀನ ಭಾರತೀಯ ಅನ್ವೇಷಣೆಗಳು, ಜೀವ ವೈವಿಧ್ಯತೆ, ರಾಜಕೀಯ ವಿಜ್ಞಾನ, ನಾಯಕತ್ವ, ಮಾನವ ಹಕ್ಕುಗಳೂ ಸೇರಿದಂತೆ ಹತ್ತು ಹಲವು ವಿಷಯಗಳನ್ನು ವಿದ್ಯಾರ್ಥಿಗಳೊಂದಿಗೆ ಹಂಚಿಕೊಂಡರು. ವಿದ್ಯಾರ್ಥಿಗಳ ಸಾಮಾನ್ಯ ಜ್ಞಾನವನ್ನು ಹೆಚ್ಚಿಸುವ ಹಲವು ಕುತೂಹಲಕಾರಿ ಮಾಹಿತಿಗಳ ಜೊತೆಗೆ, ಪ್ರಚಲಿತ ನಾಗರಿಕ ಸೇವಾ ಪರೀಕ್ಷೆಗಳು ಹಾಗೂ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಎದುರಿಸುವ ಪ್ರಮುಖ ಅಂಶಗಳ ಬಗ್ಗೆಯೂ ವಿದ್ಯಾರ್ಥಿಗಳಿಗೆ ಜಾಗೃತಿ ಮೂಡಿಸಿದರು.

ದೇಶದ ಸಂವಿಧಾನ, ಏಕತೆ, ಸಮಗ್ರತೆ, ಸಾರ್ವಭೌಮತೆಯನ್ನು ರಕ್ಷಿಸಿ ಬೆಳೆಸುವಲ್ಲಿ ಇಂದಿನ ಯುವಜನಾಂಗದ ಹೊಣೆಗಾರಿಕೆಯನ್ನು ನೆನಪಿಸಿದರು. ಸನಾತನ ಭಾರತದಸಂಸ್ಕೃತಿ, ಪರಂಪರೆ, ನಾಗರಿಕತೆಯು ವರ್ತಮಾನದ ಭಾರತೀಯಜ್ಞಾನ ಪರಂಪರೆಯ ಅಧ್ಯಯನಕ್ಕೆ ಅಡಿಗಲ್ಲಾಗಿದೆ ಎಂದು ಅವರು ಅಭಿಪ್ರಾಯಪಟ್ಟರು.

ಪ್ರಾಂಶುಪಾಲೆ ಡಾ.ಬಿ.ಆರ್. ಜಯಕುಮಾರಿ, ಶೈಕ್ಷಣಿಕ ಡೀನ್ ಹಾಗೂ ವಿದ್ಯಾರ್ಥಿ ಸ್ವಯಂ ಸೇವಕ ಘಟಕದ ಸಂಚಾಲಕ ಡಾ.ಎಚ್. ಶ್ರೀಧರ, ಐಕ್ಯೂಎಸಿ ಸಂಯೋಜಕಿ ಡಿ. ಗೀತಾ, ವಿದ್ಯಾರ್ಥಿ ಸಂಸತ್ ಮತ್ತು ಎನ್‌ಸಿಸಿ ಅಧಿಕಾರಿಗಳಾದ ಡಾ.ಪಿ.ಜಿ. ಪುಷ್ಪರಾಣಿ, ಎನ್‌ಎಸ್‌ಎಸ್ ಘಟಕಗಳ ಅಧಿಕಾರಿಗಳಾದ ಡಾ.ಜಿ. ದೊಡ್ಡರಸಯ್ಯ, ಡಾ.ಸಿ.ಎಸ್. ಸಿದ್ದರಾಜು, ಯೂತ್ ರೆಡ್ ಕ್ರಾಸ್ ಸಂಚಾಲಕಿ ಎಂ.ಎಚ್. ಸುನೀತಾ, ರೋಟರ್ಯಾಕ್ ಕ್ಲಬ್ ಗಳ ಸಂಚಾಲಕಿ ವಿ. ಗಾಯತ್ರಿ, ಸಾರ್ವಜನಿಕ ಸಂಪರ್ಕಾಧಿಕಾರಿ ಎಸ್. ಪೂರ್ಣಿಮ, ಲವ್-ಇಂಡಿಯಾ ರೀಜನಲ್ ಇನ್ಸ್ ಟಿಟ್ಯೂಟ್ ಸಂಚಾಲಕ ಪ್ರವೀಣ್ ಸಿಂಗ್ ಇದ್ದರು.

ಕಾಲೇಜಿನ ಅಧ್ಯಾಪಕರು ಹಾಗೂ ಎಲ್ಲ ಘಟಕಗಳ ವಿದ್ಯಾರ್ಥಿ ಸದಸ್ಯರು ಇದ್ದರು.



ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ನಡೆದ ರಾಷ್ಟ್ರೀಯತೆ ಮತ್ತು ಯುವಕರು ಎಂಬ ವಿಷಯ ಕುರಿತು ನಡೆದ ಒಂದು ದಿನದ ಕಾರ್ಯಾಗಾರವನ್ನು ಲವ್-ಇಂಡಿಯಾ ರೀಜನಲ್ ಇನ್ಸ್ ಟಿಟ್ಯೂಟ್ ಸಂಸ್ಥಾಪಕ ಹಾಗೂ ಅಧ್ಯಕ್ಷ ಕೆ.ಸಿ. ಸಿಂಗ್ ಉದ್ಘಾಟಿಸಿದರು.



# Visit to Posters Exhibition: Historical Temples of Karnataka, Kalamandira, Mysuru - 19.08.2025




































ಶಿಕ್ಷಣದಿಂದ ಶ್ರೇಷ್ಠತೆ

**ಎಸ್‌ಬಿಆರ್‌ಆರ್ ಮಹಾಜನ ಪ್ರಥಮದರ್ಜೆ ಕಾಲೇಜು (ಸ್ವಾಯತ್ತ)**

ಜಯಲಕ್ಷ್ಮೀಪುರಂ, ಮೈಸೂರು–12

ಶ್ರೇಷ್ಠತೆಯ ಸಾಮರ್ಥ್ಯವುಳ್ಳ ಕಾಲೇಜು

**ಇತಿಹಾಸ ವಿಭಾಗ**

**Dept. of History**

**ಮೈಸೂರು ವಿಶ್ವವಿದ್ಯಾನಿಲಯದಿಂದ ಸಂಯೋಜನೆಗೊಂಡು, ನ್ಯಾಕ್‌ನಿಂದ 'ಎ' ಮಾನ್ಯತೆ ಪಡೆದಿದೆ.**




**ಸಂಚಿಕೆ: 50 ಸೆಪ್ಟೆಂಬರ್ 2025** ಪ್ರಧಾನ ಸಂಪಾದಕರು: ಡಾ. ಬಿ.ಆರ್. ಜಯಕುಮಾರಿ, ಪ್ರಾಂಶುಪಾಲರು **www.mahajana.edu.in** ಸಂಪಾದಕರು: ಡಾ. ಶ್ರೀಧರ ಹೆಚ್, ಇತಿಹಾಸ ವಿಭಾಗ **ಪುಟಗಳು: 09**



## ಸಂಪಾದಕೀಯ

## ಮೋಕ್ಷಗುಂಡಂ ವಿಶ್ವೇಶ್ವರಯ್ಯ ಮೈಸೂರು ಭಾಗದಲ್ಲಿ ಇನ್ನೂ ಜೀವಿಸಿದ್ದಾರೆ!



1968ರಿಂದ ಪ್ರತಿ ವರ್ಷ ಸೆಪ್ಟೆಂಬರ್ 15ರಂದು ಭಾರತದ ಸರ್ವ ಶ್ರೇಷ್ಠ ಎಂಜಿನಿಯರ್ ಹಾಗೂ ಭಾರತರತ್ನ, ಶತಾಯುಷಿ ಸರ್ ಮೋಕ್ಷಗುಂಡಂ ವಿಶ್ವೇಶ್ವರಯ್ಯ ಅವರ ಗೌರವಾರ್ಥ ಎಂಜಿನಿಯರ್ಸ್ ದಿನವನ್ನು ಆಚರಿಸಿಕೊಂಡು ಬರಲಾಗುತ್ತಿದೆ. ಜಗತ್ತು ಕಂಡ ಅಪರೂಪದ ವ್ಯಕ್ತಿ, ಸಮಯವೇ ಬೆರಗಾಗುವಷ್ಟು ಕರಾರುವಕ್ಕಾಗಿ ಪಾಲಿಸುತ್ತಿದ್ದ ಸಮಯ ಪಾಲನೆ, ಶಿಸ್ತು, ಕಾಯಕವೇ ಕೈಲಾಸ ಎಂಬ ಧ್ಯೇಯ ವಾಕ್ಯದ ಪರಿಪಾಲಕ, ಮೈಸೂರು ಸಂಸ್ಥಾನದ ಚತುರ ಆಡಳಿತಗಾರ ಇವುಗಳ ಜೊತೆಗೆ ಭ್ರಷ್ಟಾಚಾರದ ಕರಿನೆರಳು ತಮ್ಮ ಬಳಿ ಸೋಕದ ಹಾಗೆ ಸೇವಾವಧಿಯಲ್ಲಿ ಕರ್ತವ್ಯ ನಿರ್ವಹಿಸಿದ್ದು ಹೀಗೆ ಎಲ್ಲವೂ ಪರಿಗಣನೆಗೆ ಬಂದಿದ್ದರಿಂದಲೇ ಭಾರತ ರತ್ನ ಪ್ರಶಸ್ತಿ ಸಿಗುವುದಕ್ಕೆ ಸಾಧ್ಯವಾಯಿತು. ಅವರ ಸಾಧನೆಯ ಫಲವಾಗಿ ಸರ್ ಎಂವಿಯವರು ಹುಟ್ಟಿದ ದಿನಾಂಕ ಸೆಪ್ಟೆಂಬರ್ 15ರಂದು ಎಂಜಿನಿಯರ್ ದಿನಾಚರಣೆಯನ್ನು ಆಚರಿಸಿಕೊಂಡು ಬರುತ್ತಿದ್ದೇವೆ. ಎಂಜಿನಿಯರ್‌ಗಳಿಗೆ ಆ ದಿನ ಸಂಭ್ರಮದ ದಿನ, ಮಂಡ್ಯ ಜಿಲ್ಲೆಯ ಕೃಷ್ಣರಾಜ ಸಾಗರ ಅಣೆಕಟ್ಟೆಯ ನಿರ್ಮಾಣದಲ್ಲಿ ಶ್ರಮಿಸಿದ ಹಲವಾರು ಎಂಜಿನಿಯರ್‌ಗಳಲ್ಲಿ ವಿಶ್ವೇಶ್ವರಯ್ಯನವರು ಪ್ರಮುಖರು, ಬರಡು ಭೂಮಿ ಆಗಿದ್ದ ಮಂಡ್ಯ ಜಿಲ್ಲೆಯು ಸಮೃದ್ಧ ಬೆಳೆ ಬೆಳೆಯುವ ಸಕ್ಕರೆಯ ನಾಡಾಯಿತು. ಮಂಡ್ಯ ಜಿಲ್ಲೆಯ ಜನರು ತಮಗೆ ಉಪಕಾರ ಮಾಡಿದವರನ್ನು ಜೀವ ಇರುವವರೆಗೂ ಮರೆಯುವುದಿಲ್ಲ, ಹೃದಯದಲ್ಲಿ ಸ್ಥಾಪಿಸಿ ಪೂಜಿಸುತ್ತಾರೆ, ಆದರೆ ಮೈಸೂರು ಜಿಲ್ಲೆಗೆ ನಾಲ್ವಡಿ ಕೃಷ್ಣರಾಜರ ಆಡಳಿತಾವಧಿಯಲ್ಲಿ ಮೈಸೂರು ಸಂಸ್ಥಾನದ ದಿವಾನರಾಗಿ ನೆನಪಿನಲ್ಲಿ ಉಳಿಯುವಂತಹ ಬಹಳಷ್ಟು ಕೆಲಸಗಳನ್ನು ಮಾಡಿದ್ದಾರೆ. 1909ರಲ್ಲಿ ಮೈಸೂರು ಸಂಸ್ಥಾನದ ಮುಖ್ಯ ಎಂಜಿನಿಯರ್ ಆಗಿ ನಿಯೋಜನೆಗೊಂಡು 1912ರವರೆಗೆ ಕರ್ತವ್ಯ ನಿರ್ವಹಿಸಿ ನಂತರ 1912 ರಿಂದ 1918ರವರೆಗೆ ದಿವಾನರಾಗಿ ಉತ್ತಮ ಆಡಳಿತ ನೀಡಿ ಕರ್ನಾಟಕದ ದಕ್ಷಿಣ ಭಾಗದ ಅಭಿವೃದ್ಧಿಗೆ ಸಾಕಷ್ಟು ಕೆಲಸ ಮಾಡಿದ್ದಾರೆ. ಒಟ್ಟಾರೆ ಮೈಸೂರು ಸಂಸ್ಥಾನಕ್ಕಾಗಿ ಒಂಭತ್ತು ವರ್ಷಗಳ ಕಾಲ ಶಿಸ್ತಿನಿಂದ ಸಮಯ ವ್ಯರ್ಥ ಮಾಡದೆ ನಿರಂತರವಾಗಿ ದುಡಿದಿದ್ದಾರೆ.

ಕೃಷ್ಣರಾಜ ಸಾಗರ ಅಣೆಕಟ್ಟೆಯಲ್ಲಿ ಶೇಖರವಾಗುವ ನೀರು ಮಂಡ್ಯ ಜಿಲ್ಲೆಗೆ ಮಾತ್ರವಲ್ಲ, ಮೈಸೂರು ಮತ್ತು ಬೆಂಗಳೂರಿಗೂ ಹೆಚ್ಚಿನ ಉಪಯೋಗವಾಗುತ್ತಿದೆ. ಆದರೆ ಮಂಡ್ಯ ಜಿಲ್ಲೆಯ ಜನತೆ ನಿತ್ಯವೂ ಅವರ ಹೆಸರೇಳಿಯೇ ಮುಂದಿನ ಕೆಲಸಗಳಿಗೆ ಹೋಗುವುದು, ಉಳಿದ ಜಿಲ್ಲೆಗಳು ಮರೆತಂತಿದೆ. ಮಂಡ್ಯ ಜಿಲ್ಲೆಯ ಬಹುತೇಕ ಹಳ್ಳಿಗಳಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರ್ ಹಾಗೂ ವಿಶ್ವೇಶ್ವರಯ್ಯನವರ ಪ್ರತಿಮೆಗಳಿವೆ ಮತ್ತು ಮನೆಗಳಲ್ಲಿ ದೇವರೊಟ್ಟಿಗೆ ಇವರ ಫೋಟೋ ಇಟ್ಟು ಪೂಜಿಸುತ್ತಾರೆ. Work is worship and service to the nation is the goal and purpose of all education and knowledge. ಕೆಲಸವೆ ಪೂಜೆ ಮತ್ತು ರಾಷ್ಟ್ರ ಸೇವೆಯೇ ಎಲ್ಲಾ ಶಿಕ್ಷಣ ಮತ್ತು ಜ್ಞಾನದ ಗುರಿ ಮತ್ತು ಉದ್ದೇಶ ಎನ್ನುವ ಮಂತ್ರದ ಜೊತೆಗೆ It is better to work out than rust out, Work, work hard, hard work does not kill, It is worry that kills. ಕುಳಿತು ತುಕ್ಕು ಹಿಡಿಯುವುದಕ್ಕಿಂತ ದುಡಿದು ಸವೆಯುವುದೆ ಉತ್ತಮ, ಕಷ್ಟಪಟ್ಟು ಕೆಲಸ ಮಾಡುವುದರಿಂದ, ಕಠಿಣ ಪರಿಶ್ರಮವು ಕೊಲ್ಲುವುದಿಲ್ಲ, ಚಿಂತೆಯು ಕೊಲ್ಲುತ್ತದೆ, ಎಂಬುದನ್ನು ಎಷ್ಟು ಅರ್ಥಗರ್ಭಿತವಾಗಿ ತಿಳಿಯಪಡಿಸಿದ್ದಾರೆ. ಅದರಂತೆಯೇ ಕೊನೆವರೆಗೂ ವಿರಮಿಸದೆ ದುಡಿಮೆಯೊಟ್ಟಿಗೆ ಜೀವಿಸಿದ್ದರು. ಬೆಂಗಳೂರು ನಗರದ ಕುಡಿಯುವ ನೀರಿನಲ್ಲಿ ಶೇ.80ರಷ್ಟು ಪ್ರಮಾಣದ ನೀರು ಕೃಷ್ಣ ರಾಜಸಾಗರ ಅಣೆಕಟ್ಟೆಯಿಂದ ಸರಬರಾಜು ಆಗುತ್ತದೆ, ಮೈಸೂರು ಜಿಲ್ಲೆಗೂ ವ್ಯವಸಾಯ ಹಾಗೂ ನಗರದ ಕುಡಿಯುವ ನೀರನ್ನು ಜಲಾಶಯದಿಂದಲೇ ಬಿಡುವುದು. ವಿಶ್ವೇಶ್ವರಯ್ಯನವರು ತಮ್ಮ ಬುದ್ಧಿಶಕ್ತಿಯನ್ನು ಎಂಜಿನಿಯರಿಂಗ್ ಕ್ಷೇತ್ರಕ್ಕೆ ಸಂಬಂಧಿಸಿದ ಎಲ್ಲಾ

**ಪು.ತಿ.ನೋ.**



ವಿಭಾಗಗಳಲ್ಲಿ ಸಾಧನೆ ಮಾಡಿದ್ದಾರೆ. ನೀರಾವರಿ, ಅಣೆಕಟ್ಟೆ, ನಾಲೆಗಳು, ಸೇತುವೆಗಳ ನಿರ್ಮಾಣ, ನೀರು ಸರಬರಾಜು, ವಿದ್ಯುತ್ ಉತ್ಪಾದನೆಗಳಲ್ಲದೆ ವಿಶ್ವವಿದ್ಯಾಲಯ ಮಟ್ಟದ ಶಿಕ್ಷಣ, ತಾಂತ್ರಿಕ ಮತ್ತು ಔದ್ಯೋಗಿಕ ತರಬೇತಿ, ನಗರಗಳ ಯೋಜನೆ, ಕೈಗಾರಿಕೆಗಳು ಮತ್ತು ಉತ್ಪಾದನೆ, ಬ್ಯಾಂಕಿಂಗ್, ವಾಣಿಜ್ಯ–ಇವುಗಳಲ್ಲಿ ತಮ್ಮ ದೇಆದ ಹೊಸ ಆವಿಷ್ಕಾರಗಳ ಮಾನದಂಡವನ್ನು ಸ್ಥಾಪಿಸಿದರು ಹಾಗೂ ಭವಿಷ್ಯದಲ್ಲಿ ಯುವ ಪೀಳಿಗೆಗೆ ಬಹಳ ಕಾಲ ತಮ್ಮ ಪ್ರತಿಭೆಯ ಶಕ್ತಿಯನ್ನು ತಿಳಿದುಕೊಳ್ಳಲು ಮತ್ತು ಅರಿಯಲು ಮಹತ್ತರವಾದ ಗುರುತು ಬಿಟ್ಟು ಹೋಗಿದ್ದಾರೆ.

ಸರ್‌ಎಂ.ವಿಶ್ವೇಶ್ವರಯ್ಯನವರನ್ನು ಆಧುನಿಕ ಮೈಸೂರು ಸಂಸ್ಥಾನದ ಪಿತಾಮಹ ಎಂದು ಕರೆಯಲಾಗುತ್ತಿತ್ತು. ಮೈಸೂರು ಸರ್ಕಾರದ ಸೇವೆಯ ಸಮಯದಲ್ಲಿ ಮೈಸೂರು ಸೋಪ್ ಫ್ಯಾಕ್ಟರಿ, ಪ್ಯಾರಾಸಿಟಾಯ್ಡ್ ಪ್ರಯೋಗಾಲಯ, ಭದ್ರಾವತಿಯಲ್ಲಿ ಮೈಸೂರು ಐರನ್ ಸ್ಟೀಲ್ ವರ್ಕ್ಸ್ (ವಿಶ್ವೇಶ್ವರಯ್ಯ ಐರನ್ ಸ್ಟೀಲ್ ಲಿಮಿಟೆಡ್), ಜಯಚಾಮರಾಜೇಂದ್ರ ಪಾಲಿಟೆಕ್ನಿಕ್, ಬೆಂಗಳೂರು ಕೃಷಿ ವಿಶ್ವವಿದ್ಯಾಲಯ, ಸ್ಟೇಟ್ ಬ್ಯಾಂಕ್ ಆಫ್ ಮೈಸೂರು, ಸೆಂಚುರಿ ಕ್ಲಬ್, ಮೈಸೂರು ಚೇಂಬರ್ ಆಫ್ ಕಾಮರ್ಸ್, ಕರ್ನಾಟಕ ವಾಣಿಜ್ಯ ಮಂಡಳಿ, ಬೆಂಗಳೂರಿನ ವಿಶ್ವೇಶ್ವರಯ್ಯ ಎಂಜಿನಿಯರಿಂಗ್ ಕಾಲೇಜು ಮತ್ತು ಹಲವಾರು ಕೈಗಾರಿಕಾ ಉದ್ಯಮಗಳನ್ನು ಸ್ಥಾಪಿಸಲು ಕಾರಣರಾದರು.

ಉದ್ಯಮದಲ್ಲಿ ಖಾಸಗಿ ಹೂಡಿಕೆಯನ್ನು ಪ್ರೋತ್ಸಾಹಿಸಿದರು. ಇವರು ತಿರುಮಲ–ತಿರುಪತಿ ನಡುವಿನ ರಸ್ತೆಯನ್ನು ನಿರ್ಮಿಸುವಲ್ಲಿ ಪ್ರಮುಖ ಪಾತ್ರವಹಿಸಿದ್ದಾರೆ, ಈ ರಸ್ತೆಯಲ್ಲಿ ಇಲ್ಲಿಯವರೆಗೆ ಅಪಘಾತಗಳು ಮತ್ತು ಬಂಡೆ ಕುಸಿತಗಳು ಸಂಭವಿಸದೇ ಇರುವುದು ಯೋಜನೆಯನ್ನು ರೂಪಿಸುವಲ್ಲಿ ಅವರಿಗಿರುವ ಪರಿಣಿತಿಯನ್ನು ತೋರುತ್ತದೆ.

1955ರಲ್ಲಿ ಭಾರತರತ್ನ ಪ್ರಶಸ್ತಿಯನ್ನು ಪಡೆದ ವಿಶ್ವೇಶ್ವರಯ್ಯನವರು, 1910 ರಿಂದ 1936ರವರೆಗೆ ಭಾರತದಲ್ಲಿ ಚಕ್ರವರ್ತಿ ಆಗಿದ್ದ ಐದನೇ ರಾಜ ಜಾರ್ಜ್ ರವರು ಇವರ ಸಾರ್ವಜನಿಕ ಕೆಲಸಗಳನ್ನು ಮೆಚ್ಚಿ 'ನೈಟ್ ಕಮಾಂಡರ್' ಎಂಬ ಬಿರುದನ್ನು ನೀಡಿ ಗೌರವಿಸಿದರು.

ಇವರು ಮಾಡಿದ ಅಭಿವೃದ್ಧಿ ಕಾರ್ಯಗಳು ಇಂದಿಗೂ ಜೀವಂತವಾಗಿದೆ ಹಾಗೂ ಅವುಗಳಿಂದ ಲಕ್ಷಾಂತರ ಜನರು ಇಂದಿಗೂ ಊಟ ಮಾಡುತ್ತಿದ್ದಾರೆ. ಅವರ ಸಹಭಾಗಿತ್ವದಲ್ಲಿ ನಿರ್ಮಾಣವಾದ ಕೃಷ್ಣರಾಜ ಸಾಗರ ಅಣೆಕಟ್ಟೆ ಹಾಗೂ ಇತರೆ ಯೋಜನೆಗಳು ಇನ್ನೂ ನೂರಾರು ವರ್ಷ ಜೀವಂತ ಇರುತ್ತವೆ. ಅವು ಇರುವವರೆಗೂ ಸರ್ ಎಂ.ವಿಶ್ವೇಶ್ವರಯ್ಯ ನಮ್ಮೊಂದಿಗೆ ಜೀವಂತ ಇರುತ್ತಾರೆ. ಪ್ರತಿ ವರ್ಷ ಅವರು ಹುಟ್ಟಿದ ದಿನವನ್ನು ಎಂಜಿನಿಯರ್ ದಿನಾಚರಣೆಯಾಗಿ ಆಚರಿಸುತ್ತೇವೆ. ಬೆಂಗಳೂರು ಮತ್ತು ಮಂಡ್ಯ ನಗರಗಳಲ್ಲಿ ಸರ್‌ಎಂವಿಯವರ ಕೃತಜ್ಞತಾ ಪೂರ್ವಕವಾಗಿ ನಿರ್ಮಿಸಿರುವ ಪ್ರತಿಮೆಗಳು, ವೃತ್ತ, ಕಾಲೇಜು, ಕಟ್ಟಡ ಹಾಗೂ ರಸ್ತೆಗಳಿಗೆ ಇಟ್ಟಿರುವ ಹೆಸರುಗಳು ಬಹಳಷ್ಟು ಇವೆ. ಆದರೆ ಮೈಸೂರಿನಲ್ಲಿ ದಿವಾನ್ ವಿಶ್ವೇಶ್ವರಯ್ಯನವರನ್ನು ನೆನೆಯುವಂತಹ ಕೆಲಸಗಳು ಅರ್ಹತೆಗೆ ಅನುಗುಣವಾಗಿ ಆಗಿಲ್ಲ ಎಂಬುದು ವಿಪರ್ಯಾಸ.

ನಾನು ಹುಡುಕಿ ಪತ್ತೆ ಮಾಡಿರುವಂತೆ ಇವರ ಹೆಸರಿನಲ್ಲಿ ಒಂದು ವೃತ್ತ ಹಾಗೂ ಸಣ್ಣ ರಸ್ತೆ ಇದೆ ಮತ್ತು ಮೂರು ಚಿಕ್ಕ ಚಿಕ್ಕ ಪುತ್ತಳಿಗಳಿವೆ. ಅವು ಸಾರ್ವಜನಿಕವಾಗಿರದೆ ಸರ್ಕಾರಿ/ಸಂಸ್ಥೆ ಕಟ್ಟಡಗಳ ಆವರಣದಲ್ಲಿದೆ. ಹೊರಗಿನವರಿಗಿರಲಿ ನಮ್ಮ ಮೈಸೂರಿನ ಜನತಗೇ ಇವುಗಳ ಪರಿಚಯವಿಲ್ಲ. ಇರ್ವಿನ್ ರಸ್ತೆ ಹಾಗೂ ಸಯ್ಯಾಜಿರಾವ್ ರಸ್ತೆ ಸಂಧಿಸುವ ಸರ್ಕಾರಿ ಆಯುರ್ವೇದಿಕ್ ಆಸ್ಪತ್ರೆ ಬಳಿಯ ವೃತ್ತಕ್ಕೆ ವಿಶ್ವೇಶ್ವರಯ್ಯನವರ ಹೆಸರಿದೆ, ವಿಜಯ ಶ್ರೀ ಬಡಾವಣೆಯ ರಸ್ತೆ ಒಂದನ್ನು ಇವರ ಹೆಸರಿನಿಂದ ಕರೆಯುತ್ತಾರೆ, ವಿಶ್ವೇಶ್ವರಯ್ಯನವರು ವಾಸವಿದ್ದ ನಜರಾಬಾದ್ ಬಂಗಲೆ (ಲೋಕೋಪಯೋಗಿ ವೃತ್ತಕಛೇರಿ) ಆವರಣದಲ್ಲಿ, ಇನ್‌ಸ್ಟಿಟ್ಯೂಟ್ ಆಫ್ ಎಂಜಿನಿಯರ್ ಸಂಸ್ಥೆಯ ಆವರಣ ಹಾಗೂ ಹಳೆ ಡಿಸಿ ಕಛೇರಿ ಹಿಂಭಾಗದಲ್ಲಿರುವ ಗಣಕ ನಿಯಂತ್ರಣ ವಿಭಾಗ ಕಛೇರಿ ಕಟ್ಟಡದ ಒಳಗೆ ಪುತ್ಥಳಿಗಳನ್ನು ಸ್ಥಾಪಿಸಲಾಗಿದೆ, ಇವುಗಳಲ್ಲದೆ ಕೆ.ಆರ್.ವೃತ್ತದ ಸುತ್ತಲಿನ ಕಟ್ಟಡಕ್ಕೆ ವಿಶ್ವೇಶ್ವರಯ್ಯನವರ ಹೆಸರಿಟ್ಟಿದ್ದಾರೆ, ಸಣ್ಣ ಬಡಾವಣೆಗೆ ಇವರ ಹೆಸರಿದೆ, ನಾಮಕಾವಸ್ಥೆಗೆ ಹೆಸರಿದೆಯಾದರೂ ಬಳಕೆಯಲ್ಲಿ ಇಲ್ಲದ ಕಾರಣ ಶೇ.90 ರಷ್ಟು ಜನರಿಗೆ ಇವುಗಳ ಪರಿಚಯವೇ ಇಲ್ಲ.

ಸರ್ ಎಂ ವಿಶ್ವೇಶ್ವರಯ್ಯನವರ ಹೆಸರು ಮೈಸೂರಿನಲ್ಲಿಯೂ ಸ್ಥಿರವಾಗಿ ಉಳಿಯುವಂತೆ ಹಾಗೂ ಜನರ ಮನಸ್ಸಿಗೆ ನಾಟುವ ರೀತಿ ಕೆಲಸಗಳು ಆಗಬೇಕಾಗಿದೆ. ಈಗಲಾದರೂ ಮುಖ್ಯ ರಸ್ತೆಗೆ ಅವರ ಹೆಸರನ್ನು ಇಟ್ಟು, ದೊಡ್ಡ ವೃತ್ತ ಒಂದಕ್ಕೆ ಅದರ ಪುತ್ಥಳಿಯನ್ನು ದೊಡ್ಡದಾಗಿ ಸ್ಥಾಪಿಸಲಿ. ಎಂಜಿನಿಯರ್ಸ್ ದಿನಾಚರಣೆಯನ್ನು 57 ವರ್ಷಗಳಿಂದಲೂ ಆಚರಿಸಿಕೊಂಡು ಬರುತ್ತಿದ್ದೇವೆ.

ಈ ಸಂದರ್ಭದಲ್ಲಿ ಅವರ ಸಾಧನೆಗಳ ಬೆಂಚ್ ಮಾರ್ಕ್‌ನ್ನು ಕ್ರಾಸ್ ಮಾಡುವ ಮಟ್ಟಕ್ಕೆ ಯಾವೊಬ್ಬ ಎಂಜಿನಿಯರ್ ಬೆಳೆದಿಲ್ಲವೆಂದು ಸಾರ್ವಜನಿಕರ ಅಭಿಪ್ರಾಯ, ಸಾರ್ವಜನಿಕರ ತಪ್ಪು ತಿಳುವಳಿಕೆ ಇದು, ಬುದ್ದಿ ಶಕ್ತಿಯಲ್ಲಿ ಅವರನ್ನೂ ಮೀರಿಸುವ ಎಂಜಿನಿಯರ್‌ಗಳ ದಂಡೇ ನಮ್ಮಲ್ಲಿ ಇದೆ. ಆದರೆ ವ್ಯವಸ್ಥೆ ಹಿಂದಿನಂತೆ ಇಲ್ಲ, ಇಂದು ಬುದ್ದಿವಂತರಿಗಿಂತ ಭ್ರಷ್ಟರಿಗೆ ಅವಕಾಶಗಳು ಹುಡುಕಿಕೊಂಡು ಬರುತ್ತವೆ, ಆದ ಕಾರಣ ಬುದ್ದಿವಂತರು ಸಾರ್ವಜನಿಕವಾಗಿ ಬೆಳೆಯಲು ವ್ಯವಸ್ಥೆ ಸಹಕರಿಸುವುದಿಲ್ಲ, ಹೌದಲ್ಲವೇ?

**– ಡಾ. ಶ್ರೀಧರ ಹೆಚ್**
ಮುಖ್ಯಸ್ಥರು, ಇತಿಹಾಸ ವಿಭಾಗ



# ವಿಜಯನಗರ ಸಾಮ್ರಾಜ್ಯ

**ಸಂಗಮ ವಂಶ**

1. 1ನೇ ಹರಿಹರ – 1336 – 1356
2. 1ನೇ ಬುಕ್ಕ – 1356 – 1377
3. 2ನೇ ಹರಿಹರ – 1377 – 1404
4. 1 ನೇ ವಿರೂಪಾಕ್ಷ – 1404 – 1405
5. 2ನೇ ಬುಕ್ಕ – 1405 – 1406
6. 1ನೇ ದೇವರಾಯ – 1406 – 1422
7. ರಾಮಚಂದ್ರ – 1422 – 1422
8. ವೀರ ವಿಜಯ – 1422 – 1424
9. 2ನೇ ದೇವರಾಯ (ಪ್ರೌಢ ದೇವರಾಯ) – 1424 – 1446
10. ಮಲ್ಲಿಕಾರ್ಜುನ – 1466 – 1465
11. 2ನೇ ವಿರೂಪಾಕ್ಷ – 1465 1485
12. ಪ್ರೌಢದೇವರಾಯ – 1485

**ಸಾಳ್ವ ವಂಶ**

13. ಸಾಳುವ ನರಸಿಂಹ – 1485 – 1491
14. ತಿಮ್ಮಭೂಪ – 1491
15. 2ನೇ ನರಸಿಂಹ – 1491 – 1503

**ತುಳುವ ವಂಶ**

16. ವೀರ ನರಸಿಂಹ – 1503 – 1505
17. 2ನೇ ನರಸಿಂಹ – 1050 – 1509
18. ಕೃಷ್ಣದೇವರಾಯ – 1509 – 1529
19. ಅಚ್ಚುತ ರಾಯ – 1529 – 1542
20. 1ನೇ ವೆಂಕಟರಾಯ – 1542–1543
21. ಸದಾಶಿವರಾಯ – 1543 – 1570

**ಸಂಗಮ ವಂಶ**

1. ತಿರುಮಲರಾಯ
2. 1ನೇ ವೆಂಕಟರಾಯ
3. ಶ್ರೀರಂಗರಾಯ
4. 2ನೇ ವೆಂಕಟಾದ್ರಿ
5. 2ನೇ ಶ್ರೀರಂಗ
6. ರಾಮದೇವ (ಮಂತ್ರಿ ಎಚ್ಚಮ ನಾಯಕ)
7. 3ನೇ ವೆಂಕಟರಾಯ
8. 3ನೇ ರಂಗರಾಯ (ಸಾಮ್ರಾಜ್ಯ ರಹಿತ)

**ವಿಜಯನಗರಕ್ಕೆ ಭೇಟಿ ನೀಡಿದ ಪ್ರವಾಸಿಗರ ಪಟ್ಟಿ**

9. ನಿಕಲೋ ಕೊಂಟಿ–ಇಟಲಿ ದೇಶ 1420 ರಲ್ಲಿ 1ನೇ ದೇವರಾಯನ ಕಾಲದಲ್ಲಿ ಭೇಟಿ ನೀಡಿದ
10. ಅಬ್ದುಲ್ ರಜಾಕ್–ಪರ್ಶಿಯಾ ದೇಶ 1443 ರಲ್ಲಿ 2ನೇ ದೇವರಾಯ ಅರಸನ ಕಾಲದಲ್ಲಿ ಭೇಟಿಯಾದ
11. ನಿಕೆಟಿನ್–ರಷ್ಯಾದ ಪ್ರವಾಸಿ 1470 ರಲ್ಲಿ ವಿರೂಪಾಕ್ಷ ಅರಸನ ಕಾಲದಲ್ಲಿ ಭೇಟಿ ನೀಡಿದ
12. ಬಾರ್ಬೋಸ–ಪೋರ್ಚುಗಲ್ ದೇಶದಿಂದ 1514 – 1516ರಲ್ಲಿ ಕೃಷ್ಣದೇವರಾಯನ ಕಾಲದಲ್ಲಿ ಭೇಟಿ ನೀಡಿದ
13. ಡೋಮಿಂಗೋ ಪಯಸ್–ಪೋರ್ಚುಗಲ್ ದೇಶದಿಂದ 1520 ರಲ್ಲಿ ಕೃಷ್ಣದೇವರಾಯನ ಕಾಲದಲ್ಲಿ ಭೇಟಿ ನೀಡಿದ
14. ನ್ಯೂನಿಜ್–ಪೋರ್ಚುಗಲ್ ದೇಶದಿಂದ 1535ರಲ್ಲಿ ಅಚ್ಯುತ ರಾಯನ ಕಾಲದಲ್ಲಿ ಭೇಟಿಯಾದ

**ವಿಜಯನಗರ ಸಾಮ್ರಾಜ್ಯದ ಹುಟ್ಟಿಗೆ ಕಾರಣವಾದ ಅಂಶ**

15. ದೆಹಲಿಯ ಸುಲ್ತಾನ ಅಲ್ಲಾವುದ್ದೀನ್ ಖಿಲ್ಜಿ ದಕ್ಷಿಣ ಭಾರತದ ರಾಜಕೀಯ ಸಮತೋಲನಕ್ಕೆ ಭಂಗವುಂಟುಮಾಡಿದ್ದು.
16. ಕ್ರಿ.ಶ. 1296 ದೆಹಲಿಯ ಸುಲ್ತಾನನಾಗಿ ಅಧಿಕಾರ ವಹಿಸಿಕೊಂಡ ಮಹಮ್ಮದ್ ಬಿನ್ ತುಘಲಕ್ ದಕ್ಷಿಣ ಭಾರತವನ್ನು ನೇರ ಆಳ್ವಿಕೆಗೆ ಒಳಪಡಿಸಿದ್ದು
17. ಸ್ಥಿರವಾದ ಆಡಳಿತ ಕೊಡುವಲ್ಲಿ ತುಘಲಕ್ ವಿಫಲವಾಗಿದ್ದು.
18. ದಕ್ಷಿಣ ಭಾರತದ ಜನತೆಯಲ್ಲಿ ಅಭದ್ರತೆ ವಾತಾವರಣ ಉಂಟಾಗಿದ್ದು.

**ರಾಜಕೀಯ ಇತಿಹಾಸ**

**ವಿಜಯ ನಗರವನ್ನಾಳಿದ ವಂಶಗಳು**

1. ಸಂಗಮ ವಂಶ 1336 – 1485 – ರಾಜಧಾನಿ ಹಂಪಿ
2. ಸಾಳುವ ವಂಶ 1485 – 1505 ರಾಜಧಾನಿ ಹಂಪಿ
3. ತುಳುವ ವಂಶ 1505 – 1570 ರಾಜಧಾನಿ ಹಂಪಿ, ಪೆನುಗೊಂಡ
4. ಅರವೀಡು ವಂಶ 1570 – 1646 – ರಾಜಧಾನಿ ಪೆನುಗೊಂಡ, ವೆಲ್ಲೂರು ಹಾಗೂ ಚಂದ್ರಗಿರಿ
5. ವಿಜಯನಗರ ಸಾಮ್ರಾಜ್ಯಕ್ಕೆ ತಳಹದಿಯನ್ನು ಹಾಕಿದವರು – ಸಂಗಮನ ಮಕ್ಕಳಾದ – ಹರಿಹರ ಮತ್ತು ಬುಕ್ಕರು
6. ವಿಜಯನಗರ ಸಾಮ್ರಾಜ್ಯ ಅಸ್ಥಿತ್ವಕ್ಕೆ ಬಂದಿದ್ದು – ಕ್ರಿ.ಶ. 1336

**ಪು.ತಿ.ನೋ.**




7. ಬಹಮನಿ ಸಾಮ್ರಾಜ್ಯ ಅಸ್ಥಿತ್ವಕ್ಕೆ ಬಂದಿದ್ದು – ಕ್ರಿ.ಶ – 1347ರಲ್ಲಿ
8. ವಿಜಯನಗರ ಅರಸರುಗಳಲ್ಲಿ ಅತ್ಯಂತ ಸಮರ್ಥನಾದ ಅರಸ – ಕೃಷ್ಣದೇವರಾಯ.
9. ಕೃಷ್ಣದೇವರಾಯನ ನಿಷ್ಠಾವಂತ ಪ್ರಧಾನಿ – ತಿಮ್ಮರಸ
10. "ಯವನ ರಾಜ್ಯ ಪ್ರತಿಷ್ಠಾನಾಚಾರ್ಯ" ಎಂಬ ಬಿರುದನ್ನು ಕೃಷ್ಣದೇವರಾಯ ಪಡೆದನು.
11. ಕೃಷ್ಣದೇವರಾಯನ ವಿರುದ್ಧ ಜಿಹಾದ್ ಯುದ್ಧವನ್ನು ಸಾರಿದವನು – ಬೀದರ್‌ನ ಬಹಮನಿ ಸುಲ್ತಾನ ಮಹಮ್ಮದ್‌ಷಾ ಹಾಗೂ ಬಿಜಾಪುರದ ಸುಲ್ತಾನನಾದ ಯೂಸುಫ್ ಆದಿಲ್‌ಷಾ
12. ಈ ಧರ್ಮಯುದ್ಧ ನಡೆದ ಪ್ರದೇಶ – ಕೋವಿಲ್ ಕೊಂಡ
13. ವಿಜಯನಗರ ಕೃಷ್ಣದೇವರಾಯನ ವಿರುದ್ಧ ಹೋರಾಡಿದ ಉಮ್ಮತ್ತೂರಿನ ಪಾಳೆಗಾರ – ಗಂಗರಾಜ
14. ಗಂಗರಾಜನಿಂದ ವಶಪಡಿಸಿಕೊಂಡ ಪ್ರದೇಶ – ಶ್ರೀರಂಗಪಟ್ಟಣ ಹಾಗೂ ಶಿವನ ಸಮುದ್ರ
15. ಕೃಷ್ಣದೇವರಾಯನನ್ನ ಎದುರಿಸಿದ ಒರಿಸ್ಸಾದ ದೊರೆ – ಪ್ರತಾಪರುದ್ರ
16. ಪೋರ್ಚುಗೀಸರೊಡನೆ ಉತ್ತಮವಾಗಿ ಸಂಬಂಧ ಹೊಂದಿದ್ದ ವಿಜಯನಗರದ ದೊರೆ – ಕೃಷ್ಣದೇವರಾಯ
17. ಕೃಷ್ಣದೇವರಾಯ ಸಾವನ್ನು ಕಂಡುಕೊಂಡಿದ್ದು – ಕ್ರಿ.ಶ. 1529ರಲ್ಲಿ
18. ತುಂಗಭದ್ರೆ ನದಿಗೆ ಅಡ್ಡಲಾಗಿ ಅಣೆಕಟ್ಟನ್ನು ನಿರ್ಮಿಸಿದ ವಿಜಯನಗರ ಅರಸ – ಕೃಷ್ಣದೇವರಾಯ
19. ಕೃಷ್ಣದೇವರಾಯ ತೋಡಿಸಿದ ಕಾಲುವೆ – ಕೊಡಗಲ್ ಹಾಗೂ ಬಸವಣ್ಣ ಕಾಲುವೆ
20. ಅಮುಕ್ತ ಮೌಲ್ಯದ ಕೃತಿಯ ಕರ್ತೃ – ಕೃಷ್ಣದೇವರಾಯ
21. ಅಮುಕ್ತ ಮೌಲ್ಯದ ಕೃತಿಯು – ತೆಲುಗು ಭಾಷೆಯಲ್ಲಿದೆ
22. ಅಮುಕ್ತ ಮೌಲ್ಯದ ಇನ್ನೊಂದು ಹೆಸರು – ವಿಷ್ಣುಚಿತ್ತಿಯಮು
23. ಕೃಷ್ಣದೇವರಾಯನ ಆಸ್ಥಾನದಲ್ಲಿದ್ದ ಕವಿಗಳಿಗೆ – ಅಷ್ಟದಿಗ್ಗಜರು ಎಂದು ಕರೆಯವರು.
24. ಮನುಚರಿತಮು ಕೃತಿಯ ಕರ್ತೃ – ಅಲ್ಲಾಸಾನಿ ಪೆದ್ದಣ
25. ಆಂದ್ರಕವಿತಾ ಪಿತಾಮಹಾ – ಎಂಬ ಬಿರುದನ್ನು ಹೊಂದಿದ್ದ ಕವಿ – ಅಲ್ಲಾಸಾನಿ ಪೆದ್ದಣ
26. ನಂದಿ ತಿಮ್ಮಣ್ಣನ ಕೃತಿ – ಪಾರಿಜಾತಹರಣಮು
27. ಕೃಷ್ಣದೇವರಾಯ ಕಟ್ಟಿಸಿದ ದೇವಾಲಯ – ಹಜಾರ ರಾಮಸ್ವಾಮಿ ಹಾಗೂ ವಿಠಲ ಸ್ವಾಮಿ ದೇವಾಲಯ
28. ಮಹಾನವಮಿ ದಿಬ್ಬ ಅಥವಾ ಸಿಂಹಾಸನ ವೇದಿಕೆ ಅಥವಾ ವಿಜಯಾಲಯ ನಿರ್ಮಿಸಿದವರು – ಕೃಷ್ಣದೇವರಾಯ
29. ತನ್ನ ತಾಯಿ ನಾಗಲಾದೇವಿಯ ಸ್ಮರಣಾರ್ಥವಾಗಿ ನಿರ್ಮಿಸಿದ ನಗರ – ನಾಗಲಾಪುರ
30. ಕೃಷ್ಣದೇವರಾಯ ನಂತರ ಅಧಿಕಾರಕ್ಕೆ ಬಂದವರು – ಅಚ್ಯುತರಾಯ
31. ಅಚ್ಯುತನ ವಿರೋಧಿ – ಅಳಿಯ ರಾಮರಾಯ

**ಅಳಿಯ ರಾಮರಾಯ**

32. ಈತನ ಮಂತ್ರಿ – ತಿರುಮಲ
33. ಈತನ ಸೇನಾಧಿಕಾರಿ – ವೆಂಕಟಾದ್ರಿ
34. ತಾಳಿಕೋಟೆ ಯುದ್ಧ ಗತಿಸಿದ ವರ್ಷ–ಕ್ರಿ.ಶ 1565 ರಲ್ಲಿ
35. ಯುದ್ಧ ನಡೆದಿದ್ದು – ಷಾಹಿ ಮನೆತನ ಹಾಗೂ ವಿಜಯನಗರದ ನಡುವೆ.
36. ತಾಳಿಕೋಟೆ ಯುದ್ಧದಲ್ಲಿ ವಿಜಯ ನಗರದ ಮನೆತನ ಸೋಲಲು ಪ್ರಮುಖ ಕಾರಣ – ಸೈನಿಕ ಕಾರಣ

**– ಎಂ.ಕೆ. ಸ್ಪಂದನ**
ಅಂತಿಮ ಬಿ.ಎ.



*Western Chalukya inscription from Chinna-Kottapalli, Andhra Pradesh*

This inscription is engraved on a stone found outside the village Chinna Kottapalli, Nandyal district, A.P.

It is written in Kannada language and characters of 11th century C.E., dated in ba.5, Adityavara.

Damaged. Seems to record some gift of lands in village, probably for providing the services to the god Vittesvara by Vittarasa along with his wife,when he was administering at Ammakunta. Further it mentions the signatories viz., Krishna, Sankappayya and Somayya.

In the imprecatory verses… *who ever may damage this inscription they will kill thousand cows in Kurukshetra.*

Courtesy: Ms. Rajitha, Assistant Director, A.P.State Archaeology and Museums,Tirupati. *Director (Epigraphy), Archaeological Survey of India*



## ಬಾಲ್ ಗಂಗಾಧರ ತಿಲಕರ ಗಣೇಶೋತ್ಸವ: ಧಾರ್ಮಿಕತೆಯಿಂದ ರಾಷ್ಟ್ರೀಯತೆಯವರೆಗೆ ಗಣೇಶೋತ್ಸವವನ್ನು ಒಂದು ರಾಷ್ಟ್ರೀಯ ಆಂದೋಲನದ ಸಂಕೇತವಾಗಿ ಪರಿವರ್ತಿಸಿದರು.

19ನೇ ಶತಮಾನದ ಕೊನೆ. ದೇಶ ಕತ್ತಲಿನಿಂದ ಆವರಿಸಿದ್ದ ಕಾಲ. 1857ರ ಪ್ರಥಮ ಸ್ವಾತಂತ್ರ್ಯ ಸಂಗ್ರಾಮವನ್ನು ಕುಂಠಿತಗೊಳಿಸಿ, ಭಾರತೀಯರಲ್ಲಿ ಕ್ರಾಂತಿಯ ಜ್ವಾಲೆ ಮತ್ತೆ ಹೊತ್ತದಂತೆ ನೋಡಿಕೊಳ್ಳಬೇಕು ಎಂಬಂತೆ ಕಟ್ಟುನಿಟ್ಟಿನ ಆಡಳಿತ ಆರಂಭಿಸಿದ್ದರು. ಸಾರ್ವಜನಿಕ ಸಭೆ, ಹೋರಾಟ, ಮರವಣಿಗೆಗಳೆಲ್ಲ ನಿಷಿದ್ಧವಾಗಿತ್ತು. ಜನರು ದೇವರ ಮುಂದೆ ಶಾಂತವಾಗಿ ಪೂಜೆ ಮಾಡುವುದೇ ಅವರಿಗಿದ್ದ ಸ್ವಾತಂತ್ರ್ಯ. ಈ ಕತ್ತಲೆಯಲ್ಲೇ ದೀಪದಂತೆ ಉದಯಿಸಿದವರು ಬಾಲಗಂಗಾಧರ ತಿಲಕರು.

ಧರ್ಮವನ್ನು ಶಸ್ತ್ರವಾಗಿಸಿದ ಚಾತುರ್ಯ ತಿಲಕರದ್ದು. ಜನರಲ್ಲಿ ರಾಜಕೀಯ ಜಾಗೃತಿ ಮೂಡಿಸಲು ಪಾಶ್ಚಾತ್ಯ ಶಿಕ್ಷಣ ಪಡೆದ ಕೆಲ ಬುದ್ಧಿಜೀವಿಗಳು ಮಾತ್ರ ಸಾಕಾಗುವುದಿಲ್ಲ. ಸಾಮಾನ್ಯ ಜನರ ಮನಸ್ಸು ಹತ್ತಿರಕ್ಕೆ ಬರಬೇಕು ಎಂಬುದನ್ನು ತಿಲಕರು ಚೆನ್ನಾಗಿ ಅರಿತಿದ್ದರು. ಜನರ ನಿತ್ಯಜೀವನದಲ್ಲಿ ಎಲ್ಲಿ ಹೆಚ್ಚು ಒಗ್ಗಟ್ಟಿದೆ ಎಂಬುದನ್ನರಿತ ಅವರು ಹಬ್ಬ ಹರಿದಿನಗಳಲ್ಲಿ ಜನರನ್ನು ಒಗ್ಗೂಡಿಸಬಹುದೆಂಬುದನ್ನು ಮನಗಂಡರು. ಗಣೇಶನು ವಿದ್ಯೆ, ಬುದ್ಧಿ, ಐಕ್ಯತೆ, ಅಡೆತಡೆ ನಿವಾರಣೆಯ ಸಂಕೇತ. ಯಾವ ಕಾರ್ಯಕ್ಕೂ ಮುನ್ನ ಅವನನ್ನು ಪೂಜಿಸುವುದು ಭಾರತೀಯ ಪರಂಪರೆ. ಈ ಪರಂಪರೆಯನ್ನೇ ತಿಲಕರು ರಾಷ್ಟ್ರಭಕ್ತಿಯ ಯಜ್ಞಕೂಟವನ್ನಾಗಿ ಪರಿವರ್ತಿಸಿದರು.

ತಿಲಕರು ಆರಂಭಿಸಿದ ಸಾರ್ವಜನಿಕ ಗಣೇಶೋತ್ಸವವು ಧಾರ್ಮಿಕ ಆಚರಣೆಗಿಂತ ಹೆಚ್ಚಾಗಿ, ಸ್ವಾತಂತ್ರ್ಯ ಹೋರಾಟದ ಒಂದು ಮಹತ್ವದ ಅಸ್ತ್ರವಾಗಿತ್ತು. ಇದು ಬ್ರಿಟಿಷ್ ಸರ್ಕಾರದ ವಿರುದ್ಧ ಜನರನ್ನು ಸಂಘಟಿಸಲು ಮತ್ತು ಅವರಲ್ಲಿ ರಾಷ್ಟ್ರೀಯ ಭಾವನೆಯನ್ನು ಜಾಗೃತಗೊಳಿಸಲು ವೇದಿಕೆಯಾಗಿ ಕಾರ್ಯನಿರ್ವಹಿಸಿತು. 19ನೇ ಶತಮಾನದ ಕೊನೆಯ ಭಾಗದಲ್ಲಿ ಬ್ರಿಟಿಷ್ ಆಡಳಿತವು ಭಾರತೀಯರ ಮೇಲೆ ದಬ್ಬಾಳಿಕೆ ನಡೆಸುತ್ತಿತ್ತು. ಸಾರ್ವಜನಿಕ ಸಭೆಗಳು, ಸಮಾವೇಶಗಳು ಮತ್ತು ರಾಜಕೀಯ ಚಟುವಟಿಕೆಗಳು ನಿರ್ಬಂಧಕ್ಕೊಳಗಾಗಿದ್ದವು. ಬ್ರಿಟಿಷ್ ಸರ್ಕಾರವು 'ದಿ ಆರ್ಮ್ಸ್ ಆಕ್ಟ್' ಮತ್ತು 'ದಿ ಪ್ರೆಸ್ ಆಕ್ಟ್' ನಂತಹ ಕಾನೂನುಗಳನ್ನು ಜಾರಿಗೊಳಿಸಿ, ಭಾರತೀಯರ ಪ್ರತಿಭಟನಾ ಹಕ್ಕುಗಳನ್ನು ಹತ್ತಿಕ್ಕಲು ಪ್ರಯತ್ನಿಸುತ್ತಿತ್ತು. ಈ ಸಂದರ್ಭದಲ್ಲಿ, ಜನರನ್ನು ಒಂದುಗೂಡಿಸುವುದು ಮತ್ತು ಅವರಲ್ಲಿ ರಾಷ್ಟ್ರೀಯತೆ ಹಾಗೂ ಸ್ವಾತಂತ್ರ್ಯದ ಪ್ರಜ್ಞೆಯನ್ನು ಮೂಡಿಸುವುದು ಒಂದು ದೊಡ್ಡ ಸವಾಲಾಗಿತ್ತು. ಇದನ್ನು ಮನಗಂಡ ತಿಲಕರು, ಧಾರ್ಮಿಕ ಆಚರಣೆಗಳನ್ನು ರಾಜಕೀಯ ಮತ್ತು ಸಾಮಾಜಿಕ ಚಳುವಳಿಗೆ ಬಳಸಿಕೊಳ್ಳುವ ಅನನ್ಯ ಉಪಾಯ ಕಂಡುಕೊಂಡರು.

ಅಂದಿನ ಸಮಾಜವು ಜಾತಿ ಮತ್ತು ಧರ್ಮದ ಆಧಾರದ ಮೇಲೆ ವಿಭಜನೆಗೊಂಡಿತ್ತು. ಬ್ರಿಟಿಷರು ಅನುಸರಿಸುತ್ತಿದ್ದ ಒಡೆದು ಆಳುವ ನೀತಿಯಿಂದಾಗಿ ಹಿಂದೂ ಮತ್ತು ಮುಸ್ಲಿಮರ ನಡುವೆ ಸಂಘರ್ಷದ ಬದುಕು ಹೆಚ್ಚಾಗಿತ್ತು. ಈ ಹಿನ್ನೆಲೆಯಲ್ಲಿ, ತಿಲಕರು ಧಾರ್ಮಿಕ ಆಚರಣೆಗಳನ್ನು ಬಳಸಿಕೊಂಡು ಎಲ್ಲಾ ವರ್ಗದ ಜನರನ್ನು ಒಂದುಗೂಡಿಸಲು ಪ್ರಯತ್ನಿಸಿದರು. ಇದರ ಭಾಗವಾಗಿ, ಅವರು 1893ರಲ್ಲಿ ಸಾರ್ವಜನಿಕ ಗಣೇಶೋತ್ಸವ ಮತ್ತು 1895ರಲ್ಲಿ ಶಿವಾಜಿ ಜಯಂತಿಯನ್ನು ಆಚರಿಸಲು ಪ್ರಾರಂಭಿಸಿದರು. 1893ರಲ್ಲಿ ಪುಣೆಯ ಮಾರುಕಟ್ಟೆ ಪ್ರದೇಶದಲ್ಲಿ ಮೊದಲ ಬಾರಿಗೆ ಗಣಪತಿ ಪ್ರತಿಮೆಯನ್ನು ಪ್ರತಿಷ್ಠಾಪಿಸಿ, "ಇದು ಮನೆಮನೆಗೆ ಸೀಮಿತವಾಗಿರಬಾರದು. ಜನಸಮುದಾಯದ ಹಬ್ಬವಾಗಬೇಕು" ಎಂದು ಘೋಷಿಸಿದರು. ಅನೇಕರು ದೀಪಕಳಶಗಳನ್ನು ಹಿಡಿದು ಬೀದಿಗಳಲ್ಲಿ ಸಾಗುತ್ತಿದ್ದರು. ಮಂಗಳವಾದ್ಯಗಳ ನಡುವೆ 'ವಂದೇ ಮಾತರಂ' ಘೋಷಣೆ ಮೊಳಗುತ್ತಿತ್ತು. ಗಣಪತಿಯ ಮುಂದೆ ಹೋಮ, ಪೂಜೆ, ಭಜನೆ ನಡೆಯುತ್ತಿದ್ದರೂ, ಅದರ ಅಂತರಾಳದಲ್ಲಿ ರಾಷ್ಟ್ರೀಯ ಜಾಗೃತಿ ಗಾನ ಕೇಳಿಸುತ್ತಿತ್ತು.

ಸಾರ್ವಜನಿಕ ಗಣೇಶೋತ್ಸವದಲ್ಲಿ ಕೇವಲ ಧಾರ್ಮಿಕ ಆಚರಣೆ ಮಾತ್ರವಲ್ಲ, ದೇಶದ ಇತಿಹಾಸ, ಸ್ವಾತಂತ್ರ್ಯ ಹೋರಾಟದ ಅಗತ್ಯ, ಬ್ರಿಟಿಷರ ಶೋಷಣೆಯ ಕುರಿತು ಉಪನ್ಯಾಸಗಳು ನಡೆಯುತ್ತಿದ್ದವು. ಶಿವಾಜಿ ಮಹಾರಾಜರ ಸಾಹಸಗಳ ನಾಟಕಗಳನ್ನು ಪ್ರದರ್ಶಿಸಿ 'ಹಿಂದೂ ಹೃದಯ ಸಾಮ್ರಾಟ್'ನ ಧೈರ್ಯವನ್ನು ನೆನಪಿಸಿದರು. ದೇಶಭಕ್ತಿಯ ಕಾವ್ಯ, ಕೀರ್ತನೆ, ಹರಿಕಥೆಗಳು ನಡೆದವು. ಅಸ್ಪೃಶ್ಯರಿಗೆ ಗಣಪತಿ ದರ್ಶನದ ಅವಕಾಶ, ಮಹಿಳಾ ಶಿಕ್ಷಣದ ಚರ್ಚೆ ಮೂಲಕ ಸಾಮಾಜಿಕ ಸ್ವಾಸ್ಥ್ಯ ಸುಧಾರಣೆಗೂ ಸಾರ್ವಜನಿಕ ಗಣೇಶೋತ್ಸವ ಕಾರಣವಾಯಿತು.

ಈ ಕಾರ್ಯಕ್ರಮಗಳು ಧಾರ್ಮಿಕತೆಯ ಜೊತೆಗೆ, ಸ್ವಾತಂತ್ರ್ಯ ಹೋರಾಟದ ವಿಚಾರಗಳನ್ನು, ದೇಶಭಕ್ತಿಯ ಗೀತೆಗಳನ್ನು ಮತ್ತು ಬ್ರಿಟಿಷರ ದಬ್ಬಾಳಿಕೆಯ ವಿರುದ್ಧದ ಸಂದೇಶಗಳನ್ನು ಜನರಿಗೆ ತಲುಪಿಸುವ ಸಾಧನಗಳಾದವು. ತಿಲಕರು ಆರಂಭಿಸಿದ ಈ ಸಾರ್ವಜನಿಕ ಗಣೇಶೋತ್ಸವ ಕೇವಲ ಒಂದು ಹಬ್ಬವಾಗಿ ಉಳಿಯದೆ, ಒಂದು ಆಂದೋಲನವಾಗಿ ಮಾರ್ಪಟ್ಟಿತು. ಈ ಉತ್ಸವವು ಸಮಾಜದಲ್ಲಿ ಅನೇಕ ಮಹತ್ವದ ಬದಲಾವಣೆಗಳನ್ನು ತಂದಿತು. ಸಾರ್ವಜನಿಕ ಗಣೇಶೋತ್ಸವವು ರಾಷ್ಟ್ರೀಯ ಜಾಗೃತಿ ಮತ್ತು ಏಕತೆಗೆ ಕಾರಣವಾಯಿತು.

ಈ ಸಮಯದಲ್ಲಿ, ತಿಲಕರು ಮತ್ತು ಇತರ ನಾಯಕರು ಜನರಲ್ಲಿ ರಾಷ್ಟ್ರೀಯತೆ, ಸ್ವಾತಂತ್ರ್ಯ ಮತ್ತು ದೇಶಭಕ್ತಿಯ ಕುರಿತು ಭಾಷಣಗಳನ್ನು ಮಾಡಿದರು. ಬ್ರಿಟಿಷ್ ಆಡಳಿತದ ದೌರ್ಜನ್ಯಗಳ ಬಗ್ಗೆ ಜನರಿಗೆ ಅರಿವು ಮೂಡಿಸಿದರು. ಈ ಹಬ್ಬವು ಒಂದು ರೀತಿಯ ಜಾಗೃತಿ ಹಬ್ಬವಾಗಿ ಮಾರ್ಪಟ್ಟಿತ್ತು. ಇಲ್ಲಿ ಜನರಿಗೆ ದೇಶದ ಸ್ಥಿತಿ–ಗತಿಗಳ ಬಗ್ಗೆ ಪಾಠ ಹೇಳಲಾಗುತ್ತಿತ್ತು. ಧಾರ್ಮಿಕ ಆಚರಣೆಯಾಗಿ ಮಾತ್ರವಲ್ಲದೇ ಸಾರ್ವಜನಿಕ ಗಣೇಶೋತ್ಸವ

ಪು.ತಿ.ನೋ.



ರಾಜಕೀಯ ಪ್ರತಿಭಟನೆಯ ವೇದಿಕೆಯಾಗಿತ್ತು. ಸಾರ್ವಜನಕ ಸಭೆಗಳನ್ನು ನಡೆಸಲು ಬ್ರಿಟಿಷರ ಅನುಮತಿ ಬೇಕಿತ್ತು. ಆದರೆ, ಧಾರ್ಮಿಕ ಹಬ್ಬಗಳಿಗೆ ಅಂತಹ ನಿರ್ಬಂಧಗಳು ಇರಲಿಲ್ಲ. ಇದನ್ನು ಸಮರ್ಥವಾಗಿ ಬಳಸಿಕೊಂಡು, ಗಣೇಶೋತ್ಸವದ ವೇಳೆ, ಬ್ರಿಟಿಷ್ ವಿರೋಧಿ ಘೋಷಣೆಗಳು, ದೇಶಭಕ್ತಿಯ ಗೀತೆಗಳು, ಮತ್ತು ನಾಟಕಗಳನ್ನು ಪ್ರದರ್ಶಿಸಲಾಗುತ್ತಿತ್ತು. ಇದು ಬ್ರಿಟಿಷರಿಗೆ ಕಾನೂನುಬದ್ಧವಾಗಿ ತಡೆಯಲು ಕಷ್ಟಕರವಾಗಿತ್ತು.

ಭಾರತೀಯ ಸಾಂಸ್ಕೃತಿಕ ಪುನರುಜ್ಜೀವನಕ್ಕೆ ತಿಲಕರು ಆರಂಭಿಸಿದ ಗಣೇಶೋತ್ಸವ ಕಾರಣವಾಯಿತು. ತಿಲಕರು ಗಣೇಶೋತ್ಸವದ ಮೂಲಕ ಭಾರತೀಯರ ಸಾಂಸ್ಕೃತಿಕ ಪರಂಪರೆಯ ಶ್ರೇಷ್ಠತೆಯನ್ನು ಎತ್ತಿ ಹಿಡಿದರು. ಇದು ಜನರಲ್ಲಿ ಸ್ವಾಭಿಮಾನ ಮತ್ತು ಆತ್ಮವಿಶ್ವಾಸವನ್ನು ಹೆಚ್ಚಿಸಿತು. ಈ ಉತ್ಸವವು ಬ್ರಿಟಿಷ್ ಸರ್ಕಾರದ ವಿರುದ್ಧ ಜನರಲ್ಲಿ ಕೋಪ ಮತ್ತು ಅಸಮಾಧಾನವನ್ನು ಹೆಚ್ಚಿಸುವಲ್ಲಿ ಯಶಸ್ವಿಯಾಯಿತು. ಹಬ್ಬದ ನೆಪದಲ್ಲಿ ಜಮಾಯಿಸಿದ ಜನರಿಗೆ, ಬ್ರಿಟಿಷರು ಹೇಗೆ ನಮ್ಮ ಸಂಪತ್ತನ್ನು ಲೂಟಿ ಮಾಡುತ್ತಿದ್ದಾರೆ ಮತ್ತು ನಮ್ಮ ಹಕ್ಕುಗಳನ್ನು ಕಸಿಯುತ್ತಿದ್ದಾರೆ ಎಂಬ ವಿಷಯವನ್ನು ಮನದಟ್ಟು ಮಾಡಿಕೊಡಲಾಯಿತು. ತಿಲಕರು ಈ ಉತ್ಸವವನ್ನು ಆರಂಭಿಸದೇ ಇದ್ದಿದ್ದರೆ ಭಾರತದ ಸ್ವಾತಂತ್ರ್ಯ ಹೋರಾಟಕ್ಕೆ ಒಂದು ಪ್ರಮುಖ ವೇದಿಕೆ ಸಿಗುತ್ತಿರಲಿಲ್ಲ. ಜನಸಾಮಾನ್ಯರನ್ನು ದೊಡ್ಡ ಸಂಖ್ಯೆಯಲ್ಲಿ ಒಂದೇ ಕಡೆ ಸೇರಿಸುವುದು ಕಷ್ಟವಾಗುತ್ತಿತ್ತು. ಬ್ರಿಟಿಷ್ ಸರ್ಕಾರದ ಒಡೆದು ಆಳುವ ನೀತಿ ಹೆಚ್ಚು ಯಶಸ್ವಿಯಾಗಬಹುದಿತ್ತು.

ಸಾರ್ವಜನಿಕ ಗಣೇಶೋತ್ಸವವು ಜಾತಿ, ಮತ, ಭೇದವಿಲ್ಲದೆ ಎಲ್ಲರನ್ನು ಒಂದೇ ವೇದಿಕೆಯ ಮೇಲೆ ತಂದು ನಿಲ್ಲಿಸಿತು. ಇದು ಹಿಂದೂ ಸಮಾಜದಲ್ಲಿ ಮಾತ್ರವಲ್ಲದೆ, ಇತರೆ ಸಮುದಾಯಗಳ ಜನರ ಸಹಕಾರವನ್ನೂ ಗಳಿಸಿ, ಏಕತೆ ಮತ್ತು ಸಹಬಾಳ್ವೆಯನ್ನು ಬಲಪಡಿಸಿತು. ಹಬ್ಬದ ಸಮಯದಲ್ಲಿ ನಡೆದ ಭಾಷಣಗಳು, ಹಾಡುಗಳು ಮತ್ತು ನಾಟಕಗಳ ಮೂಲಕ ಸಾಮಾನ್ಯ ಜನರಿಗೆ ಸ್ವಾತಂತ್ರ್ಯದ ಮಹತ್ವ, ಸ್ವದೇಶಿ ಚಳುವಳಿ, ಬ್ರಿಟಿಷರ ದಬ್ಬಾಳಿಕೆಯ ಬಗ್ಗೆ ಅರಿವು ಮೂಡಿತು.

ತಿಲಕರು ಕೇವಲ ಧಾರ್ಮಿಕ ಆಚರಣೆಯನ್ನು ಪುನರುಜ್ಜೀವನಗೊಳಿಸಲಿಲ್ಲ. ಬದಲಾಗಿ ಅದನ್ನು ಒಂದು ರಾಷ್ಟ್ರೀಯ ಆಂದೋಲನದ ಸಂಕೇತವಾಗಿ ಪರಿವರ್ತಿಸಿದರು. ತಿಲಕರು ಕೇವಲ ಗಣೇಶೋತ್ಸವವನ್ನೇ ಅಲ್ಲ. ಶಿವಾಜಿ ಜಯಂತಿಯನ್ನೂ ಸಾರ್ವಜನಿಕವಾಗಿ ಆಚರಿಸಿ, ರಾಷ್ಟ್ರ ಪ್ರೇಮವನ್ನು ಜನಮನಗಳಲ್ಲಿ ಹರಡಿದರು. ಧಾರ್ಮಿಕ ಭಕ್ತಿಯ ರೂಪದಲ್ಲಿ ರಾಷ್ಟ್ರಭಕ್ತಿಯ ಜ್ಯೋತಿಯನ್ನು ಹಚ್ಚಿದ ಆ ಉತ್ಸವ, ಇಂದು ಭಾರತದೆಲ್ಲೆಡೆ ಲಕ್ಷಾಂತರ ಜನರನ್ನು ಒಗ್ಗೂಡಿಸುತ್ತಿರುವುದೇ ಅದರ ಪ್ರಭಾವಕ್ಕೆ ಸಾಕ್ಷಿ. ಗಣೇಶನಿಗೆ ಅರ್ಪಿಸಲಾದ ಅರವತ್ತನಾಲ್ಕು ಅಷ್ಟೋತ್ತರಗಳು ಇದ್ದರೆ, ತಿಲಕರ ಈ ಒಂದು ಉಪಕ್ರಮವೇ ಭಾರತೀಯ ಸ್ವಾತಂತ್ರ್ಯ ಹೋರಾಟಕ್ಕೆ ಅರವತ್ತ ನಾಲ್ಕು ಜಯಶಾಲಿ ದಾರಿಗಳನ್ನು ತೆರೆಯಿತು.

**– ಪ್ರಸನ್ನ ಎಸ್**
ದ್ವಿತೀಯ ಬಿ.ಎ.

---

# ಹೀಗಿದ್ದರು ಸರ್ ಎಂ.ವಿ

**ನಾಡು ಕಂಡ ಅತಿ ಬುದ್ಧಿವಂತ ಎಂಜಿನಿಯರ್ ಸರ್ ಎಂ.ವಿಶ್ವೇಶ್ವರಯ್ಯ ಅವರ ಜನ್ಮದಿನವನ್ನು ಎಂಜಿನಿಯರ್ಸ್ ದಿನವನ್ನಾಗಿ ಆಚರಿಸಲಾಗುತ್ತಿದೆ. ನಾಡಿನ ಬಹುತೇಕ ಎಲ್ಲ ಕಡೆ ವಿಶ್ವೇಶ್ವರಯ್ಯ ಅವರನ್ನು ಸ್ಮರಿಸಿಕೊಳ್ಳಲಾಗುತ್ತಿದೆ. ಅವರ ಬದುಕು ಎಲ್ಲರಿಗೂ ಮಾದರಿ. ಅವರ ಸರಳ ಜೀವನ, ಪ್ರಾಮಾಣಿಕತೆ ಎಂದೆಂದಿಗೂ ಪ್ರಸ್ತುತ.**

## ಭಾರತ ರತ್ನ ಸರ್. ಎಂ. ವಿಶ್ವೇಶ್ವರಯ್ಯ



ಸರ್ ಎಂ.ವಿಶ್ವೇಶ್ವರಯ್ಯ ಅವರು ತಮ್ಮ ಅಪಾರ ಬುದ್ಧಿಮತ್ತೆ ಜನೋಪಕಾರಿ ಕೆಲಸಗಳ ಮೂಲಕ ಚಿರಸ್ಥಾಯಿಯಾಗಿ ಉಳಿದಿದ್ದಾರೆ. ಸೆಪ್ಟೆಂಬರ್ 15ರಂದು ಎಂಜಿನಿಯರ್ಸ್ ದಿನವಾಗಿ ಆಚರಿಸಲಾಗುತ್ತದೆ. ಚಿಕ್ಕಬಳ್ಳಾಪುರ ಜಿಲ್ಲೆಯ ಮುದ್ದೇನಹಳ್ಳಿಯಲ್ಲಿ ಜನಿಸಿದರು. ಬೆಂಗಳೂರಿನಲ್ಲಿ ವಿದ್ಯಾಭ್ಯಾಸ ಮಾಡಿದ ವಿಶ್ವೇಶ್ವರಯ್ಯನವರು ನಂತರ ಮುಂಬೈನ ಪುಣೆಯಲ್ಲಿ 1884ರಲ್ಲಿ ಎಂಜಿನಿಯರಿಂಗ್ ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ಮುಂಬೈ ಸರ್ಕಾರದಲ್ಲಿ ಸೇವೆಯನ್ನು ಆರಂಭಿಸಿದರು.

**ಬೇರೆ ದೇಶಗಳಲ್ಲಿಯೂ ಯೋಜನೆ...**

ಮುಂಬೈನಲ್ಲಿ ಸೇವೆ ಸಲ್ಲಿಸುತ್ತಿರುವಾಗಲೇ ಇಟಲಿ ದೇಶದ ಮಿಲಾನ್ ಮತ್ತು ಈಡನ್ ನಗರಗಳಿಗೆ ಭೇಟಿ ನೀಡಿ ಆ ನಗರಗಳ ನೀರು ಸರಬರಾಜು ಮತ್ತು ಒಳಚರಂಡಿ ವ್ಯವಸ್ಥೆಗಳ ಯೋಜನೆಯನ್ನು ರೂಪಿಸಿದ್ದರು. ನಂತರ ಪುಣೆ, ಕೊಲ್ಹಾಪುರ, ಸೊಲಾಪುರ, ವಿಜಾಪುರ, ಮತ್ತು ಧಾರವಾಡ ಈ ನಗರಗಳಿಗೆ ನೀರಿನ ವ್ಯವಸ್ಥೆಯನ್ನು ವಿನ್ಯಾಸಗೊಳಿಸುವಲ್ಲಿ ಪ್ರಮುಖ ಪಾತ್ರವಹಿಸಿದ್ದರು.

ಭದ್ರಾವತಿಯ ಉಕ್ಕಿನ ಕಾರ್ಖಾನೆ. ಜೋಗದ ಶರಾವತಿ ವಿದ್ಯುತ್ ಯೋಜನೆ, ಮೈಸೂರು ಸ್ಯಾಂಡಲ್ ಸಾಬೂನು ಕಾರ್ಖಾನೆ, ಮೈಸೂರು ಬ್ಯಾಂಕ್, ಮೈಸೂರು ವಿಶ್ವವಿದ್ಯಾನಿಲಯ ಸ್ಥಾಪನೆ, ಕನ್ನಡ ಸಾಹಿತ್ಯ ಸ್ಥಾಪನೆ.. ಹೀಗೆ ಮಹತ್ವದ ಕೊಡುಗೆಗಳನ್ನು ನೀಡಿ ಜನರ ಮನಸ್ಸಿನಲ್ಲಿ ಅಚ್ಚಳಿಯದೇ ಉಳಿದಿದ್ದಾರೆ. ಜನರು ಇಂದಿಗೂ ಅವರನ್ನು ಸ್ಮರಿಸಿಕೊಳ್ಳುತ್ತಾರೆ...

**ಅವರು ಹೀಗಿದ್ದರು.. ಬಂಧುಗಳಿಗೆ ತಾಕೀತು...**

1912ರಲ್ಲಿ ಅವರನ್ನು ಮೈಸೂರು ಮಹಾರಾಜರು ತಮ್ಮ ದಿವಾನರನ್ನಾಗಿ ನೇಮಿಸಿಕೊಳ್ಳುತ್ತಾರೆ. ಅಂದೇ ತಮ್ಮ ಬಂಧುಗಳಿಗೆ, ಇನ್ನು ಮುಂದೆ ಇಂತಹ ಕೆಲಸ ಮಾಡಿಕೊಡು ಎಂದು ಯಾರೂ ಕೇಳಬಾರದು. ಅಧಿಕಾರವನ್ನು ನಾನು ಯಾವತ್ತೂ ದುರುಪಯೋಗಪಡಿಸಿಕೊಂಡವನಲ್ಲ. ಹಾಗಾಗಿ ಈ ಹುದ್ದೆಯಿಂದ ಕೆಳಗೆ ಇಳಿಯುವವರೆಗೆ ನೀವು ಏನನ್ನೂ ಕೇಳಬಾರದು ಎಂದು ತಾಕೀತು ಮಾಡಿದ್ದರು.

**– ಯಶವಂತ್ ವಿ**
ಪ್ರಥಮ ಬಿ.ಎ.



## ಇತಿಹಾಸ ವಿಭಾಗ ಹಾಗೂ ಐಕ್ಯೂಎಸಿ

**ಉಪನ್ಯಾಸ ಮತ್ತು ಸಂವಾದ ಕಾರ್ಯಕ್ರಮ: ಸ್ವಾತಂತ್ರ್ಯ ಚಳುವಳಿ ಮತ್ತು ನೇತಾಜಿ**

ಸಂಪನ್ಮೂಲ ವ್ಯಕ್ತಿ: **ಡಾ. ವಿ.ಎಂ. ರಮೇಶ,** ಸಹಪ್ರಾಧ್ಯಾಪಕರು, ಇತಿಹಾಸ ಅಧ್ಯಯನ ಹಾಗೂ ಸಂಶೋಧನಾ ವಿಭಾಗ, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಮೈಸೂರು – **03-09-2025**















# ಕನ್ನಡಪ್ರಭ

# ಗಾಂಧೀ ವಿಚಾರಧಾರೆಯಿಂದ ನಮಗೆ ಸ್ವಾತಂತ್ರ್ಯ ಲಭಿಸಿತು

## ಕರ್ನಾಟಕ ರಾಜ್ಯ ಮುಕ್ತ ವಿವಿ ಇತಿಹಾಸ ಅಧ್ಯಯನ ಸಂಶೋಧನಾ ಪ್ರಾಧ್ಯಾಪಕ ಡಾ.ವಿ.ಎಂ. ರಮೇಶ್



• **ಕನ್ನಡಪ್ರಭ ವಾರ್ತೆ** ಮೈಸೂರು

ಗಾಂಧಿಜೀಯ ವಿಚಾರಧಾರೆ ಮತ್ತು ತತ್ವಗಳ ಪ್ರತಿಪಾದನೆಯಿಂದ ವೈಯಕ್ತಿಕ ಹಾಗೂ ದೇಶೀಯ ಸ್ವರಾಜ್ಯದ ಪರಿಕಲ್ಪನೆಯಲ್ಲಿ ಭಾರತವು ಸ್ವತಂತ್ರ್ಯ ರಾಷ್ಟ್ರವಾಯಿತು ಎಂದು ಕರ್ನಾಟಕ ರಾಜ್ಯ ಮುಕ್ತ ವಿವಿ ಇತಿಹಾಸ ಅಧ್ಯಯನ ಮತ್ತು ಸಂಶೋಧನಾ ವಿಭಾಗದ ಸಹ ಪ್ರಾಧ್ಯಾಪಕ ಡಾ.ವಿ.ಎಂ. ರಮೇಶ್ ಹೇಳಿದರು.

ನಗರದ ಮಹಾಜನ ಪ್ರಥಮ ದರ್ಜೆ ಕಾಲೇಜಿನ ಇತಿಹಾಸ ವಿಭಾಗ ಮತ್ತು ಐಕ್ಯೂಎಸಿ ಸಹಯೋಗದಲ್ಲಿ ಭಾರತದ ಸ್ವಾತಂತ್ರ್ಯ ಚಳುವಳಿ ಮತ್ತು ನೇತಾಜಿ ವಿಷಯ ಕುರಿತ ಉಪನ್ಯಾಸ ಹಾಗೂ ಸಂವಾದ ಕಾರ್ಯಕ್ರಮದಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಅವರು ಮಾತನಾಡಿದರು.

ಭಾರತದ ಸ್ವಾತಂತ್ರ್ಯವು 20ನೇ ಶತಮಾನದ ಸುವರ್ಣ ಕಾಲಘಟ್ಟವಾಗಿದ್ದು, ಸುಮಾರು 200 ವರ್ಷಗಳ ಬ್ರಿಟಿಷರ ವಿರುದ್ಧದ ಹೋರಾಟದಲ್ಲಿ ಭಾರತೀಯರು ಕಂಡ ಸ್ವಾತಂತ್ರ್ಯದ ಕನಸು ಅಂದು ನನಸಾಗಿತ್ತು. ಕ್ರಿ.ಶ. 1ನೇ ಶತಮಾನದಿಂದ 17ನೇ ಶತಮಾನದವರೆಗೆ ಭಾರತವು ಆರ್ಥಿಕವಾಗಿ ಇಡೀ ವಿಶ್ವದಲ್ಲೇ ಅತ್ಯಂತ ಪ್ರಬಲ ರಾಷ್ಟ್ರವಾಗಿತ್ತು. ಭಾರತದ ಭವ್ಯ ಸಂಪತ್ತು ಯುರೋಪಿಯನ್ನರನ್ನು ಭಾರತಕ್ಕೆ ಆಗಮಿಸುವಂತೆ ಮಾಡಿತ್ತು ಎಂದರು.

ಭಾರತಕ್ಕೆ ಬೆರಳೆಣಿಕೆಯಷ್ಟು ಮಂದಿ ಬ್ರಿಟಿಷರು ಆಗಮಿಸಿ ಇಲ್ಲಿನ ಅನೈಕ್ಯತೆ, ಅಸ್ಥಿರತೆ ಮತ್ತು ರಾಜಕೀಯ ಅರಾಜಕತೆಯನ್ನು ಬಂಡವಾಳ ಮಾಡಿಕೊಂಡು ನಮ್ಮನ್ನು ಎಲ್ಲಾ ರೀತಿಯಲ್ಲೂ ಶೋಷಣೆಗೆ ಒಳಪಡಿಸಿದರು.

ಅಂದಿನ ರಾಷ್ಟ್ರೀಯ ಹೋರಾಟಗಾರರು ತಾಯಿ ಮತ್ತು ತಾಯಿನಾಡನ್ನು ಸ್ವರ್ಗಕ್ಕಿಂತ ಶ್ರೇಷ್ಠ ಎಂದು ಭಾವಿಸಿದ್ದರು. ನಿಸ್ವಾರ್ಥ ಧೋರಣೆಯೊಂದಿಗೆ ಕೇವಲ ರಾಷ್ಟ್ರದ ಸ್ವತಂತ್ರ್ಯ ಮತ್ತು ಹಿತಶಕ್ತಿಯನ್ನು ಬಯಸಿದ್ದರು. ವಿವೇಕಾನಂದರ ಗುರಿಮುಟ್ಟುವ ತನಕ ನಿಲ್ಲದಿರಿ, ಗಾಂಧಿಜೀ ಅವರ ಮಾಡು ಇಲ್ಲವೇ ಮಡಿ ಎಂಬ ಘೋಷವಾಕ್ಯ, ನೇತಾಜಿಯವರ ಕ್ರಾಂತಿಕಾರಕ ಭಾಷಣಗಳು ಮತ್ತು ತಿಲಕರ ಸ್ವರಾಜ್ಯವೇ ನನ್ನ ಜನ್ಮಸಿದ್ಧ ಹಕ್ಕು ಇವುಗಳು ಅಂದಿನ ಭಾರತೀಯರ ಮೇಲೆ ಬೀರಿದ ಪ್ರಭಾವವನ್ನು ವಿವರಿಸಿದರು.

ಇಂದಿನ ಯುವಕರು ಕೇವಲ ಬರಹ ಮತ್ತು ಭಾಷಣಗಳಿಂದ ದೇಶಕಟ್ಟಲು ಸಾಧ್ಯವಿಲ್ಲ ಎಂಬ ಕಟುಸತ್ಯವನ್ನು ಅರಿತು, ತಮ್ಮ ಜವಾಬ್ದಾರಿ ಮತ್ತು ಕರ್ತವ್ಯ ನೆನೆದು ರಾಷ್ಟ್ರ, ಸಂವಿಧಾನ, ಸ್ವಾತಂತ್ರ್ಯ ಹಾಗೂ ದೇಶದ ಏಕತೆ ಮತ್ತು ಸಮಗ್ರತೆ ಕಾಪಾಡುವಲ್ಲಿ ತಲ್ಲೀನರಾಗಬೇಕು ಎಂದು ಕರೆ ನೀಡಿದರು. ಈ ವೇಳೆ ಡಾ.ವಿ.ಎಂ. ರಮೇಶ ಅವರನ್ನು ಸನ್ಮಾನಿಸಿ ಗೌರವಿಸಲಾಯಿತು.

ಕಾರ್ಯಕ್ರಮದಲ್ಲಿ ಪ್ರಾಂಶುಪಾಲ ಡಾ. ಬಿ.ಆರ್. ಜಯಕುಮಾರಿ, ಶೈಕ್ಷಣಿಕ ಡೀನ್ ಹಾಗೂ ಇತಿಹಾಸ ವಿಭಾಗದ ಮುಖ್ಯಸ್ಥ ಡಾ.ಎಚ್. ಶ್ರೀಧರ, ವಿಭಾಗದ ಅಧ್ಯಾಪಕ ಎ.ಆರ್. ನಂದೀಶ್, ಎನ್. ಜಯಲಕ್ಷ್ಮೀ, ಕಾಲೇಜಿನ ಅಧ್ಯಾಪಕರು ಹಾಗೂ ಇತಿಹಾಸ ವಿಭಾಗದ ವಿದ್ಯಾರ್ಥಿಗಳು ಇದ್ದರು.

MYSORE CITY Edition
Sep 04, 2025 Page No. 01
Powered by: erelego.com



# Final Year B.A Students Visited to Sri Venugopala Swamy Temple at KRS Back Water - 23.08.2025



